ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 7 ಸೋಮವಾರ 2025

₹4

ಸಂಪುಟ: 45 | ಸಂಚಿಕೆ: 347 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಬಾಬೂಜಿಗೆ ಪುಷ್ಪ ನಮನ...



ಹಸಿರು ಕ್ರಾಂತಿ ಹರಿಕಾರ, ರಾಷ್ಟ್ರ ನಾಯಕ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ್ ರಾಂ ಅವರ 118ನೇ ಜನ್ಮ ದಿನಾಚರಣೆ ಅಂಗವಾಗಿ ಮೈಸೂರು ನಗರಪಾಲಿಕೆ ಕಾಯಂ ಪೌರಕಾರ್ಮಿಕರ ಹಾಗೂ ಗುತ್ತಿಗೆ ಪೌರಕಾರ್ಮಿಕರ ಮಹಾಸಂಘದ ವತಿಯಿಂದ ಬಾಬೂಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ವೇಳೆ ಸಂಘದ ಗೌರವಾಧ್ಯಕ್ಷ ಎಂ.ವಡಿವೇಲು, ಉನ್ನತ ಸಮಿತಿ ಅಧ್ಯಕ್ಷ ಎನ್.ಮಾರ, ಪ್ರಧಾನ ಕಾರ್ಯದರ್ಶಿ ಟಿ.ಶ್ರೀನಿವಾಸ್, ಅಧ್ಯಕ್ಷ ಆರ್.ನರಸಿಂಹ, ಪ್ರಧಾನ ಕಾರ್ಯದರ್ಶಿ ಜಿ.ಮಂಜುನಾಥ್, ಉಪಾಧ್ಯಕ್ಷ ಎಂ.ರಾಜೀವ್ (ದೊರೆ), ಸಂಘಟನಾ ಕಾರ್ಯದರ್ಶಿ ಪಿಟಿಸಿ ಬನ್ನಾರಿ, ಅಮಾಸೆ, ಮಹದೇವ್, ಶಿವ, ನಂಜುಂಡ, ಸಾಗರ್ ಇನ್ನಿತರರು ಉಪಸ್ಥಿತರಿದ್ದರು.



ಡಾ.ಬಾಬು ಜಗಜೀವನ್‌ರಾಂ ಅವರ ಜನ್ಮದಿನದ ಪ್ರಯುಕ್ತ ಅವರ ಪ್ರತಿಮೆಗೆ ಹರಳಯ್ಯ ಚರ್ಮಕಾರ ಖಾದಿ ಗ್ರಾಮೋದ್ಯೋಗ ಸಂಘದ ಅಧ್ಯಕ್ಷ ಬಿ.ಪ್ರಸಾದ್ ಮಾಲಾರ್ಪಣೆ ಮಾಡಿ, ನಮನ ಸಲ್ಲಿಸಿದರು. ಈ ವೇಳೆ ಮುಖಂಡರಾದ ಪುಟ್ಟರಾಜು, ಸುಭಾಷ್, ಲೋಕೇಶ್, ಶಂಕರ್ ಇನ್ನಿತರರು ಉಪಸ್ಥಿತರಿದ್ದರು.



ಡಾ.ಬಾಬು ಜಗಜೀವನ್‌ರಾಂ ಅವರ ಜನ್ಮದಿನದ ಅಂಗವಾಗಿ ಮೈಸೂರು ನಗರ ಕಾಂಗ್ರೆಸ್ ಕಾರ್ಮಿಕರ ವಿಭಾಗದ ವತಿಯಿಂದ ಬಾಬೂಜಿ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ವಿಭಾಗದ ಅಧ್ಯಕ್ಷ ಸ್ಟೀಫನ್, ಹೆಚ್.ಎಂ. ಅಂಕಯ್ಯ, ಕಾರ್ಯದರ್ಶಿ ರವಿ, ಸಿದ್ದರಾಜು, ಶಿವರುದ್ರ ಹಾಗೂ ಮುಖಂಡರಿದ್ದರು



ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಮೈಸೂರು ಜಿಲ್ಲಾ ಸಮಿತಿಯಿಂದ ಹಸಿರುಕ್ರಾಂತಿ ಹರಿಕಾರ ಡಾ.ಬಾಬು ಜಗಜೀವನ್‌ರಾಂ ಅವರ 118ನೇ ಜಯಂತಿ ಅಂಗವಾಗಿ ಮೈಸೂರಿನ ರೈಲ್ವೆ ನಿಲ್ದಾಣದ ಬಳಿಯಿರುವ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಲಾಯಿತು. ಚಿತ್ರದಲ್ಲಿ ಜಿಲ್ಲಾಧ್ಯಕ್ಷ ಶಂಕರ್, ನಾಗರಾಜು, ಶ್ರೀನಿವಾಸ್, ಸ್ವಾಮಿ, ಜಯಶಿವು, ರಾಚಪ್ಪ, ಸಿದ್ದರಾಜು, ರಂಜಿತ್, ಶ್ರೀನಿವಾಸ್ ಹುಣಸೂರು, ಮಾದೇಶ್, ಶ್ರೀನಿವಾಸ್ ನಂಜನಗೂಡು, ರಾಜು ಇದ್ದರು.

ಮೇ 2ರಂದು ಸಾಮೂಹಿಕ ಉಪನಯನ

ಮೈಸೂರು,ಏ.6–ಮೈಸೂರಿನ ಬ್ರಾಹ್ಮಣ ಧರ್ಮ ಸಹಾಯ ಸಭಾ ವತಿಯಿಂದ ತ್ರಿಮತಸ್ಥ ಬ್ರಾಹ್ಮಣ ವಟುಗಳಿಗೆ ಮೇ 2ರಂದು ಶ್ರೀ ಶಂಕರ ಜಯಂತಿ ಪ್ರಯುಕ್ತ ಉಪನಯನ ಹಮ್ಮಿಕೊಳ್ಳಲಾಗಿದೆ. ಆಸಕ್ತರು 10 ದಿನಗಳ ಮುಂಚೆ ಹೆಸರನ್ನು ನೋಂದಾಯಿಸಿಕೊಳ್ಳಬೇಕೆಂದು ಕೋರಲಾಗಿದೆ. ಕಚೇರಿ ಸಮಯ ಬೆಳಗ್ಗೆ 9.30ರಿಂದ ಮಧ್ಯಾಹ್ನ 1, ಸಂಜೆ 5ರಿಂದ ರಾತ್ರಿ 8ರವರೆಗೆ ಇರುತ್ತದೆ.

ನಾಮ ನಿರ್ದೇಶಿತ ಸದಸ್ಯರ ಆಯ್ಕೆಗೆ ಅರ್ಜಿ ಆಹ್ವಾನ

ಮೈಸೂರು: ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ ನಿಯಮಿತ ವತಿಯಿಂದ ವಿವಿಧ ಯೋಜನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡುವ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಗೆ 2 ವರ್ಷಗಳ ಅವಧಿಗೆ ಒಬ್ಬ ಅಧಿಕಾರೇತರ ಸದಸ್ಯರನ್ನು ಆಯ್ಕೆ ಮಾಡಬೇಕಾಗಿದ್ದು, ಸದಸ್ಯರಾಗಬಯಸುವ ವಿಶ್ವಕರ್ಮ ಜನಾಂಗದವರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿದಾರರು ವಿಶ್ವಕರ್ಮ ಜಾತಿ ಪತ್ರ ಲಗತ್ತಿಸಬೇಕು. ನಿಗಮದಲ್ಲಿ ಅನುಷ್ಠಾನಗೊಳಿಸುತ್ತಿರುವ ಪಂಚವೃತ್ತಿ ಯೋಜನೆಗಳ ಪರಂಪರಾಗತವಾಗಿ ಸ್ವಂತ ನಿರ್ವಹಿಸಿರುವ ಅನುಭವ ಹೊಂದಿರಬೇಕು. ಅರ್ಜಿದಾರರು ಯಾವುದೇ ಕ್ರಿಮಿನಲ್ ಮೊಕದ್ದಮೆ/ಶಿಕ್ಷೆ ಅನುಭವಿಸಿರಬಾರದು. ಅರ್ಜಿದಾರರು ಸರಳ ಸಜ್ಜನಿಕೆ ಹಾಗೂ ಇತರರೊಂದಿಗೆ ಗೌರವಾನ್ವಿತವಾಗಿ ವರ್ತಿಸಬೇಕು. ಈ ಎಲ್ಲಾ ದಾಖಲಾತಿಗಳೊಂದಿಗೆ ಏಪ್ರಿಲ್ 17 ರೊಳಗೆ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ದೂ.ಸಂ: 0821–2341194 ಅನ್ನು ಸಂಪರ್ಕಿಸಬೇಕು.

ನಕಲಿ ದಾಖಲೆ ನೀಡಿ ಸಾಲ ಪಡೆದು ವಂಚನೆ; ದಂಪತಿ ವಿರುದ್ಧ ಪೊಲೀಸರಿಗೆ ಬ್ಯಾಂಕ್ ದೂರು

ಮೈಸೂರು,ಏ.6–ನಿವೇಶನದ ನಕಲಿ ದಾಖಲೆಗಳನ್ನು ನೀಡಿ ದಂಪತಿ ಬ್ಯಾಂಕ್‌ನಿಂದ 26 ಲಕ್ಷ ರೂ. ಸಾಲ ಪಡೆದು ವಂಚಿಸಿರುವುದಾಗಿ ಮೈಸೂರಿನ ಕುವೆಂಪುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕರ್ನಾಟಕ ಬ್ಯಾಂಕ್ ಸರಸ್ವತಿಪುರಂ ಶಾಖೆಯ ವ್ಯವಸ್ಥಾಪಕ ಪ್ರಶಾಂತ್, ಮೀನಾಕ್ಷಿ ಹಾಗೂ ಗಣೇಶ್ ಬಾಬು ದಂಪತಿ ವಿರುದ್ಧ ದೂರು ನೀಡಿದ್ದಾರೆ. ಈ ದಂಪತಿ ವ್ಯಾಪಾರ ಉದ್ದೇಶಕ್ಕಾಗಿ 26 ಲಕ್ಷ ರೂ. ಸಾಲ ಪಡೆದಿದ್ದರು. 2019ರ ನವೆಂಬರ್ 2ರಂದು ಮೀನಾಕ್ಷಿ ಅವರ ಖಾತೆಗೆ ಹಣ ವರ್ಗಾವಣೆಯಾಗಿತ್ತು. ಆದರೆ ಅವರು ಸಾಲಕ್ಕಾಗಿ ಅರ್ಜಿ ಸಲ್ಲಿಸಿದ ವೇಳೆ ಬೋಗಾದಿ ರಾಜರಾಜೇಶ್ವರಿ ನಗರದಲ್ಲಿ ಇಲ್ಲದ ನಿವೇಶನಕ್ಕೆ ನಕಲಿ ದಾಖಲೆಗಳನ್ನು ಸೃಷ್ಟಿಸಿ, ಬ್ಯಾಂಕ್‌ಗೆ ಸಲ್ಲಿಸಿದ್ದಲ್ಲದೆ, ಸಾಲದ ಮೊತ್ತವನ್ನೂ ಮರುಪಾವತಿ ಮಾಡದೆ ವಂಚಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಹಿರಿಯರು 'ಮನೆಮದ್ದು' ಮೊರೆ ಹೋಗುವುದು ಒಳ್ಳೆಯದು

ಮೈಸೂರು, ಏ.6(ಎಸ್‌ಪಿಎನ್)– ಪ್ರತಿಯೊಬ್ಬರು ತಮ್ಮ ನಿತ್ಯಕರ್ಮಗಳ 'ದಿನಚರಿ' ಹಾಗೂ 'ನಿತ್ಯ ಆಹಾರ' ಸೇವನೆ ಬಗ್ಗೆ ನಿರ್ಲಕ್ಷ್ಯವಹಿಸಬಾರದು ಎಂದು ಚಾಮರಾಜನಗರ ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಆಯುರ್ವೇದ ತಜ್ಞ ಡಾ.ಶ್ರೀನಿವಾಸ್ ಕೊತಬಾಳ್ ಕಿವಿಮಾತು ಹೇಳಿದರು.

ಮೈಸೂರು ವಿದ್ಯಾರಣ್ಯಪುರಂನ ಡಿಜಿಟಿಎಂ ಶಾಲೆ ಮುಂಭಾಗದ ಹಳೆ ಸಮುದಾಯ ಭವನದಲ್ಲಿ ಜನಚೈತನ್ಯ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಹಿರಿಯ ನಾಗರಿಕರಿಗೆ 'ಆರೋಗ್ಯ ಪೂರ್ಣ ಜೀವನ ಕ್ರಮ: ಒಂದು ಸಂವಾದ' ವಿಚಾರ ಸಂಕಿರಣದಲ್ಲಿ ಮಾತನಾಡಿದರು.



ಹಿರಿಯ ನಾಗರಿಕರಿಗೆ 'ಆರೋಗ್ಯ ಪೂರ್ಣ ಜೀವನ ಕ್ರಮ: ಒಂದು ಸಂವಾದ' ಕಾರ್ಯಕ್ರಮ.

ಅಧಿಕ ರಕ್ತದೊತ್ತಡ, ಮಧುಮೇಹ ಕಾಯಿಲೆಗಳಿಗೆ ನಿಯಂತ್ರಣ ಸಾಧಿಸಬೇಕಾದರೆ, ಹಿರಿಯರು 'ಮನೆ ಮದ್ದು'ಗಳನ್ನು ಉಪಯೋಗಿಸುವುದನ್ನು ಕಲಿಯಬೇಕು. ವಾರಕ್ಕೊಮ್ಮೆ ಎಣ್ಣೆಸ್ನಾನ, ಬೇವಿನಕಡ್ಡಿ, ಹತ್ತಿಕಡ್ಡಿಯಿಂದ ಹಲ್ಲುಗಳನ್ನು ಉಜ್ಜುವುದು ಸೇರಿದಂತೆ ಸಣ್ಣಪುಟ್ಟ ಆರೋಗ್ಯ ಸಮಸ್ಯೆಗಳಿಗೆ 'ಮನೆ ಮದ್ದು'ಗಳ ಬಗ್ಗೆ ಹಿರಿಯರಿಂದ ಕಲಿತುಕೊಳ್ಳಲು ಪ್ರಯತ್ನಿಸಬೇಕು ಎಂದು ತಿಳಿಸಿದರು.

ದಿನನಿತ್ಯ ಆಹಾರ ಸೇವನೆಯಲ್ಲಿ ಬೆಳಗ್ಗೆ ರಾಜನಂತೆ, ಮಧ್ಯಾಹ್ನ ರಾಣಿಯಂತೆ, ರಾತ್ರಿ ಭಿಕ್ಷುಕನಂತೆ ಆಹಾರ ಸೇವನೆ ಮಾಡುವುದನ್ನು ರೂಢಿಸಿಕೊಳ್ಳಬೇಕು. ಇಲ್ಲದಿದ್ದರೆ, ನಮ್ಮ ದೈನಂದಿನ ಜೀವನ ಏರುಪೇರಾಗುತ್ತದೆ. ಇದಕ್ಕೆ ಅವಕಾಶ ಕೊಡದಂತೆ ಎಲ್ಲರೂ ಎಚ್ಚರವಹಿಸಬೇಕು ಎಂದು ಸಲಹೆ ನೀಡಿದರು.

40–50 ವರ್ಷಗಳ ಹಿಂದೆ ದಂತ ವೈದ್ಯರಿಗೆ ಹೆಚ್ಚಿನ ಕೆಲಸವೇ ಇರಲಿಲ್ಲ. ಏಕೆಂದರೆ, ನಮ್ಮ ಪೂರ್ವಜರು ಆಯುರ್ವೇದ ಬಳಕೆಯಿಂದಾಗಿ ಹಲ್ಲುಗಳಿಗೆ ಸಂಬಂಧಿಸಿದ ರೋಗಗಳು ಕಡಿಮೆ ಇತ್ತು. ಇಂದು ನಗರದ ಗಲ್ಲಿಗಲ್ಲಿಗಳಲ್ಲಿ ಡೆಂಟಲ್ ಕ್ಲಿನಿಕ್‌ಗಳು ತಲೆಯೆತ್ತಿವೆ. ಏಕೆಂದರೆ ನಮ್ಮ ಜೀವನ ಶೈಲಿಯಿಂದ ಹೊಸ ಹೊಸ ರೋಗಗಳು ಕಾಣಿಸಿಕೊಳ್ಳುತ್ತಿವೆ ಎಂದು ಎಚ್ಚರಿಸಿದರು. ಈ ವೇಳೆ ಹಿರಿಯ ಆಯುರ್ವೇದ ತಜ್ಞೆ ಡಾ.ರೂಪ ಶ್ರೀನಿವಾಸ, ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಲಕ್ಷ್ಮಣ್ ಸೇರಿದಂತೆ ಇತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.04.2025 ಸೋಮವಾರ, ಮಳೆ ನಕ್ಷತ್ರ: ರೇವತಿ 31.03.2025ರಿಂದ 12.04.2025 ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಪುಷ್ಯ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀರಾಮ ಸೇವಾ ಚಾರಿಟಬಲ್ ಟ್ರಸ್ಟ್‌ನ ಅಂಗಸಂಸ್ಥೆ ಶ್ರೀರಾಮ ಸೇವಾ ಮಂಡಲಿ:** 72ನೇ ವರ್ಷದ ಶ್ರೀ ರಾಮೋತ್ಸವ, ಬೆಳಗ್ಗೆ ವೈದಿಕ ಸಮೂಹದಿಂದ ಶ್ರೀ ರಾಮಚಂದ್ರ ಸ್ವಾಮಿಗೆ ಪಂಚಾಮೃತಭಿಷೇಕ, ರುದ್ರಾಭಿಷೇಕ, ಸಹಸ್ರ ನಾಮಾದಿ ಅರ್ಚನೆಗಳು, ನವಗ್ರಹ ಪೂಜೆ, ಸೂರ್ಯ ನಮಸ್ಕಾರ, ರಾಮಾಯಣ ಪಾರಾಯಣ, ಸಂಜೆ 6.30ಕ್ಕೆ ಡಾ. ಬಿ.ಎಸ್. ಶ್ರೀಕಾಂತನ್ ಅವರಿಂದ ಸಂಗೀತ ಮತ್ತು ದೇವರನಾಮ ಸಂಗೀತ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ವಿದ್ಯಾರಣ್ಯಪುರಂ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕುತ್ತಿಗೆ ಹಾಗೂ ಬೆನ್ನು ನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಅಧಿಕ ರಕ್ತದೊತ್ತಡ ಮತ್ತು ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ಗಂಟೆಗೆ.

■ **ಭಾರತ್ ಸ್ಕೌಟ್ಸ್ & ಗೈಡ್ಸ್, ಮೈಸೂರು ಜಿಲ್ಲೆ:** 2023–24ನೇ ಸಾಲಿನಲ್ಲಿ ರಾಜ್ಯ ಪ್ರಶಸ್ತಿ ಪಡೆದ ಕಬ್ಸ್, ಬುಲ್ ಬುಲ್ಸ್, ಸ್ಕೌಟ್ಸ್, ರೋವರ್ಸ್ ಮತ್ತು ರೇಂಜರ್ಸ್ ಮಕ್ಕಳಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಸ್ಥಳ: ಶ್ರೀ ಜಯ ಚಾಮರಾಜೇಂದ್ರ ಸ್ಕೌಟ್ಸ್ & ಗೈಡ್ಸ್ ಕೇಂದ್ರ ಕಚೇರಿ, ಹಳೇ ಜಿಲ್ಲಾಧಿಕಾರಿ ಕಚೇರಿ ಹಿಂಭಾಗ, ಬೆಳಗ್ಗೆ 10ಕ್ಕೆ.

■ **ಶ್ರೀರಾಮಮಂದಿರ:** ಶ್ರೀರಾಮಚಂದ್ರ ಸ್ವಾಮಿಯವರ 50ನೇ ವರ್ಧಂತ್ಯುತ್ಸವ, ಸೀತಾ ಕಲ್ಯಾಣ, ಶ್ರೀರಾಮ ಪಟ್ಟಾಭಿಷೇಕ, ಶ್ರೀ ಆದಿತ್ಯಾದಿ ನವಗ್ರಹಗಳ ವಾರ್ಷಿಕೋತ್ಸವ, ಬೆಳಗ್ಗೆ 9ಕ್ಕೆ ಶಶಾಂಕ ಹೋಮ (ಚಂದ್ರ ಗ್ರಹ), ಸಂಜೆ 6.30ಕ್ಕೆ ಶ್ರೀ ತ್ಯಾಗರಾಜ ಸಂಗೀತ ಸಭಾದಿಂದ ವಿದುಷಿ ಮಾಧುರಿ ಕೌಶಿಕ್ ಅವರಿಂದ ಸಂಗೀತ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, 2ನೇ ಮುಖ್ಯರಸ್ತೆ, 16ನೇ ಕ್ರಾಸ್, ಜಯನಗರ.

■ **ವ್ಯವಸ್ಥಾಪಕರು:** ಹೈ ಲೈಫ್ ಎಕ್ಸ್‌ಪೋ, ಸ್ಥಳ: ರಾಡಿಸನ್ ಬ್ಲೂ ಪ್ಲಾಜಾ ಹೋಟೆಲ್, ಮೈಸೂರು, ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ.

■ **ಸುಯೋಗ್ ಆಸ್ಪತ್ರೆ, ಸುಯೋಗ್ ಕಾಲೇಜು ಆಫ್ ನರ್ಸಿಂಗ್, ಸುಯೋಗ್ ಇನ್‌ಸ್ಟಿಟ್ಯೂಟ್ ಆಫ್ ಅಲೈಡ್ ಹೆಲ್ತ್ ಸೈನ್ಸಸ್:** ವಿಶ್ವ ಆರೋಗ್ಯ ದಿನಾಚರಣೆ–2025, ಉದ್ಘಾಟನೆ: ಹಿರಿಯ ಸಲಹಾ ತಜ್ಞ ವೈದ್ಯ ಡಾ. ಪ್ರೇಮನಾಥ್, ಅಧ್ಯಕ್ಷತೆ: ಸುಯೋಗ್ ಆಸ್ಪತ್ರೆ, ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ಮುಖ್ಯ ಅತಿಥಿ: ನೈಪುಣ್ಯ ಶಾಲೆಯ ಅಧ್ಯಕ್ಷ ರಘು ಕೌಟಿಲ್ಯ, ಸುಯೋಗ್ ಆಸ್ಪತ್ರೆಯ ಟ್ರಸ್ಟಿ ಶ್ರೀಮತಿ ಸುಧಾ ಯೋಗಣ್ಣ, ಸ್ಥಳ: ಸುಯೋಗ್ ಆಸ್ಪತ್ರೆ ಸಭಾಂಗಣ, ರಾಮಕೃಷ್ಣನಗರ, ಬೆಳಗ್ಗೆ 10.30ಕ್ಕೆ.

■ **ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನ (ಮೈಸೂರು), ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಬೆಂಗಳೂರು), ಪಿ.ಆರ್. ತಿಪ್ಪೇಸ್ವಾಮಿ ಅಧ್ಯಯನ ಪೀಠ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿವಿ:** ಪಿಆರ್‌ಟಿ ಪ್ರಶಸ್ತಿ ಪ್ರದಾನ ಸಮಾರಂಭ, ಪ್ರಶಸ್ತಿ ಪ್ರದಾನ: ಕುವೆಂಪು ವಿವಿ ವಿಶ್ರಾಂತ ಕುಲಪತಿ ಡಾ. ಕೆ. ಚಿದಾನಂದಗೌಡ, ಮುಖ್ಯ ಅತಿಥಿ: ಮೈಸೂರು ವಿವಿ ಕುಲಪತಿ ಡಾ. ಎನ್.ಕೆ. ಲೋಕನಾಥ್, ಪ್ರಶಸ್ತಿ ಪುರಸ್ಕೃತರು: ಮುಖವೀಣೆ ಅಂಜನಪ್ಪ (ಜಾನಪದ), ಶ್ರೀಮತಿ ಸುಧಾ ಮನೋಹರ್ (ಚಿತ್ರಕಲೆ), ಪ್ರಾಸ್ತಾವಿಕ ಮತ್ತು ಪಿಆರ್‌ಟಿ ಅವರ ಬಗ್ಗೆ ಮಾಹಿತಿ: ರಾಜ್ಯ ಮಾಹಿತಿ ಆಯುಕ್ತ ರುದ್ರಣ್ಣ ಹರ್ತಿಕೋಟೆ, ಸ್ಥಳ: ಬಿಎಂಶ್ರೀ ಸಭಾಂಗಣ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಬೆಳಗ್ಗೆ 11 ಗಂಟೆಗೆ

■ **ಶ್ರೀ ವಿಷ್ಣು ಸಂಕಲ್ಪ ಜ್ಯೋತಿಷ್ಯಾಲಯ:** ಜ್ಯೋತಿಷ್ಯ ಕೇಂದ್ರ ಉದ್ಘಾಟನಾ ಸಮಾರಂಭ, ದಿವ್ಯ ಸಾನ್ನಿಧ್ಯ: ಯೋಗನರಸಿಂಹಸ್ವಾಮಿ ದೇವಸ್ಥಾನ ಸಂಸ್ಥಾಪಕರಾದ ಪ್ರೊ.ಭಾಷ್ಯಂ ಸ್ವಾಮೀಜಿ, ಉದ್ಘಾಟನೆ: ಶಾಸಕ ಕೆ.ಹರೀಶ್‌ಗೌಡ, ಸ್ಥಳ: 1617, 15ನೇ ಕ್ರಾಸ್, ಮಾರುತಿ ಟೆಂಟ್ ರಸ್ತೆ, ಜನತಾನಗರ, ಬೆಳಗ್ಗೆ 11.30ಕ್ಕೆ.

■ **ಶ್ರೀ ಶಂಕರ ಜಯಂತಿ ಸಭಾ:** ಶ್ರೀ ರಾಮನವಮಿ ಕಾರ್ಯಕ್ರಮ, ವಿದ್ವಾನ್ ಶ್ರೀನಿಧಿ ಶಿರೂರು ಮತ್ತು ಸಂಗಡಿಗರಿಂದ ಕೊಳಲು ವಾದನ, ಸ್ಥಳ: ಸಭಾದ ಆವರಣ, ತೆಂಗಿನ ತೋಪು, ಸರಸ್ವತಿಪುರಂ, ಸಂಜೆ 5 ರಿಂದ.

■ **ಶ್ರೀ ಗಾಯಿತ್ರಿ ರಾಮಮಂದಿರ:** ಶ್ರೀ ರಾಮನವಮಿ ಅಂಗವಾಗಿ ಶ್ರೀರಾಮ ತಾರಕ ಹೋಮ, ಆರ್.ಎಸ್. ನಾಯ್ಡುನಗರದ ಶ್ರೀ ಪ್ರಸನ್ನ ವಿಠಲ ಭಜನಾ ಮಂಡಳಿಯ ಶ್ರೀಮತಿ ದಾಕ್ಷಾಯಿಣಿ ಮತ್ತು ಸಂಗಡಿಗರಿಂದ ಭಕ್ತಿ ಗೀತೆಗಳ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ರಾಜೇಂದ್ರನಗರ, ಸಂಜೆ 6 ಗಂಟೆಗೆ.

■ **ಶ್ರೀ ಸೀತಾರಾಮ ದೇವಾಲಯ:** ಶ್ರೀ ರಾಮನವಮಿ, ಶ್ರೀದೇವಿ ಭಜನಾ ಮಂಡಳಿಯಿಂದ ಗಾಯನ, ಸ್ಥಳ: ದೇವಸ್ಥಾನದ ಪ್ರಾಂಗಣ, ಪಂಚವಟಿ, ಸನ್ಮಾರ್ಗ, ಸಿದ್ಧಾರ್ಥನಗರ, ಸಂಜೆ 6 ಗಂಟೆಗೆ.

■ **ಶ್ರೀ ರಾಮ ಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್:** 31ನೇ ಶ್ರೀರಾಮ ನವಮಿ ಸಂಗೀತೋತ್ಸವ–2025, ಸಂಜೆ 5.15ಕ್ಕೆ ಅನಘ–ಶೃತ–ವಿಕ್ರಮ್ ಭಾರದ್ವಾಜ್ ಅವರಿಂದ ಗಾಯನ, ಸಂಜೆ 6.15ಕ್ಕೆ ವಿದ್ವಾನ್ ಎನ್.ಆರ್. ಪ್ರಶಾಂತ್ ಅವರಿಂದ ಗಾಯನ, ವಿದ್ವಾನ್ ಕೇಶವ ಮೋಹನ್‌ಕುಮಾರ್–ಪಿಟೀಲು, ವಿದ್ವಾನ್ ಎಸ್.ಪ್ರಶಾಂತ್ –ಮೃದಂಗ, ವಿ॥ ಆರ್.ಶ್ರೀಧಿ–ಘಟಂ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿವಿ ಮೊಹಲ್ಲಾ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ–ಡಾ.ನಾ.ವೊಗಸಾಲೆ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಆಧಾರ ಶಿಲೆ, ಮೈಸೂರು ಸುತ್ತಲಿನ ಪ್ರಾಗೈತಿಹಾಸಿಕ ತಾಣಗಳ ಪರಿಚಯ ಮಾಲಿಕೆ. ಪ್ರಸ್ತುತಿ: ಡಾ.ರಾಮದಾಸ್ ರೆಡ್ಡಿ, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಶಾಂತಲಾ ವಟ್ಟಂ, ವ್ಯಾಖ್ಯಾನ–ಕೆ.ಎಲ್.ಪದ್ಮಿನಿ ಹೆಗಡೆ, 6.50–ರೈತರಿಗೆ ಸಲಹೆ, 7.15–ಭರವಸೆ ಹೊನಲು–ವೈದ್ಯರ ಕಿವಿಮಾತು, ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಯೋಗ ಕುರಿತ ವಿಶೇಷ ಸರಣಿ, ಮಹಾಯೋಗ–ವಿಷಯ: ಯೋಗದಿಂದ ಆರೋಗ್ಯ ಮತ್ತು ದೈಹಿಕ ಬದಲಾವಣೆ, ಭಾಗವಹಿಸುತ್ತಾರೆ–ಡಾ.ವಿಶ್ವನಾಥ್, ನಿರ್ಮಾಣ –ನಂದನ್‌ಕುಮಾರ್ ಎಲ್.ಒ., 8.35–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ) ಹಿರಿಯ ಕಾದಂಬರಿಕಾರರಾದ ಡಾ.ಎಸ್.ಎಲ್.ಭೈರಪ್ಪ ಅವರೊಂದಿಗೆ ಡಾ.ಕೃಷ್ಣಮೂರ್ತಿ ಹನೂರ್ ಅವರು ನಡೆಸಿದ್ದ ಸಂವಾದದ ಮೊದಲ ಭಾಗ, 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಹೆಚ್.ಕೆ.ನರಸಿಂಹಮೂರ್ತಿ ಮತ್ತು ಹೆಚ್.ಎನ್.ಭಾಸ್ಕರ್–ಯುಗಳ ವೈಯೋಲಿನ್ ವಾದನ, 11.00 –ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ, ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್ ಬಿ. ಮತ್ತು ಚಿನ್ಮಯಿ ಕೆ.ಎಸ್., 12.05–ವನಿತಾ ವಿಹಾರ, 12.35–ದೇವರನಾಮ–12.45–ನಮ್ಮ ಆರೋಗ–ವಿಶ್ವ ಆರೋಗ್ಯ ದಿನಾಚರಣೆಯ ಸಂದರ್ಭದಲ್ಲಿ ಎಲ್ಲರಿಗೂ ಮಾನಸಿಕ ಆರೋಗ್ಯ ಕುರಿತು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಹಾಗೂ ಕೆ.ಆರ್. ಆಸ್ಪತ್ರೆಯ ಮನೋವೈದ್ಯ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥ ಡಾ.ರವೀಶ್. ಬಿ.ಎನ್. ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ –ಬೇದ್ರೆ ಮಂಜುನಾಥ್, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, ಪ್ರಧಾನಮಂತ್ರಿ ರಾಷ್ಟ್ರೀಯ ಜೇನು ಸಾಕಣೆ ಮತ್ತು ಜೇನು ಅಭಿಯಾನ ಕುರಿತು ಮಾಹಿತಿ, 1.20–ಭಾವಗೀತೆಗಳು, ಸ್ಟಾನ್ಲಿ ಪಾರ್ಕರ್, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಚಾರುಮತಿ ರಾಮಚಂದ್ರನ್–ಹಾಡುಗಾರಿಕೆ, 4.00–ಮಹಿಳಾರಂಗ, 4.45–ಹಿಂದಿ ಪಾಠ, ಪ್ರಸ್ತುತಿ: ಕಿಶೋರ್ ಎಂ.ಕಾಕಡೆ, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ಕೋಳಿ ಸಾಕಾಣಿಕೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಕೆ.ಆರ್.ನಗರ ತಾಲೂಕು ಬ್ಯಾಡರಹಳ್ಳಿಯ ಕೃಷಿಕ ದಂಪತಿ ಬಿ.ಯೋಗೀಶ್ ಹಾಗೂ ಬಿ.ಎನ್.ಗಾನವಿ ಅವರೊಂದಿಗೆ ಸಂವಾದ. ಪ್ರಸ್ತುತಿ: ಎನ್.ಕೇಶವ ಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ–ವಿಶ್ವ ಆರೋಗ್ಯ ದಿನಾಚರಣೆಯ ಸಂದರ್ಭದಲ್ಲಿ ಆರೋಗ್ಯ, ಆಯುರ್ವೇದ ಮತ್ತು ಯುವಜನತೆ ಕುರಿತು ಮಾತುಕತೆ. ಭಾಗವಹಿಸುತ್ತಾರೆ–ಮೈಸೂರಿನ ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಸ್ನಾತಕೋತ್ತರ ವೈದ್ಯಕೀಯ ಪದವಿ ವಿದ್ಯಾರ್ಥಿಗಳಾದ ಡಾ.ಶ್ವೇತಾ ಜೈನ್ ಹೆಚ್.ಎ, ಡಾ.ದರ್ಶಿನಿ ಗೋವೆಕರ್ ಮತ್ತು ಡಾ.ಅನಿತಾ ಶಶಿಕಾಂತ್ ಜಾಧವ್ ನಡೆಸಿಕೊಡುತ್ತಾರೆ–ಜನನಿ ಡಿ.ರಾವ್, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಎಂ.ನಾರಾಯಣ ಐಯ್ಯಂಗಾರ್–ಗೋಟುವಾದ್ಯ, 10.00–ರೂಪಕ ಹರಿಯನ್ನರಸಿದ ವನಿತೆಯರು, ರಚನೆ ಮತ್ತು ಪ್ರಸ್ತುತಿ: ಡಾ.ಸುಕನ್ಯಾ ಪ್ರಭಾಕರ್, 10.30–ಸವಿನೆನಪು, ಹಳೆಯ ಕನ್ನಡ ಚಿತ್ರಗೀತೆಗಳು.

■ **ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಜೈ ಅನ್ನಪೂರ್ಣೇಶ್ವರಿ ಟ್ರಸ್ಟ್:** ಶ್ರೀ ದುರ್ಗಾ ಹೋಮ, 19ನೇ ವಾರ್ಷಿಕೋತ್ಸವ, ಸಂಜೆ 6ಕ್ಕೆ ಭಕ್ತಿಗೀತೆಗಳು ಮತ್ತು ನೃತ್ಯ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಬೋಗಾದಿ.

■ **ಅರಳಿಕಟ್ಟೆ ಶ್ರೀರಾಮ ದೇವಸ್ಥಾನ ಧಾರ್ಮಿಕ ಮತ್ತು ದಾನದತ್ತಿ:** ಶ್ರೀ ವಿಶ್ವ ವಸು ನಾಮಸಂವತ್ಸರದ ಶ್ರೀರಾಮ ನವಮಿ ಪ್ರಯುಕ್ತ ಸಂಗೀತ ಕಾರ್ಯಕ್ರಮ, ಕೃಷ್ಣಮೂರ್ತಿಪುರಂನ ಶ್ರೀ ರಾಮ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಆವರಣ, ಜಯಲಕ್ಷ್ಮೀ ವಿಲಾಸ ರಸ್ತೆ, ಚಾಮರಾಜಪುರಂ, ಸಂಜೆ 6.30ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್:** 135ನೇ ವರ್ಷದ ಶ್ರೀ ರಾಮೋತ್ಸವ, ಸಂಗೀತೋತ್ಸವ–2025, ಶಾಸ್ತ್ರೀಯ ಸಂಗೀತ ವಿದ್ವಾನ್ ಅಶ್ವತ್ಥನಾರಾಯಣ ಅವರಿಂದ, ವೈಯಲಿನ್: ವಿದ್ವಾನ್ ಸಿ.ಎಸ್.ಅನೂರೂಪ್, ಮೃದಂಗ–ವಿದ್ವಾನ್ ಡಾ.ಅನಿಲ್ಕಡ್ ಆರ್.ಜಯಕೃಷ್ಣ, ಘಟಂ: ವಿದ್ವಾನ್ ಶರತ್ ಕೌಶಿಕ್, ಸ್ಥಳ: ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮ ಪೇಟೆ, ಸಂಜೆ 6.30ರಿಂದ.


ಕೃಷ್ಣರಾಜನಗರದಲ್ಲಿ ಇಂದು

■ **ಶ್ರೀರಾಮ ಸೇವಾ ಸಮಿತಿ:** ಶ್ರೀ ರಾಮೋತ್ಸವ, ಉತ್ತರ ಕನ್ನಡ ಜಿಲ್ಲೆಯ ವಾಂಚಳ್ಳಿ (ಸಿದ್ದಾಪುರ ತಾ.)ಯ ವಿದುಷಿ ಶ್ರೀಮತಿ ಉಮಾ ಶಶಿಧರ್ ಭಟ್ ಅವರಿಂದ ಭರತನಾಟ್ಯ, ಸ್ಥಳ: ದೇವಸ್ಥಾನದ ಸಭಾಂಗಣ, ಚಂದ್ರಮೌಳೇಶ್ವರ ರಸ್ತೆ, ಕೆ.ಆರ್. ನಗರ, ಸಂಜೆ.

ಮಾದಹಳ್ಳಿಯಲ್ಲಿ ಇಂದು

■ **ಮಾದಹಳ್ಳಿ ಗ್ರಾಮಸ್ಥರು:** ಶ್ರೀ ವೀರಭದ್ರೇಶ್ವರ, ಶ್ರೀ ಮಹದೇಶ್ವರ, ಶ್ರೀ ಬಸವೇಶ್ವರ ಸ್ವಾಮಿ ಮತ್ತು ಶ್ರೀ ಸಿದ್ದಪ್ಪಾಜಿ ದೇವಸ್ಥಾನಗಳ ಜೀರ್ಣೋದ್ಧಾರ, ಅಂಕಸ್ಥಾಪನೆ ಹಾಗೂ ಕಳಸಾರೋಹಣ ಮಹೋತ್ಸವ, ಮುಂಜಾನೆ 4 ಗಂಟೆಗೆ ಯಂತ್ರ ಸ್ಥಾಪನೆ, ಅಷ್ಟಬಂಧನ, ಪ್ರಾಣ ಪ್ರತಿಷ್ಠ ಕಳಾನ್ಯಾಸ, ಪ್ರಧಾನ ಹೋಮ ಕುಂಭಾಭಿಷೇಕ, ನೇತ್ರೋನ್ಮಿಲನ, ಮಹಾಮಂಗಳಾರತಿ, ಬೆಳಗ್ಗೆ 10.30ರಿಂದ ಧಾರ್ಮಿಕ ಸಭಾ ಕಾರ್ಯಕ್ರಮ ದಿವ್ಯ ಸಾನ್ನಿಧ್ಯ ಮತ್ತು ಕಳಸಾರೋಹಣ: ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು, ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳು, ದಿವ್ಯ ಸಮ್ಮುಖ: ದೇವನೂರು ಶ್ರೀ ಗುರು ಮಲ್ಲೇಶ್ವರ ಮಹಾಸಂಸ್ಥಾನ ದಾಸೋಹ ಮಠದ ಶ್ರೀ ಮಹಾಂತ ಸ್ವಾಮಿಗಳು, ಕನಕಪುರದ ಶ್ರೀ ದೇಗುಲ ಮಠದ ಡಾ. ಶ್ರೀ ಚನ್ನಬಸವಸ್ವಾಮಿ, ಅಧ್ಯಕ್ಷತೆ: ಶಾಸಕ ಜಿ.ಟಿ.ದೇವೇಗೌಡ, ಉದ್ಘಾಟನೆ: ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಯಡಿಯೂರಪ್ಪ, ಸ್ಥಳ: ದೇವಸ್ಥಾನದ ಪ್ರಾಂಗಣ, ಮಾದಹಳ್ಳಿ ಗ್ರಾಮ, ಜಯಪುರ ಹೋಬಳಿ, ಮೈಸೂರು ತಾಲೂಕು.





ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಏಪ್ರಿಲ್ 7 ಸೋಮವಾರ 2025

ಸಂಪುಟ: 45 | ಸಂಚಿಕೆ: 347 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಪ್ರಧಾನಿ ಮೋದಿ ಅವರಿಂದ ದೇಶದ ಮೊದಲ ವರ್ಟಿಕಲ್ ರೈಲ್ವೆ ಸೇತುವೆ ಲೋಕಾರ್ಪಣೆ

ರಾಮೇಶ್ವರಂ, ಏ.6– ರಾಮನವಮಿಯ ದಿನದಂದೇ ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಮೊದಲ ವರ್ಟಿಕಲ್ ರೈಲ್ವೆ ಸೇತುವೆಯನ್ನು ಲೋಕಾರ್ಪಣೆ ಮಾಡಿದ್ದಾರೆ. ಹೊಸ ಸೇತುವೆ ತಮಿಳುನಾಡು ಪ್ರವಾಸೋದ್ಯಮಕ್ಕೆ ಇನ್ನಷ್ಟು ವೇಗವನ್ನು ನೀಡಲಿದ್ದು, ಈ ಸೇತುವೆ ರಾಮೇಶ್ವರಂಗೆ ತೆರಳುವ ಭಕ್ತರಿಗೆ ಹಾಗೂ ಧನುಷ್ಕೋಡಿ ಪ್ರವಾಸಿಗರಿಗೆ ಹೆಚ್ಚು ಅನುಕೂಲವಾಗಲಿದೆ.

ಪ್ರಧಾನಿ ಮೋದಿ ಭಾನುವಾರ ಮಧ್ಯಾಹ್ನ 12.30ರಲ್ಲಿ ತಮಿಳುನಾಡಿನ ಪಂಬನ್ ಮತ್ತು ರಾಮೇಶ್ವರಂ ನಡುವಿನ ದೇಶದ ಮೊದಲ ವರ್ಟಿಕಲ್ ಲಿಫ್ಟ್ ಸಮುದ್ರ ಸೇತುವೆ ಯನ್ನು ಲೋಕಾರ್ಪಣೆ ಮಾಡಿದರು. ಇದೇ ವೇಳೆ ಅವರು ರಸ್ತೆ ಸೇತುವೆಯಿಂದ ರೈಲು ಮತ್ತು ಹಡಗು ಸಂಚಾರಕ್ಕೆ ಹಸಿರು ನಿಶಾನೆ ತೋರಿದರು.

ಈ ಹಳೇ ಪಂಬನ್ ರೈಲು ಸೇತುವೆಯನ್ನು 111 ವರ್ಷಗಳ ಹಿಂದೆ ಇಲ್ಲಿ ನಿರ್ಮಿಸಿದ್ದು, ಹಳೆಯ ಸೇತುವೆ ಶಿಥಿಲಗೊಂಡಿದ್ದರಿಂದ ಪಕ್ಕದಲ್ಲಿಯೇ ಹೊಸ ಸೇತುವೆ ನಿರ್ಮಿಸಲಾಗಿದೆ. ಹಳೇ ಸೇತುವೆ ಮಾನವ ಸಹಿತವಾಗಿ ಕಾರ್ಯನಿರ್ವಹಿಸುತ್ತಿತ್ತು. ಆದರೆ ಈ ನೂತನ ಸೇತುವೆ ಮಾನವ ರಹಿತವಾಗಿ ಕಾರ್ಯನಿರ್ವಹಿಸುತ್ತದೆ. ಇದು ಎಲೆಕ್ಟ್ರಿಕಲ್ ಆಟೋಮೆಕ್ಯಾನಿಕಲ್ ತಂತ್ರಜ್ಞಾನ ಒಳಗೊಂಡಿದೆ. ಹಳೇ ಸೇತುವೆ ತೆರೆದುಕೊಳ್ಳಲು 45 ನಿಮಿಷ ಕಾಲಾವಕಾಶ ತೆಗೆದುಕೊಳ್ಳುತ್ತಿತ್ತು. ಆದರೆ ಹೊಸ ಬ್ರಿಡ್ಜ್ 5.3 ನಿಮಿಷದಲ್ಲಿ ತೆರೆದುಕೊಳ್ಳಲಿದೆ.

ಸುಮಾರು 2.5 ಕಿಲೋ ಮೀಟರ್ ಉದ್ದದ ದೇಶದ ಮೊದಲ ವರ್ಟಿಕಲ್ ಲಿಫ್ಟ್ ರೈಲು ಸೇತುವೆ ಇದಾಗಿದ್ದು, ಆರ್ಥಿಕತೆ, ಪ್ರವಾಸೋದ್ಯಮ ಮತ್ತು ಯಾತ್ರಾರ್ಥಿಗಳಿಗೆ ಅನುಕೂಲವಾಗಲಿದೆ. ಮುಖ್ಯಭೂಮಿಯಿಂದ ರಾಮೇಶ್ವರಂಗೆ 5 ನಿಮಿಷದಲ್ಲಿ ಪ್ರಯಾಣಿಸಬಹುದಾಗಿದೆ. ಒಟ್ಟು 535 ಕೋಟಿ ರೂಪಾಯಿ ವೆಚ್ಚದಲ್ಲಿ ಈ ವರ್ಟಿಕಲ್ ಲಿಫ್ಟ್ ಸೇತುವೆಯನ್ನು ನಿರ್ಮಾಣ ಮಾಡಲಾಗಿದೆ.



ತಮಿಳುನಾಡಿನ ರಾಮೇಶ್ವರಂನ ಪಂಬನ್‌ನಲ್ಲಿ ದೇಶದ ಮೊದಲ ವರ್ಟಿಕಲ್ ರೈಲ್ವೆ ಸೇತುವೆಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಉದ್ಘಾಟಿಸಿದರು.

ಏನಿದರ ವಿಶೇಷತೆ?: ಇದು ಭಾರತದಲ್ಲಿ ಮೊದಲ ಬಾರಿಗೆ ನಿರ್ಮಾಣವಾದ ವರ್ಟಿಕಲ್ ಲಿಫ್ಟ್ ರೈಲ್ವೆ ಸೇತುವೆಯಾಗಿದೆ. ಈ ಸೇತುವೆ ರಾಮೇಶ್ವರಂ (ಪಂಬನ್ ದ್ವೀಪ) ಮತ್ತು ತಮಿಳುನಾಡಿನ ಮುಖ್ಯ ಭೂಭಾಗವಾದ ಮಂಡಪಂ ಅನ್ನು ಸಂಪರ್ಕಿಸುತ್ತದೆ. ಈ ಸೇತುವೆಯ ಮಧ್ಯ ಭಾಗವು 17 ಮೀಟರ್ ಎತ್ತರಕ್ಕೆ ಲಂಬವಾಗಿ ಮೇಲೇರಬಲ್ಲದು. ಇದರಿಂದಾಗಿ ದೊಡ್ಡ ಜಹಾಜುಗಳು ಮತ್ತು ಹಡಗುಗಳು ಸೇತುವೆಯ ಕೆಳಗಿನಿಂದ ಸುಲಭವಾಗಿ ದಾಟಬಹುದು. ಹಳೆಯ ಪಂಬನ್ ಸೇತುವೆ ತೆರೆಯಲು 45 ನಿಮಿಷಗಳಷ್ಟು ಸಮಯ ತೆಗೆದುಕೊಳ್ಳುತ್ತಿತ್ತು ಮತ್ತು ತಾಂತ್ರಿಕ ಸಮಸ್ಯೆಗಳು ಹೆಚ್ಚಾಗಿದ್ದವು. ಆದರೆ ಈ ಹೊಸ ಸೇತುವೆಯನ್ನು ತೆರೆಯಲು ಕೇವಲ 5 ನಿಮಿಷಗಳಷ್ಟೇ ಬೇಕಾಗುತ್ತದೆ. ಇದು ಸಮಯ ಉಳಿತಾಯ ಮತ್ತು ಸಮರ್ಥ ಕಾರ್ಯ ನಿರ್ವಹಣೆಯನ್ನು ಖಾತ್ರಿಪಡಿಸುತ್ತದೆ. ಈ ಸೇತುವೆಯನ್ನು ಡಬಲ್ ಟ್ರ್ಯಾಕ್‌ಗೆ ಅನುಗುಣವಾಗಿ ವಿನ್ಯಾಸಗೊಳಿಸಲಾಗಿದೆ, ಇದರಿಂದ ಎರಡು ರೈಲುಗಳು ಏಕಕಾಲದಲ್ಲಿ ಸಂಚರಿಸಬಹುದು. ಇದು ಭವಿಷ್ಯದಲ್ಲಿ ರೈಲು ಸಂಚಾರದ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಈ ಸೇತುವೆಯನ್ನು ಹೆಚ್ಚಿನ ವೇಗದ ರೈಲುಗಳಿಗೆ ಸಹ ಸೂಕ್ತವಾಗುವಂತೆ ನಿರ್ಮಿಸಲಾಗಿದೆ. ಇದು ಆಧುನಿಕ ರೈಲ್ವೆ ಸಾರಿಗೆಗೆ ದೀರ್ಘಕಾಲೀನ ಪರಿಹಾರವನ್ನು ಒದಗಿಸುತ್ತದೆ. ಸೇತುವೆಯ ಒಟ್ಟು ಉದ್ದ 2.08 ಕಿಲೋಮೀಟರ್ ಆಗಿದ್ದು, ಇದು ಮನ್ನಾರ್ ಕೊಲ್ಲಿಯಲ್ಲಿ ಸಮುದ್ರದ ಮೇಲೆ ನಿರ್ಮಾಣವಾಗಿದೆ. ಇದು ರಾಮೇಶ್ವರಂ ದ್ವೀಪವನ್ನು ಮುಖ್ಯ ಭೂಭಾಗದೊಂದಿಗೆ ಸಂಪರ್ಕಿಸುವ ಪ್ರಮುಖ ಮಾರ್ಗವಾಗಿದೆ. ಇದರ ವಿನ್ಯಾಸ ಮತ್ತು ನಿರ್ಮಾಣವು ಆಧುನಿಕ ಎಂಜಿನಿಯರಿಂಗ್‌ನ ಉತ್ತಮ ಉದಾಹರಣೆಯಾಗಿದೆ. ಇದನ್ನು ವಿಶ್ವದ ಅತ್ಯುತ್ತಮ ಆರ್ಕಿಟೆಕ್ಚರ್‌ಗಳಲ್ಲಿ ಒಂದೆಂದು ಪರಿಗಣಿಸಲಾಗುತ್ತಿದೆ. ಹೊಸ ತಂತ್ರಜ್ಞಾನದ ಬಳಕೆಯಿಂದ ಈ ಸೇತುವೆಯನ್ನು ಸಮುದ್ರದ ತೀವ್ರ ಪರಿಸ್ಥಿತಿಗಳನ್ನು ತಡೆದುಕೊಳ್ಳುವಂತೆ ಮತ್ತು ಸುರಕ್ಷಿತವಾಗಿ ಕಾರ್ಯನಿರ್ವಹಿಸುವಂತೆ ವಿನ್ಯಾಸಗೊಳಿಸಲಾಗಿದೆ.

ರಾಜ್ಯ ಸರ್ಕಾರದ ವಿರುದ್ಧ ಇಂದಿನಿಂದ ಬಿಜೆಪಿ

ಜನಾಕ್ರೋಶ ಯಾತ್ರೆ

• ಚಾಮುಂಡಿಬೆಟ್ಟದಲ್ಲಿ ಯಾತ್ರೆಗೆ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಚಾಲನೆ • ನಾಲ್ಕು ಹಂತಗಳಲ್ಲಿ ಮೇ3ರವರೆಗೆ ನಡೆಯಲಿರುವ ಯಾತ್ರೆ

ಮೈಸೂರು, ಏ.6(ಬಿಎಲ್‌ಯು)– ಅಗತ್ಯ ವಸ್ತುಗಳ ಬೆಲೆ ಏರಿಕೆ, ಗುತ್ತಿಗೆಯಲ್ಲಿ ಮುಸ್ಲಿಮರಿಗೆ ಮೀಸಲಾತಿ ಜಾರಿ ಸೇರಿದಂತೆ ರಾಜ್ಯ ಸರ್ಕಾರದ ಜನ ವಿರೋಧಿ ನೀತಿ ವಿರೋಧಿಸಿ ಬಿಜೆಪಿ ನಾಳೆ (ಏ.7)ಯಿಂದ ಮೈಸೂರಿನಿಂದ ಜನಾಕ್ರೋಶ ಯಾತ್ರೆ ಆರಂಭಿಸಲಿದೆ.

ಚಾಮುಂಡಿಬೆಟ್ಟದಲ್ಲಿ ನಾಳೆ ಮಧ್ಯಾಹ್ನ 3 ಗಂಟೆಗೆ ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ಪೂಜೆ ಸಲ್ಲಿಸುವ ಮೂಲಕ ಕೇಂದ್ರ ಸಚಿವ ಪ್ರಹ್ಲಾದ್ ಜೋಷಿ ಜನಾಕ್ರೋಶ ಯಾತ್ರೆಗೆ ಚಾಲನೆ ನೀಡಲಿದ್ದಾರೆ. ಈ ವೇಳೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆ ವಿಪಕ್ಷ ನಾಯಕ ಆರ್. ಅಶೋಕ್, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಮೈಸೂರು ನಗರಾಧ್ಯಕ್ಷ ಎಲ್. ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ ಸೇರಿದಂತೆ ಪ್ರಮುಖ ನಾಯಕರು ಭಾಗವಹಿಸಲಿದ್ದಾರೆ. ಚಾಮುಂಡಿಬೆಟ್ಟದಲ್ಲಿ ಯಾತ್ರೆಗೆ ಚಾಲನೆ ನೀಡಿದ ನಂತರ ನಗರದ ಲಷ್ಕರ್ ಮೊಹಲ್ಲಾದ ಸೆಂಟ್ರಲ್ ಪೋಸ್ಟ್ ಆಫೀಸ್ ವೃತ್ತದಲ್ಲಿ ಸಮಾವೇಶಗೊಂಡು ಅಲ್ಲಿಂದ ಗಾಂಧಿ ವೃತ್ತಕ್ಕೆ ಮೆರವಣಿಗೆಯಲ್ಲಿ ಸಾಗಿ, ಮಹಾತ್ಮ ಗಾಂಧಿ ಪ್ರತಿಮೆ ಮುಂದೆ ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಲಿದ್ದಾರೆ. ಬೆಲೆ ಹೆಚ್ಚಳ, ಮುಸ್ಲಿಂ ಓಲೈಕೆ, ದಲಿತ ಸಮುದಾಯದ ಹಣ ಲೂಟಿ, ರೈತ ವಿರೋಧಿ ನೀತಿ ಸೇರಿದಂತೆ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಮೈಸೂರಿನಲ್ಲಿ ಚಾಲನೆಗೊಳ್ಳುವ ಜನಾಕ್ರೋಶ ಯಾತ್ರೆ ರಾಜ್ಯಾದ್ಯಂತ ಸಂಚರಿಸಲಿದೆ.



ಪ್ರಹ್ಲಾದ್ ಜೋಷಿ

ಜನಾಕ್ರೋಶ ಯಾತ್ರೆಯು ಮೈಸೂರಿನಲ್ಲಿ ಆರಂಭಗೊಂಡು ನಾಲ್ಕು ಹಂತಗಳಲ್ಲಿ ವಿವಿಧ ಜಿಲ್ಲೆಗಳಲ್ಲಿ ಸಂಚರಿಸಿ ಮೇ 3ರಂದು ಅಂತ್ಯಗೊಳ್ಳಲಿದೆ. ಏಪ್ರಿಲ್ 7ರಿಂದ 12ರ ವರೆಗೆ ಮೊದಲ ಹಂತದ ಜನಾಕ್ರೋಶ ಯಾತ್ರೆಯು ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಕೊಡಗು, ಮಂಗಳೂರು, ■ 6ನೇ ಪುಟಕ್ಕೆ


ಬಂಡೀಪುರ ಹೆದ್ದಾರಿಯಲ್ಲಿ ರಾತ್ರಿ ಸಂಚಾರ ನಿಷೇಧ ಮುಂದುವರೆಸುವಂತೆ ಆಗ್ರಹಿಸಿ

ಪರಿಸರವಾದಿಗಳಿಂದ ಬೃಹತ್ ಪಾದಯಾತ್ರೆ

ಬಂಡೀಪುರ, ಏ.6(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಾತ್ರಿ ವಾಹನ ಸಂಚಾರ ನಿರ್ಬಂಧ ಹಿಂಪಡೆಯದಂತೆ ಆಗ್ರಹಿಸಿ, ಪರಿಸರ ಪ್ರೇಮಿಗಳು, ರೈತರು ಹಾಗೂ ಕಾಡಂಚಿನ ಗ್ರಾಮಗಳ ಜನ ಬೃಹತ್ ಪಾದಯಾತ್ರೆ ನಡೆಸಿ, ರಾತ್ರಿ ವಾಹನ ಸಂಚಾರ ನಿಷೇಧ ಮುಂದುವರೆಸುವಂತೆ ಆಗ್ರಹಿಸಿದರು.

ಬಂಡೀಪುರದಲ್ಲಿ ರಾತ್ರಿ ಸಂಚಾರ ನಿರ್ಬಂಧವನ್ನು ಹಿಂಪಡೆಯುವಂತೆ ಕೇರಳ ಸರ್ಕಾರ ಲಾಬಿ ಮಾಡುತ್ತಿರುವ ಹಿನ್ನೆಲೆಯಲ್ಲಿ ಪರಿಸರವಾದಿಗಳು 'ಬಂಡೀಪುರದ ಕಡೆ ನಮ್ಮ ನಡೆ' ಘೋಷಣೆಯೊಂದಿಗೆ ಇಂದು ಬೆಳಗ್ಗೆ ಆಯೋಜಿಸಿದ್ದ ಜನಜಾಗೃತಿ ಮೂಡಿಸುವ ಪಾದಯಾತ್ರೆಯಲ್ಲಿ ಮೈಸೂರು, ಬೆಂಗಳೂರು, ಗುಂಡ್ಲುಪೇಟೆ, ಬಂಡೀಪುರ ಕಾಡಂಚಿನ ಗ್ರಾಮಸ್ಥರು, ಕೇರಳ ಹಾಗೂ ತಮಿಳುನಾಡಿನ ಪರಿಸರವಾದಿಗಳು ಭಾಗವಹಿಸಿ, ಬಂಡೀಪುರ ಅರಣ್ಯದಲ್ಲಿನ ರಸ್ತೆಯಲ್ಲಿ ರಾತ್ರಿ ವೇಳೆ ಯಾವುದೇ ಕಾರಣಕ್ಕೂ ವಾಹನ ಸಂಚಾರ ಪುನರಾರಂಭಿಸಬಾರದು ಎಂದು ಒಕ್ಕೊರಲಿನಿಂದ ಒತ್ತಾಯಿಸಿದರು.





ಬಂಡೀಪುರದ ಮದ್ದೂರು ಚೆಕ್‌ಪೋಸ್ಟ್ ಬಳಿ ಬೃಹತ್ ಪ್ರತಿಭಟನಾ ಸಭೆಯಲ್ಲಿ ವನ್ಯಜೀವಿ ತಜ್ಞ ಸೇನಾನಿ ಮಾತನಾಡುತ್ತಿರುವುದು. ಮತ್ತೊಂದು ಚಿತ್ರದಲ್ಲಿ ಪರಿಸರವಾದಿಗಳ 'ಬಂಡೀಪುರದ ಕಡೆಗೆ ನಮ್ಮ ನಡಿಗೆ' ಜನಜಾಗೃತಿ ಪಾದಯಾತ್ರೆಯನ್ನು ಕಾಣಬಹುದು.

2.5 ಕಿ.ಮೀ. ಪಾದಯಾತ್ರೆ: ಸುಲ್ತಾನ್ ಬತೇರಿ ರಸ್ತೆಯಲ್ಲಿರುವ ಗುಂಡ್ಲುಪೇಟೆ ತಾಲೂಕಿನ ಕಗ್ಗಳದಹುಂಡಿ ■ 6ನೇ ಪುಟಕ್ಕೆ

ಅಯೋಧ್ಯೆ ಬಾಲರಾಮನಿಗೆ ಸೂರ್ಯ ತಿಲಕ



ಅಯೋಧ್ಯೆ, ಏ.6– ರಾಮನವಮಿ ಅಂಗವಾಗಿ ಅಯೋಧ್ಯೆಯ ರಾಮಮಂದಿರದಲ್ಲಿ ಭಾನುವಾರ ಬಾಲರಾಮನಿಗೆ ಸೂರ್ಯ ತಿಲಕ ಆಚರಣೆ ನಡೆಯಿತು. ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಸೂರ್ಯ ತಿಲಕದ ವಿಡಿಯೋವನ್ನು ಹಂಚಿಕೊಂಡಿದೆ.

ಅಲ್ಲದೇ ಶ್ರೀರಾಮ ನವಮಿಯಂದು ರಾಮಲಲ್ಲಾ ಮೂರ್ತಿಗೆ ಅಭಿಷೇಕದ ಫೋಟೋಗಳನ್ನು ಕೂಡಾ ಪೋಸ್ಟ್ ಮಾಡಿದೆ. ಶ್ರೀರಾಮ ನವಮಿ ಹಾಗೂ ಈ ಅದ್ಭುತ ಕ್ಷಣಕ್ಕಾಗಿ ಅಪಾರ ಸಂಖ್ಯೆಯ ಭಕ್ತಾದಿಗಳು ಬೆಳಗ್ಗೆಯಿಂದ ದೇವಾಲಯಕ್ಕೆ ಆಗಮಿಸುತ್ತಿದ್ದು, ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ. ಶ್ರೀರಾಮನ ಹಣೆಯ ಮೇಲಿನ ಸೂರ್ಯ ತಿಲಕವು ಮಧ್ಯಾಹ್ನ 12 ಗಂಟೆಗೆ ಪ್ರಾರಂಭವಾಗಿ ■ 6ನೇ ಪುಟಕ್ಕೆ

ಕಟೀಲ್‌ಗೆ ಮತ್ತೆ ರಾಜಕೀಯ ಸ್ಥಾನಮಾನ ಸಿಗಲಿ: ಮಧೂರು ದೇವಸ್ಥಾನದಲ್ಲಿ ಡಿಕೆಶಿ ಪ್ರಾರ್ಥನೆ!



ಕಟೀಲ್



ಡಿಕೆಶಿ

ಕಾಸರಗೋಡು, ಏ.6– ಬಿಜೆಪಿಯ ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್ ಅವರಿಗೆ ಮತ್ತೆ ರಾಜಕೀಯ ಸ್ಥಾನಮಾನ ಸಿಗಲಿ ಎಂದು ಮಧೂರು ದೇವಸ್ಥಾನದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಪ್ರಾರ್ಥಿಸಿದ್ದಾರೆ. ಕೇರಳದ ಕಾಸರಗೋಡಿನ ಮಧೂರು ಶ್ರೀ ಮದನಂತೇಶ್ವರ ಸಿದ್ಧಿ ವಿನಾಯಕ ದೇವಸ್ಥಾನದ ಬ್ರಹ್ಮಕಲಶೋತ್ಸವದ ಹಿನ್ನೆಲೆ ಡಿಕೆಶಿ ದೇವಸ್ಥಾನಕ್ಕೆ ಭೇಟಿ ನೀಡಿದ್ದರು. ನಂತರ ನಡೆದ ಸಭಾ ಕಾರ್ಯಕ್ರಮದಲ್ಲಿ ನಳಿನ್‌ಕುಮಾರ್ ಕಟೀಲ್ ಹಾಗೂ ಡಿ.ಕೆ.ಶಿವಕುಮಾರ್ ಒಂದೇ ವೇದಿಕೆಯಲ್ಲಿ ಜೊತೆಯಾಗಿದ್ದರು. ಈ ವೇಳೆ ಕಟೀಲ್ ಪರ ಡಿಕೆಶಿ ಬ್ಯಾಟಿಂಗ್ ಮಾಡಿದ್ದಾರೆ.

ನನ್ನ ಮಿತ್ರ, ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್ ಅವರನ್ನು ಮಾಜಿ ಅಂದುಕೊಳ್ಳುವುದು ಬೇಡ. ರಾಜಕಾರಣದಲ್ಲಿ ಯಾವುದೂ ಶಾಶ್ವತ ಅಲ್ಲ. ಹೀರೋ ಝೀರೋ ಆಗುತ್ತಾನೆ, ಝೀರೋ ಹೀರೋ ಆಗುತ್ತಾನೆ. ಭಗವಂತ ನಿಮ್ಮ ಎಲ್ಲಾ ವಿಘ್ನ ನಿವಾರಣೆ ಮಾಡಿ ಮತ್ತೆ ಈ ರಾಜ್ಯದಲ್ಲಿ ಸೇವೆ ಮಾಡುವ ಅವಕಾಶ ಕೊಡಲಿ. ಮತ್ತೆ ನಿಮಗೆ ಅವಕಾಶ ಸಿಗಲಿ ಎಂದು ನಾನೂ ಕೂಡ ಪ್ರಾರ್ಥನೆ ಮಾಡುತ್ತೇನೆ ಎಂದರು.


ಬೇಕಾಗಿದ್ದಾರೆ
Telecaller
ಬೇಕಾಗಿದ್ದಾರೆ
ಹುಡುಗರು/ಹುಡುಗಿಯರು
ಸಂಬಳ- 25000/-
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
8884171888

ಬಹುಕೋಟಿ ಹಗರಣ: ಇಡಿಯಿಂದ ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಮಾಜಿ ಎಂಡಿ ಬಂಧನ

ಬೆಂಗಳೂರು, ಏ.6– ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಮಾಜಿ ಪ್ರಧಾನ ವ್ಯವಸ್ಥಾಪಕ ನಾಗರಾಜಪ್ಪ ಅವರನ್ನು ಏಪ್ರಿಲ್ 5ರಂದು ಬಂಧಿಸಲಾಗಿದೆ ಎಂದು ಜಾರಿ ನಿರ್ದೇಶನಾಲಯ ಭಾನುವಾರ ತಿಳಿಸಿದೆ. ಪಿಎಂಎಲ್ ವಿಶೇಷ ನ್ಯಾಯಾಲಯ 14 ದಿನಗಳ ಕಾಲ ಕಸ್ಟಡಿಗೆ ನೀಡಿದೆ ಎಂದು ಇಡಿ ಪ್ರಕಟಣೆಯಲ್ಲಿ ತಿಳಿಸಿದೆ.

ಕರ್ನಾಟಕದ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿ ಸೇರ್ಪಡೆಗೊಂಡಿರುವ ಭೋವಿ ಸಮುದಾಯದ ಕಲ್ಯಾಣಕ್ಕಾಗಿ KBDCಯಿಂದ 97 ಕೋಟಿ ರೂಪಾಯಿ ದುರುಪಯೋಗ ಮತ್ತು ವರ್ಗಾವಣೆ ಆರೋಪದ ಮೇಲೆ ಪೊಲೀಸರು ಅನೇಕ ಎಫ್‌ಐಆರ್ ದಾಖಲಿಸಿದ್ದರು. ಪ್ರಕರಣ ಸಂಬಂಧ ಏ.4 ರಂದು ಇಡಿ ಅಧಿಕಾರಿಗಳು ಭೋವಿ ■ 6ನೇ ಪುಟಕ್ಕೆ





ನಕ್ಕರೆ ಅದೇ ಸ್ವರ್ಗ

ಹೆಂಡತಿ ಐಸಿಯುನಲ್ಲಿ ಕೋಮಾದಲ್ಲಿದ್ದಳು. ಡಾಕ್ಟರ್ ಏನು ಮಾಡಿದರೂ ಪ್ರಜ್ಞೆ ಬರಲೇ ಇಲ್ಲ. ಗಂಡ (ಡಾಕ್ಟರ್ ಜೊತೆ ಗೋಗರೆಯುತ್ತಿದ್ದ: ಸಾರ್
ನನ್ನ ಹೆಂಡತಿಗಿನ್ನೂ ಬರೀ 30 ವರ್ಷ ಪ್ರಾಯ! ಆಕೆಯನ್ನು ಉಳಿಸಿಕೊಡಿ.
ಹೆಂಡತಿಗೆ ತಕ್ಷಣ ಪ್ರಜ್ಞೆ ಬಂದು ಹೇಳಿದಳು!
ಅದು ಸುಳ್ಳು ಡಾಕ್ಟ್ರೇ.... ನನಗಿನ್ನೂ ಬರೇ 28 ವರ್ಷ ಪ್ರಾಯ!

ಮೈಸೂರು ಮಿತ್ರ

ಸೋಮವಾರ, 7 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

'ಎಲ್ಲರನ್ನು ಗೌರವಿಸುವುದು ನಮ್ಮ ಮಾನವೀಯತೆ, ಅದನ್ನು ಉಳಿಸಿಕೊಳ್ಳುವುದು ಅವರ ಯೋಗ್ಯತೆ'

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { 'ಅಂದು ಬಾ ಅಂದ್ರೆ ಮಿಂದು ಬಂದ'

ನಿಮ್ಮ ಪತ್ರಗಳು

ಬಂಡೀಪುರ ಹೆದ್ದಾರಿಯಲ್ಲಿ ರಾತ್ರಿ ವಾಹನ ಸಂಚಾರ ಬೇಡವೇ ಬೇಡ



ಮಾನ್ಯರೆ,

ಬಂಡೀಪುರದಲ್ಲಿ ರಾತ್ರಿ ವಾಹನ ಸಂಚಾರ ನಿಷೇಧ ತೆರವು ಬೇಡ ಎಂದು ಚಾಮರಾಜನಗರದಲ್ಲಿ ಪರಿಸರವಾದಿಗಳು ಸಾಂಕೇತಿಕ ಪ್ರತಿಭಟನೆ ನಡೆಸಿರುವುದು ತುಂಬಾ ಶ್ಲಾಘನೀಯ. ಇತ್ತೀಚಿನ ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಹುಲಿಗಳ ಸಂತತಿ ಕ್ಷೀಣಿಸುತ್ತಾ ಬಂದಿರುವುದು ನಮ್ಮ ಅರಣ್ಯ ಸಚಿವ ಈಶ್ವರ್ ಖಂಡ್ರೆ ಅವರಿಗೆ ಗೊತ್ತಿದ್ದರೂ, ಇತ್ತೀಚೆಗೆ ದೆಹಲಿಯಲ್ಲಿ ಬಂಡೀಪುರ ಹುಲಿ ಪ್ರದೇಶದಲ್ಲಿ ಹಾದು ಹೋಗುವ ಎರಡು ರಾಷ್ಟ್ರೀಯ ಹೆದ್ದಾರಿಗಳಲ್ಲಿ ರಾತ್ರಿ ಸಂಚಾರ ನಿಷೇಧ ವಿಷಯ ಅತ್ಯಂತ ಸೂಕ್ಷ್ಮವಾಗಿದ್ದು ಮುಖ್ಯಮಂತ್ರಿಯವರ ಜೊತೆ ಸಮಾಲೋಚಿಸಿ, ಕಾನೂನು ತಜ್ಞರ ಅಭಿಪ್ರಾಯ ಪಡೆದು ಸರ್ವ ಸಮ್ಮತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿರುವುದು ತುಂಬಾ ಬೇಸರದ ವಿಷಯ.

ವಯನಾಡು ಸಂಸದರಾದ ಪ್ರಿಯಾಂಕಾ ವಾದ್ರ ಅವರು ಲೋಕಸಭಾ ಉಪ ಚುನಾವಣೆ ಸಂದರ್ಭದಲ್ಲಿ ವಯನಾಡು ಕ್ಷೇತ್ರದ ಜನತೆಗೆ ನೀಡಿರುವ ಆಶ್ವಾಸನೆ ಮೇಲೆ ಅವರನ್ನು ತೃಪ್ತಿಪಡಿಸುವ ಸಲುವಾಗಿ ರಾತ್ರಿ ವೇಳೆ ವಾಹನಗಳು ಸಂಚರಿಸಲು ಅನುವು ಮಾಡಿಕೊಟ್ಟರೆ, ಅರಣ್ಯದಲ್ಲಿ ಸ್ವಚ್ಛಂದವಾಗಿ ರಾತ್ರಿ ವೇಳೆ ಓಡಾಡುವ ವನ್ಯಜೀವಿ ರಕ್ಷಣೆಗೆ ತೊಡಕಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಹಾಗೂ ಅವುಗಳ ಸಂತತಿ ಕ್ಷೀಣಿಸುತ್ತಾ ಹೋಗಿ ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಬಹುದು. ಇದೇ ವಿಷಯಕ್ಕೆ, ವಿವಿಧೆಡೆ ಪರಿಸರ ಪ್ರೇಮಿಗಳು ರಾಷ್ಟ್ರೀಯ ಹೆದ್ದಾರಿ 766ರಲ್ಲಿ ಮೂರು ಕಿ.ಮೀ. ದೂರ ಪಾದಯಾತ್ರೆ ಹಮ್ಮಿಕೊಂಡಿರುವುದು ಮೆಚ್ಚುವಂತದ್ದು. ನಮ್ಮ ರಾಜ್ಯ ಸರ್ಕಾರ ಯಾವುದೇ ಒತ್ತಡಕ್ಕೂ ಮಣಿಯದೆ, ಬಂಡೀಪುರ ಹೆದ್ದಾರಿ ರಾತ್ರಿ ವಾಹನ ಸಂಚಾರ ನಿಷೇಧ ಮುಂದುವರೆಸುವುದು ಸೂಕ್ತ. **–ಬೆಸಗರಹಳ್ಳಿ ರವಿಪ್ರಸಾದ್, ಮೈಸೂರು.**

ರೈತರ ಬಡವನಾಗಿಸಿರುವುದೇ ಒಂದು ಮಹಾ ದುರಂತ

ಮಾನ್ಯರೆ,

ಜೈ ಜವಾನ್ ಜೈ ಕಿಸಾನ್ ಎಂಬ ಘೋಷಣೆ ಬರಿ ವೇದಿಕೆಯ ಭಾಷಣದಲ್ಲಿ ಕೇಳುವಂತಾಗಿದೆ. ರೈತ ಎಂದರೆ ದೇಶದ ಬೆನ್ನೆಲುಬು ಅನ್ನದಾತ ಎಂದು ಹೇಳುವ ನಾವುಗಳು ದೇಶದಲ್ಲಿ ರೈತರ ಸಂಕಷ್ಟಗಳನ್ನು, ಆತ್ಮಹತ್ಯೆಗಳ ಬಗ್ಗೆ ಅವಲೋಕಿಸಬೇಕಾದುದು ಆಹಾರ ತಿನ್ನುವ ಪ್ರತಿಯೊಬ್ಬರು ಯೋಚಿಸಬೇಕಾದದು ಮಾನವ ಧರ್ಮ.

ತಂತ್ರಜ್ಞಾನದಿಂದ ಮತ್ತು ತಾಂತ್ರಿಕವಾಗಿ ಹೊಸ ಹೊಸ ಆವಿಷ್ಕಾರಗಳನ್ನು ಕಂಡು ಹಿಡಿದಿರಬಹುದು ಆದರೆ ತಂತ್ರಜ್ಞಾನದಿಂದ ಕೃತಕವಾಗಿ ಬೆಳೆ ಬೆಳೆಯಲು ಸಾಧ್ಯವಾಗದು. ಸಂಶೋಧನೆಯ ಆವಿಷ್ಕಾರಗಳು ನಡೆಯದೆ ಇದ್ದರೂ ಮನುಷ್ಯ ಬದುಕಬಹುದು. ಆದರೆ ರೈತನು ವ್ಯವಸಾಯ ಮಾಡದೆ ಬೆಳೆ ಬೆಳೆಯದೆ ಇದ್ದರೆ ಮನುಷ್ಯನ ಸ್ಥಿತಿ ಏನಾಗುತ್ತದೆ ಎಂದು ಯೋಚಿಸಬೇಕಾಗುತ್ತದೆ.

ಉಪವಾಸದಿಂದ ಇರಬೇಕು ಎಂಬ ವಿಚಾರ ಗೊತ್ತಿದ್ದರೂ ರೈತನು ಬೆಳೆದ ಬೆಳೆಗೆ ಬೆಲೆ ಇಲ್ಲದೆ ರಸ್ತೆಯಲ್ಲಿ ಗೋಳಾಡುತ್ತಾ ಇರುವಾಗ ಅವರ ಪರ ಇದ್ದು, ಬೆಂಬಲ ಬೆಲೆಗೆ ಎಲ್ಲರೂ ಕೈಜೋಡಿಸಿ ಬೆಲೆ ಕೊಡಿಸುವ ಬದಲು, ಪ್ರೇಕ್ಷಕರಾಗಿ ನೋಡುವ ಮನಸ್ಸು ಬದಲಾಗಬೇಕು. ದೇಶದ ಅಗ್ರಗಣ್ಯರು ಕೂಡ ರೈತ ಬೆಳೆದ ಬೆಳೆಯ ಆಹಾರವನ್ನೆ ಸೇವಿಸಬೇಕು. ಕೂಲಿ ಕಾರ್ಮಿಕರು ಕೂಡ ರೈತ ಬೆಳೆದ ಬೆಳೆಯ ಆಹಾರವನ್ನೆ ಸೇವಿಸಬೇಕು. ಹೀಗೆ ದೇಶದಲ್ಲಿ ಪ್ರಮುಖರಲ್ಲಿ ಪ್ರಮುಖವಾಗಿರುವವರು ರೈತರು, ತಾವು ಬೆಳೆದ ಬೆಳೆಗೆ ಬೆಲೆ ಇಲ್ಲದೆ ಆತ್ಮಹತ್ಯೆಗೆ ಶರಣಾಗುತ್ತಿರುವುದು ದೇಶದ ರೈತರ ಸಂಕಷ್ಟ ಸ್ಥಿತಿಯನ್ನು ತೋರಿಸುತ್ತದೆ. ಅನ್ನದಾತನೆ ಹಸಿವು ಎಂದು ಕೂತರೆ ದೇಶ ಏನಾಗಬಹುದು. ಅನ್ನ ಹಾಕುವವನನ್ನು ಸಾಲಗಾರರಿಗೆ ಮಾಡಿರುವ ದೇಶದ ಭವಿಷ್ಯ ಎತ್ತ ಸಾಗುತ್ತಿದೆ. ರೈತನನ್ನು ಹರಿದ ಅಂಗಿ, ಹರಿದ ಚಡ್ಡಿಯಲ್ಲಿ ಬಡವನಾಗಿ ಮಾಡಿದ ವ್ಯವಸ್ಥೆಗೆ ಧಿಕ್ಕಾರವಿರಲಿ.
–ಪಿ.ಸಿ.ಕಂಗಾಣಿಸೋಮು, ಕ್ಯಾತಮಾರನಹಳ್ಳಿ, ಮೈಸೂರು.

ಕಬಿನಿ ಬಡಾವಣೆ ರಸ್ತೆಗಳ ನಿರ್ವಹಣೆ ಯಾವಾಗ?

ಮಾನ್ಯರೆ,

ಮೈಸೂರಿನ ಶ್ರೀರಾಂಪುರದ ಕಬಿನಿ ಬಡಾವಣೆಯ ರಸ್ತೆಗಳು ಕಳೆದ 5–6 ವರ್ಷಗಳಿಂದ ಹಾಳಾಗಿ ಹೋಗಿದ್ದು, ಬಡಾವಣೆ ನಿವಾಸಿಗಳು ರಸ್ತೆಗಳ ನಿರ್ವಹಣೆ ಕಾಣದೆ ಬೇಸತ್ತು ಹೋಗಿದ್ದಾರೆ. ವಾಹನಗಳು ಓಡಿಸಲು ಜನ ನಿತ್ಯ ಪರದಾಡುವಂತಾಗಿದೆ. ಪಕ್ಕದ ಪ್ರೀತಿ ಬಡಾವಣೆ, ಕಂದಾಯ ಬಡಾವಣೆ, ಬಿಇಎಂಎಲ್ ಪಕ್ಕದ ಮುಖ್ಯ ರಸ್ತೆ (ಮಹಾಲಿಂಗೇಶ್ವರ ದೇವಸ್ಥಾನದ ಮುಖ್ಯ ರಸ್ತೆಗಳು) ಡಾಂಬರೀಕರಣ ಮಾಡುವ ದಿಸೆಯಲ್ಲಿ ಅಧಿಕಾರಿಗಳು ಗಮನ ಹರಿಸಬೇಕಾಗಿದೆ. ಈ ಬಗ್ಗೆ ಜನಪ್ರತಿನಿಧಿಗಳಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ ಕಬಿನಿ–ಮುಡಾ ಬಡಾವಣೆಗಳ ರಸ್ತೆಗಳನ್ನು ತ್ವರಿತವಾಗಿ ನಿರ್ವಹಣೆ ಮಾಡಿ ಇಲ್ಲಿನ ನಿವಾಸಿಗಳಿಗೆ ಮೂಲಸೌಕರ್ಯ ಕಲ್ಪಿಸಬೇಕೆಂದು ಮನವಿ. **–ಕಬಿನಿ ಬಡಾವಣೆ ನಿವಾಸಿಗಳು**

ಬಂಗಾರದೊಡ್ಡಿ ನಾಲೆಯ ಬಲ್ಲಿರಾ....?





ನನ್ನ ಸ್ನೇಹಿತರೊಬ್ಬರು ಕರೆ ಮಾಡಿ ಸಾರ್ ಬೆಂಗಳೂರಿನ ನನ್ನ ಗೆಳೆಯ ಹಾಗೂ ನೆಂಟರೊಬ್ಬರು ಚಲನಚಿತ್ರಗಳಿಗೆ ಹಾಗೂ ಧಾರಾವಾಹಿಗಳಿಗೆ ಸಂಭಾಷಣೆ ಬರೆಯುತ್ತಾರೆ. ಅವರ ಹೆಸರು ಜೆ.ಎಂ.ಪ್ರಹ್ಲಾದ್. ಹಲವು ಪುಸ್ತಕಗಳನ್ನು ಬರೆದಿದ್ದಾರೆ. ಅವರಿಗೆ ಮಲೆಯೂರು ಗುರುಸ್ವಾಮಿಯವರು ಬರೆದಿರುವ ಬಂಗಾರದೊಡ್ಡಿ ಎಂಬ ಚಾರಿತ್ರಿಕ ಕಾದಂಬರಿ ಬೇಕಂತೆ ಎಲ್ಲಿ ಸಿಗುವುದು?, ಕೊಡಿಸಿಕೊಡುವಿರಾ? ಎಂದು ಕೇಳಿದರು.

ನನ್ನ ಸ್ನೇಹಿತರಾದ ವಚನಕಾರ ದೇವರಾಜು ಅವರನ್ನು ವಿಚಾರಿಸಲಾಗಿ ಮೊಬೈಲ್ ಕರೆಯಲ್ಲಿಯೇ ಕಾದಂಬರಿಯ ಪೂರ್ಣ ಸಾರಾಂಶವನ್ನು ಹೇಳಿ ಪುಸ್ತಕ ನೀವು ಓದಲೇಬೇಕು ಸಾರ್, ಬಹಳ ಚೆನ್ನಾಗಿ ಬರೆದಿದ್ದಾರೆ ಎಂದು ಹೇಳಿದರು. ಮರುದಿನವೇ ಅವರು ಹೇಳಿದ ಶಿವರಾಂಪೇಟೆಯ ರಾಜೇಂದ್ರ ಪ್ರಿಂಟರ್ಸ್‌ಗೆ ಹೋಗಿ ಪ್ರಕಾಶಕರು ಆದ ಡಿ.ಎನ್.ಲೋಕಪ್ಪನವರನ್ನು ಕಂಡು ಎರಡು ಪ್ರತಿಗಳನ್ನು ಕೊಂಡು ತಂದೆ. ಅದೇ ಸಮಯಕ್ಕೆ ಚಿತ್ರನಟರಾದ ದಿ.ಅಶ್ವತ್‌ರವರ ಶತಮಾನೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿತರಾಗಿ ಜೆ.ಎಂ.ಪ್ರಹ್ಲಾದ್‌ರವರು ಬಂದಿದ್ದರು. ಅವರ ಭೇಟಿಯೂ ಆಯಿತು. ಅವರೊಟ್ಟಿಗೆ ಸಾಕಷ್ಟು ವಿಷಯಗಳ ಚರ್ಚೆಯೂ ಆಯಿತು. ಬಂಗಾರದೊಡ್ಡಿ ಕೃತಿಯ ಜೊತೆಗೆ ಇಬ್ಬರೂ ಬರೆದ ಪುಸ್ತಕಗಳ ವಿನಿಮಯವೂ ಆಯಿತು. ನನಗೆ ಅವರು ಕನ್ನಡ ಸಿನಿಮಾ **ಐತಿಹಾಸಿಕ ನೆಲೆಗಟ್ಟು** ಎಂಬ ಪುಸ್ತಕವನ್ನು ಉಡುಗೊರೆಯಾಗಿ ನೀಡಿದರು. ಅವರ ಪರಿಚಯದಿಂದ ನನಗೊಂದು ಸಾಹಿತ್ಯ ಭಂಡಾರವೇ ಸಿಕ್ಕಿದಂತಾಯಿತು.

70ಕ್ಕೂ ಹೆಚ್ಚು ಸಿನಿಮಾಗಳಿಗೆ ಹಾಗೂ ಹಲವು ಧಾರಾವಾಹಿಗಳಿಗೆ ಸಂಭಾಷಣೆಗಳನ್ನು ಬರೆದಿದ್ದಾರೆ. ಆರುನೂರಕ್ಕೂ ಹೆಚ್ಚು ಚಿತ್ರಗೀತೆ ಮತ್ತು ಬಹಳಷ್ಟು ಕೃತಿಗಳನ್ನು ಬರೆದಿದ್ದರೂ ಪ್ರಚಾರದಿಂದ ದೂರ. ಇವರ ಸ್ನೇಹದಿಂದ ನನಗೆ ಬಂಗಾರದೊಡ್ಡಿಯ ಪರಿಚಯವಾಯಿತು.

ಬಂಗಾರದೊಡ್ಡಿ ಪದವನ್ನು ಕೇಳಿದರೆ ಯಾರಿಗೂ ಅರ್ಥವಾಗದು. ಇದರ ಒಳಹೊಕ್ಕಾಗ ಮಾತ್ರ ವಿಸ್ಮಯಕರವಾದ ವಿಷಯವನ್ನು ತಿಳಿಯಬಹುದಾಗಿದೆ. 17ನೇ ಶತಮಾನದ ಕಾಲಘಟ್ಟದಲ್ಲಿ ಮೈಸೂರು ಸಂಸ್ಥಾನದಲ್ಲಿ ದೇವದಾಸಿಯು ಸುಳ್ಳು ಆರೋಪದ ಮಲಿನತೆಗೆ ಒಳಗಾಗಿಯೂ ತನ್ನ ಪಾವಿತ್ರ್ಯತೆಯನ್ನು ಎತ್ತಿ ಹಿಡಿದು ಜನೋಪಕಾರಿ ಕಾರ್ಯವಾಗಿ 5 ಮೈಲಿ ಉದ್ದದ 900 ಎಕರೆ ಪ್ರದೇಶಕ್ಕೆ ನೀರುಣಿಸುವ 65 ಕ್ಯೂಸೆಕ್ಸ್ ಸಾಮರ್ಥ್ಯದ ಕಾಲುವೆಯನ್ನು ನಿರ್ಮಿಸುವಂತೆ ಮಾಡಿದ ಮಹಿಳೆಯ ಅದ್ಭುತವಾದ ಕಥೆ ಇದೆ.

ತಿರುಚಿನಾಪಳ್ಳಿಯ ಓರ್ವ ದೇವದಾಸಿಯ ಮಗಳಾದ ಮನೋರಮೆ ರಾಜಕಾರಣದ ದಾಳಕ್ಕೆ ಸಿಲುಕಿ ದೊಡ್ಡಮ್ಮನಾಗಿ ಮೈಸೂರು ಸಂಸ್ಥಾನದ ರಾಜ ರಣಧೀರ ಕಂಠೀರವನ ಬಂಗಾರದವಳಾಗಿ ಕಡೆಗೆ ಶ್ರೀರಂಗಪಟ್ಟಣದಲ್ಲಿ ಬಂಗಾರದೊಡ್ಡಿ ನಾಲೆ ಆಗಿ ಹರಿಯುತ್ತಿರುವ ಕತೆಯು ಹೀಗೆ ಹಲವಾರು ದೇವದಾಸಿಯರು ಹಾಗೂ ಸೂಳೆಯರು ತಮ್ಮ ಸಂಪಾದನೆಯಿಂದ ಕೆರೆಕಟ್ಟೆಗಳನ್ನು ನಿರ್ಮಿಸಿದ ತ್ಯಾಗದ ಬದುಕು, ಕೆರೆಗಳನ್ನು ನುಂಗುವ ಭ್ರಷ್ಟರ ಕಣ್ಣು ತೆರೆಸುತ್ತದೆಯೇ?.

ಕೃಷ್ಣರಾಜಸಾಗರ ಅಣೆಕಟ್ಟೆಯಡಿ ಬರುವ ನೀರಾವರಿ ಉಪ ವಿಭಾಗದಲ್ಲಿ ಇಂಜಿನಿಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗಲೂ ಬಂಗಾರದೊಡ್ಡಿ ನಾಲೆಯ ಕಥೆ ನನಗೆ ತಿಳಿದಿರಲಿಲ್ಲ. ಹೆಸರಷ್ಟೆ ಪ್ರಚಲಿತವಾಗಿತ್ತು. ಮಂಡ್ಯ–ಮೈಸೂರಿನ ನಡುವೆ ಸಂಚರಿಸುವಾಗಲೆಲ್ಲ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಗೆ ಅಡ್ಡಲಾಗಿ ಕಟ್ಟಲ್ಪಟ್ಟಿದ್ದ ಮೇಲ್ಗಾಲುವೆಯನ್ನು(Aqueduct) ನೋಡುತ್ತಿದ್ದೆ. ಇದು ಕಲ್ಲು ಕಂಬಗಳು ಮತ್ತು ಚಪ್ಪಡಿಗಳಿಂದ ನಿರ್ಮಿಸಲಾಗಿದ್ದು ಸುಣ್ಣದ ಗಾರೆಯ ನಾಲಾ ಗೋಡೆಗಳು ಹಾಗೂ ನಾಲೆಯ ಮೇಲೆ ವಾಹನಗಳು ಸಂಚರಿಸಲು ರಸ್ತೆ ಇತ್ತು. 360 ವರ್ಷಗಳಾದರೂ ಇಂದಿಗೂ ಕಟ್ಟಡವು ಸುಭದ್ರವಾಗಿದೆ. ಎಕ್ಸ್‌ಪ್ರೆಸ್ ವೇ ಕಾರಣವಾಗಿ ನೂತನ ಮೇಲ್ಗಾಲುವೆ ನಿರ್ಮಾಣ ಆಗಿರುವುದರಿಂದ ನಿರುಪಯುಕ್ತಗೊಳಿಸಿದ್ದಾರೆ. ಈಗ ಇದು ಪ್ರವಾಸಿಗರಿಗೆ ಆಕರ್ಷಕವಾದ ವಿಶೇಷ ವಿನ್ಯಾಸದ ಪಾರಂಪರಿಕ ಕಟ್ಟಡವಾಗಿ ನಿಂತಿದೆ. ಏಷ್ಯಾದ ಮೊಟ್ಟ ಮೊದಲ ಮೇಲ್ಗಾಲುವೆ ಎನಿಸಿರುವ ಹೆಗ್ಗಳಿಕೆಯು ಇದಕ್ಕೆ ಇದೆ. ರಸ್ತೆ ಆಗುವವರೆಗೂ ಇದರ ಮೇಲಿನ ರಸ್ತೆಯಲ್ಲಿಯೇ ವಾಹನಗಳು ಸಂಚರಿಸುತ್ತಿದ್ದವು.

ಜಲಸಂಪನ್ಮೂಲ ಇಲಾಖೆಯಲ್ಲಿ ನಾಲೆಗಳನ್ನು ನಿರ್ಮಿಸುವಾಗ ಬಲದಂಡೆ ನಾಲೆ, ಎಡದಂಡೆ ನಾಲೆ ಮತ್ತು ಮೇಲ್ದಂಡೆ ನಾಲೆಗಳೆಂದು ಹೆಸರಿಟ್ಟು ಕರೆಯುವುದು ವಾಡಿಕೆ. ಯಾವ ನಾಲೆಗೂ ನಿರ್ಮಾಣ ಹಂತದಲ್ಲಿಯೇ ಹೆಸರಿಟ್ಟು ಕರೆಯುವುದಿಲ್ಲ ಆದರೆ ಬಂಗಾರದೊಡ್ಡಿ ನಾಲೆ ಮಾತ್ರ ಹುಟ್ಟುವಾಗಲೇ ಹೆಸರಿಟ್ಟುಕೊಂಡು ಬಂದಿದೆ. ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ನಿರ್ಮಾಣವಾದ ತುಂಗಭದ್ರ ನದಿ ದಂಡೆಯಲ್ಲಿನ ರಾಯ ಕಾಲುವೆ ನಂತರ ಕಾವೇರಿ ನದಿಯಿಂದ ಕವಲೊಡೆಯುವ ಪಶ್ಚಿಮವಾಹಿನಿಯ ಪ್ರಾರಂಭದಲ್ಲಿಯೇ ಪಶ್ಚಿಮವಾಹಿನಿ ನದಿಗೆ ಅಣೆಕಟ್ಟೆ ಕಟ್ಟಿ ನಿರ್ಮಾಣವಾಗಿರುವ ಕಾಲುವೆ ಇದೇ ಇರಬಹುದು.

> ಬಂಗಾರದೊಡ್ಡಿ ಪದವನ್ನು ಕೇಳಿದರೆ ಯಾರಿಗೂ ಅರ್ಥವಾಗದು, ಇದರ ಒಳಹೊಕ್ಕಾಗ ಮಾತ್ರ ವಿಸ್ಮಯಕರವಾದ ವಿಷಯವನ್ನು ತಿಳಿಯಬಹುದಾಗಿದೆ. 17ನೇ ಶತಮಾನದ ಕಾಲಘಟ್ಟದಲ್ಲಿ ಮೈಸೂರು ಸಂಸ್ಥಾನದಲ್ಲಿ ದೇವದಾಸಿಯು ಸುಳ್ಳು ಆರೋಪದ ಮಲಿನತೆಗೆ ಒಳಗಾಗಿಯೂ ತನ್ನ ಪಾವಿತ್ರ್ಯತೆಯನ್ನು ಎತ್ತಿ ಹಿಡಿದು ಜನೋಪಕಾರಿ ಕಾರ್ಯವಾಗಿ ಶ್ರೀರಂಗಪಟ್ಟಣದಲ್ಲಿ 5 ಮೈಲಿ ಉದ್ದದ 900 ಎಕರೆಗೆ ನೀರುಣಿಸುವ 65 ಕ್ಯೂಸೆಕ್ಸ್ ಸಾಮರ್ಥ್ಯದ ಕಾಲುವೆಯನ್ನು ನಿರ್ಮಿಸುವುದಕ್ಕೆ ಕಾರಣಳಾದ ಮಹಿಳೆಯ ಅದ್ಭುತ ಕಥೆ ಇದೆ.

1960ರಲ್ಲಿ ಬಿಡುಗಡೆಯಾದ ರಣಧೀರ ಕಂಠೀರವ ಕನ್ನಡ ಚಲನಚಿತ್ರವನ್ನು ರಾಜ್‌ಕುಮಾರ್, ಜಿ.ವಿ.ಅಯ್ಯರ್, ಬಾಲಕೃಷ್ಣ ಮತ್ತು ನರಸಿಂಹರಾಜುರವರು ತಮ್ಮ ಸಂಪಾದನೆಯ ಹಣದಿಂದ ತಯಾರಿಸಿದ ಕನ್ನಡದ ನೂರನೇ ಚಿತ್ರ. ಇದೊಂದು ಚಾರಿತ್ರಿಕ ಕಪ್ಪುಬಿಳುಪು ಸಿನಿಮಾ ಆಗಿದ್ದು, ಇದರಲ್ಲಿ ಬಂಗಾರದೊಡ್ಡಿಯ ಕುರಿತಾಗಿ ಚೆನ್ನಾಗಿ ಚಿತ್ರಿಸಿ ತೋರಿಸಿದ್ದಾರೆ.

ರಣಧೀರ ಕಂಠೀರವ ನರಸರಾಜ ಒಡೆಯರ್(1638–1659) ರವರು ಸುಮಾರು ಇಪ್ಪತ್ತೊಂದು ವರ್ಷಗಳವರೆಗೆ ಮೈಸೂರು ಸಂಸ್ಥಾನವನ್ನು ಆಳಿದರು, ತಮ್ಮಲಿದ್ದ ಪರಾಕ್ರಮ, ಸುಭದ್ರ ಆಡಳಿತ ನಡೆಸುವ ಚತುರತೆ ಹಾಗೂ ವಿವಿಧ ಜನೋಪಯೋಗಿ ಕಾರ್ಯಗಳಿಂದ ಯದು ವಂಶದ ಅರಸರಲ್ಲಿ ಹೆಚ್ಚು ಪ್ರಸಿದ್ಧಿಯನ್ನು ಪಡೆದರು. ಇವರ ಹಿಂದಿನ ರಾಜರಾದ ಇಮ್ಮಡಿ ರಾಜಾ ಒಡೆಯರ್(1637–1638) ರವರು ದುಶ್ಚಟಗಳಿಗೆ ದಾಸನಾಗಿ ಸಂಸ್ಥಾನದ ಆಡಳಿತವನ್ನು ದಳವಾಯಿ ವಿಕ್ರಮರಾಯನಿಗೆ ವಹಿಸಿರುತ್ತಾನೆ, ವಿಕ್ರಮರಾಯನ ಕುತಂತ್ರದಿಂದ ವಿಷಪ್ರಾಶನದ ಸಂಚಿಗೆ ಬಲಿಯಾಗಿ ಒಂದೇ ವರ್ಷದಲ್ಲಿ ನಿಧನರಾಗುವನು. ಗುಂಡ್ಲುಪೇಟೆಯ ತೆರಕಣಾಂಬಿಯಲ್ಲಿ ಯುವಕರಿಗೆ ಮಲ್ಲಯುದ್ಧವನ್ನು ಕಲಿಸುತ್ತಿದ್ದ ಕಂಠೀರವ ನರಸರಾಜರನ್ನು ಪಟ್ಟಕ್ಕೇರಿಸಿ ತನ್ನ ಕೈಗೊಂಬೆ ಮಾಡಿಕೊಳ್ಳಬಹುದೆಂಬ ದಳವಾಯಿಯ ದುರಾಸೆಗೆ ಕಂಠೀರವ ನರಸರಾಜ ಒಡೆಯರ್ ಸೋಲದೆ ತಮ್ಮ ಸ್ವಶಕ್ತಿಯಿಂದ ದಳವಾಯಿ ವಿಕ್ರಮರಾಯನನ್ನು ಬಗ್ಗುಬಡಿದು ಪ್ರಬಲ ದೊರೆಯಾಗುತ್ತಾನೆ. ದುರಂತವೆಂದರೆ ಕಂಠೀರವನನ್ನು ಕೊಲೆ ಮಾಡಲು ನೇಮಿಸಿದ್ದವರಿಂದಲೇ ವಿಕ್ರಮರಾಯನು ಕೊಲ್ಲಲ್ಪಡುತ್ತಾನೆ. ರಣಧೀರನ ಆಡಳಿತಾವಧಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಕಾಲಕಾಲಕ್ಕೆ ಮಳೆ–ಬೆಳೆಗಳು ಸುಭಿಕ್ಷವಾಗುತ್ತಿದ್ದು, ಪ್ರಜೆಗಳೆಲ್ಲರು ನೆಮ್ಮದಿಯಿಂದ ಇದ್ದರು.

ರಣಧೀರ ಕಂಠೀರವನು ತಿರುಚನಾಪಳ್ಳಿಯ ವೀರಮಲ್ಲನೆಂಬ ಅಹಂಕಾರಿ ಜಟ್ಟಿಯನ್ನು ಕುಸ್ತಿಯಲ್ಲಿ ಸೋಲಿಸಿ, ಜೆಟ್ಟಿಯ ಸೊಕ್ಕನ್ನು ಅಡಗಿಸಿದ್ದು ಇವನ ಪರಾಕ್ರಮಕ್ಕೆ ಸಾಕ್ಷಿ. ದಳವಾಯಿಯ ಸಂಚಿಗೆ ದೇವಸ್ಥಾನದ ಅರ್ಚಕರು ತೀರ್ಥದಲ್ಲಿ ವಿಷ ಬೆರೆಸಿ ಕೊಡಲು ಮುಂದಾದಾಗ, ಸಂಚು ಬಯಲಾಗಿ ರಣಧೀರ ಕಂಠೀರವರು ಪ್ರಾಣಾಪಾಯದಿಂದ ಪಾರಾಗುತ್ತಾನೆ.

ರಣಧೀರ ಕಂಠೀರವ ಚಲನಚಿತ್ರದಲ್ಲಿ ಆ ಕಾಲದ ನೈಜ ಇತಿಹಾಸದ ಜೊತೆಗೆ ಅಗತ್ಯವಾದ ವೀರ, ಹಾಸ್ಯ, ಶೃಂಗಾರ ರಸಗಳು, ಭಾವುಕ ಸನ್ನಿವೇಶಗಳನ್ನು ಸೇರಿಸಿ ಅದ್ಭುತವಾಗಿ ಚಿತ್ರಕಥೆಯನ್ನು ಹೆಣೆಯಲಾಗಿದೆ, ಸಂಗೀತವನ್ನು ಕಲಿಸುವ ವಿದ್ವಾಂಸ ವಿಶ್ವನಾಥನ ಪಾತ್ರವು ಮುಖ್ಯವಾದದ್ದು, ಶ್ರೀರಂಗಪಟ್ಟಣದ ದೇವಾಲಯದ ದೇವದಾಸಿ ಹಾಗೂ ನರ್ತಕಿ ಬಂಗಾರದೊಡ್ಡಿಯು ಸಂಗೀತ ಕಲಿಯಲು ಬಯಸಿದಾಗ, ವಿಶ್ವನಾಥನು ಆಕೆಗೆ ನಿಬಂಧನೆ ಹಾಕುತ್ತಾನೆ. ಯಾವುದೇ ಕಾರಣಕ್ಕೂ ನೀನು ಪ್ರೇಮಕಾಮಗಳಿಗೆ ಶರಣಾಗಬಾರದು ಎಂದು. ಆದರೆ ರಣಧೀರ ಕಂಠೀರವನನ್ನು ನೋಡಿದ ಈಕೆಯು ಅವನ ಮೋಹಕ್ಕೆ ಒಳಗಾಗುತ್ತಾಳೆ. ಇದನ್ನು ತಿಳಿದ ವಿಶ್ವನಾಥನು ನಿಬಂಧನೆಯನ್ನು ಮುರಿದ ಕಾರಣ ಅವಳನ್ನು ದೂರ ಮಾಡುತ್ತಾನೆ. ಇದೇ ಸಮಯಕ್ಕೆ ಬಂಗಾರದೊಡ್ಡಿಯು ರಣಧೀರನನ್ನು ಕೊಲ್ಲುವ ಸಂಚಿನ ಭಾಗವಾಗಿದ್ದಳು ಎಂಬ ಸುಳ್ಳು ಅಪವಾದವನ್ನು ನಂಬಿದ ರಣಧೀರ ಕಂಠೀರವನು ದೂರ ಹೋಗು ಎಂದು ನಿರ್ದಾಕ್ಷಿಣ್ಯವಾಗಿ ಹೇಳುತ್ತಾನೆ. ಇದರಿಂದ ನೊಂದ ಬಂಗಾರದೊಡ್ಡಿಯು ಸಾವಿಗೆ ಶರಣಾಗುತ್ತಾಳೆ. ಅವಳು ನಿರಪರಾಧಿ ಎಂಬ ನಿಜಾಂಶ ತಿಳಿಯುತ್ತದೆ, ಅಷ್ಟರಲ್ಲಿ ಕೈಮೀರಿರುತ್ತದೆ, ಸಾಯುವಾಗ ಕಂಠೀರವನಿಗೆ ಪತ್ರ ಬರೆದಿರುತ್ತಾಳೆ. ಅದರಲ್ಲಿ ಶ್ರೀರಂಗಪಟ್ಟಣದಲ್ಲಿ ಕಾವೇರಿ ನದಿಯಿಂದ ಕಾಲುವೆಯನ್ನು ತೋಡಿಸಿ ರೈತರಿಗೆ ನೀರಾವರಿ ಕಲ್ಪಿಸಿಕೊಡುವಂತೆ ವಿನಂತಿಸಿರುತ್ತಾಳೆ. ಅವಳ ಇಚ್ಛೆಯಂತೆ ರಣಧೀರ ಕಂಠೀರವನು ಪಶ್ಚಿಮವಾಹಿನಿಯ ಪ್ರಾರಂಭದಲ್ಲಿ ಅಣೆಕಟ್ಟೆಯನ್ನು ನಿರ್ಮಿಸಿ, ಐದು ಮೈಲಿ ಉದ್ದ ಕಾಲುವೆಯನ್ನು ಅಂದಾಜು ಒಂಬೈನೂರು ಎಕರೆಗಳು ನೀರಾವರಿ ಆಗುವಂತೆ ನಿರ್ಮಾಣ ಮಾಡುತ್ತಾನೆ, ಇಂದಿಗೂ ಆಕೆಯು ಬಂಗಾರದೊಡ್ಡಿ ನಾಲೆಯ ಮುಖಾಂತರ ಅಮರಳಾಗಿದ್ದಾಳೆ.

ರಣಧೀರ ಕಂಠೀರವ ಚಲನಚಿತ್ರವು 1960ರಲ್ಲಿ ಬಿಡುಗಡೆಯಾಗಿದ್ದರೂ ಮೇರು ನಟರು ತಮ್ಮ ಪಾತ್ರಗಳಿಗೆ ಸಂಪೂರ್ಣ ನ್ಯಾಯ ಒದಗಿಸಿರುವುದರಿಂದ ಇಂದಿಗೂ ಚಿತ್ರವನ್ನು ಮತ್ತೆಮತ್ತೇ ನೋಡಲು ಇಷ್ಟವಾಗುತ್ತದೆ. ಮೈಸೂರು–ಬೆಂಗಳೂರು ರಸ್ತೆಯ ಪಕ್ಕದಲ್ಲೇ ಶ್ರೀರಂಗಪಟ್ಟಣದ ಬಳಿ ಹಾಯ್ದು ಹೋಗಿರುವ ಐತಿಹಾಸಿಕ ಬಂಗಾರದೊಡ್ಡಿ ನಾಲೆಯ ವಿಶೇಷತೆಯನ್ನು ಮಲೆಯೂರು ಗುರುಸ್ವಾಮಿಯವರ ಬಂಗಾರದೊಡ್ಡಿ ಕಾದಂಬರಿ, ಜೆ.ಎಂ.ಪ್ರಹ್ಲಾದ್‌ರವರ ಕನ್ನಡ ಸಿನಿಮಾ ಐತಿಹಾಸಿಕ ನೆಲಗಟ್ಟು ಕೃತಿ ಹಾಗೂ ರಣಧೀರ ಕಂಠೀರವ ಚಲನಚಿತ್ರ ಇವುಗಳಲ್ಲಿ ಅತ್ಯದ್ಭುತವಾಗಿ ದಾಖಲಿಸಿ ಸಾಹಿತ್ಯಾಸಕ್ತರಿಗೆ ಉಣಬಡಿಸಿದ್ದಾರೆ.

ಕೃತಿಗಳನ್ನು ಓದಿ ಚಲನಚಿತ್ರವನ್ನು ನೋಡಿದವರಿಗೆ ಮೈಸೂರು ಸಂಸ್ಥಾನದ ಅರಸರ ಮೇಲೆ ಗೌರವ ಇಮ್ಮಡಿಯಾಗುವುದಲ್ಲದೆ, ಮೈಸೂರು ಅರಸರಿಗೆ ಒಬ್ಬ ನರ್ತಕಿ ಹಾಗೂ ದೇವದಾಸಿ ಎನಿಸಿಕೊಂಡವಳು ವಿಶಿಷ್ಟ ರೀತಿಯಲ್ಲಿ ಜನಸೇವೆಗೆ ಪ್ರೇರಣೆ ಆದದ್ದು, ಆ ಮೂಲಕ ಬಂಗಾರದೊಡ್ಡಿ ನಾಲೆಯಾಗಿ ಹರಿದು ಶ್ರೀರಂಗಪಟ್ಟಣದ ಬಯಲು ಸದಾ ಹಸಿರಾಗಿರುವಂತೆ ಮಾಡಿದ ಪುಣ್ಯವಂತೆ ಬಂಗಾರದೊಡ್ಡಿ ಅಮ್ಮ!.



ಮಿರ್ಲೆ ಚಂದ್ರಶೇಖರ
ಮೊ: 9916129654

ಸುತ್ತೂರು ಕ್ಷೇತ್ರದಲ್ಲಿ ಇಂದಿನಿಂದ ರಾಜ್ಯ ಮಟ್ಟದ ಶಿಕ್ಷಕರ ಶಿಬಿರ

ಮೈಸೂರು,ಏ.6–ಸುತ್ತೂರು ಶ್ರೀಮಠದ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಏ.7ರಿಂದ 9ರವರೆಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ಪ್ರಾಥಮಿಕ, ಪ್ರೌಢ ಮತ್ತು ಪದವಿಪೂರ್ವ ಶಿಕ್ಷಕರಿಗಾಗಿ ಶಿಬಿರವನ್ನು ಏರ್ಪಡಿಸಲಾಗಿದೆ. ಈ ಶಿಬಿರದಲ್ಲಿ ರಾಜ್ಯದ ಎಲ್ಲ ಶಿಕ್ಷಕರೂ ಭಾಗವಹಿಸಲು ಅವಕಾಶವಿದೆ. ಶಿಬಿರವು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಮಾರ್ಗದರ್ಶನ ಹಾಗೂ ದಿವ್ಯ ಆಶೀರ್ವಾದದೊಂದಿಗೆ ನಡೆಯಲಿದೆ. ಶಿಬಿರದಲ್ಲಿ ಸಾಮೂಹಿಕ ಪ್ರಾರ್ಥನೆ, ಯೋಗ, ವಿಶೇಷ ಉಪನ್ಯಾಸ, ಚಿಂತನ–ಮಂಥನ, ದೇಸಿ ಆಟಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ.

ಶಿಬಿರದಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಶಿಬಿರದ ಸಂಚಾಲಕರಾದ ಎಚ್.ಎಸ್.ನಾಗರಾಜು (9591577957), ವೀರೇಶ್ ಪಾಟೀಲ್ (948 2394902), ಎಸ್.ಎನ್.ನಾಗೇಂದ್ರಪ್ರಸಾದ್ (961155 2144), ಎನ್.ರಮೇಶ್ (831092 7515), ಸಿ.ಎಂ.ಯೋಗೀಶ್ (99643 98915), ಎಸ್.ಸೌಮ್ಯ (9980076 066) ಅವರನ್ನು ಸಂಪರ್ಕಿಸಿ ವಿವರಗಳನ್ನು ಪಡೆದು ನೋಂದಾಯಿಸಿಕೊಳ್ಳಬಹುದು. www.jssonline.org ಯಿಂದ ವಿವರ ಪಡೆಯಬಹುದು. ಏ.10ರಿಂದ ಮೇ 27ರವರೆಗೆ ಎಳೆಯರ ಮೇಳ ಹಾಗೂ ಚಿತ್ರಕಲಾ ಶಿಬಿರಗಳು ಮೈಸೂರು, ಸುತ್ತೂರು ಶ್ರೀಕ್ಷೇತ್ರ, ಬಿಳಿಗಿರಿರಂಗನಬೆಟ್ಟ ಹಾಗೂ ಊಟಿಯಲ್ಲಿ ಒಟ್ಟು 13 ಶಿಬಿರಗಳನ್ನು ಏರ್ಪಡಿಸಲಾಗಿದೆ. ಮಾಹಿತಿಗೆ 0821–2548212.

ಡಿಸಿಪಿ ಕೆ.ಎಸ್.ಸುಂದರ್‌ರಾಜ್‌ಗೆ ಅಭಿನಂದನೆ



ಮೈಸೂರಿನ ಅಶೋಕಪುರಂ ಆದಿಕರ್ನಾಟಕ ಮಹಾಸಂಸ್ಥೆಯಿಂದ ಮೈಸೂರು ನಗರ ಅಪರಾಧ–ಸಂಚಾರ ವಿಭಾಗದ ನೂತನ ಡಿಸಿಪಿ ಕೆ.ಎಸ್.ಸುಂದರ್‌ರಾಜ್ ಅವರನ್ನು ಸಂಸ್ಥೆ ಅಧ್ಯಕ್ಷ ಸಿದ್ದರಾಜು (ಸುನಿಲ್) ಪುಷ್ಪಗುಚ್ಛ ನೀಡಿ ಅಭಿನಂದಿಸಿದರು. ಉಪಾಧ್ಯಕ್ಷ ಶಿವಸ್ವಾಮಿ, ಕಾರ್ಯದರ್ಶಿ ರಾಜ್‌ಮೊಗ.ಡಿ, ಚಿಕ್ಕಗರಡಿ ಕಾರ್ಯದರ್ಶಿ ಸಿದ್ದೇಶ್, ನಾಗರಾಜು (ಬಿಲ್ಲಯ್ಯ), ಮಧು, ಸಿದ್ದರಾಜು ಎಸ್ ಬೋಗಾದಿ ಉಪಸ್ಥಿತರಿದ್ದರು.

ಕ್ಯಾತಮಾರನಹಳ್ಳಿಯ ವಿವಾದಿತ ಸ್ಥಳದಲ್ಲಿ ಅರೇಬಿಕ್ ಶಾಲೆ ಆರಂಭಕ್ಕೆ ವಿರೋಧ

ಕಾನೂನು ಹೋರಾಟ ನಡೆಸಲು ಗ್ರಾಮಸ್ಥರ ತೀರ್ಮಾನ

- ರಾಜು ತಾಯಿಯಿಂದ ಪ್ರಾಣತ್ಯಾಗ ಎಚ್ಚರಿಕೆ
- ಬಿಗಿ ಪೊಲೀಸ್ ಬಂದೋಬಸ್ತ್



ಮೈಸೂರಿನ ಕ್ಯಾತಮಾರನಹಳ್ಳಿಯ ವಿವಾದಿತ ಸ್ಥಳದಲ್ಲಿ ಅರೇಬಿಕ್ ಶಾಲೆ ನಡೆಸಲು ಅನುಮತಿ ನೀಡಿರುವ ಜಿಲ್ಲಾಡಳಿತದ ನಿರ್ಧಾರ ವಿರೋಧಿಸಿ ಕ್ಯಾತಮಾರನಹಳ್ಳಿ ಗ್ರಾಮಸ್ಥರು ಸಭೆ ಸೇರಿ ಕಾನೂನು ಹೋರಾಟ ನಡೆಸಲು ತೀರ್ಮಾನ ಕೈಗೊಂಡರು.

ಮೈಸೂರು, ಏ.6(ಬಿಎಲ್‌ಯು)– ಮೈಸೂರಿನ ಕ್ಯಾತಮಾರನಹಳ್ಳಿಯ ವಿವಾದಿತ ಸ್ಥಳದಲ್ಲಿ ಅರೇಬಿಕ್ ಶಾಲೆ, ಮದರಸಾ, ಮಸೀದಿ ಸೇರಿದಂತೆ ಯಾವುದೇ ಕಾರ್ಯ ಚಟುವಟಿಕೆ ನಡೆಸದೆ ಯಥಾಸ್ಥಿತಿ ಕಾಪಾಡಿಕೊಳ್ಳುವ ನಿಟ್ಟಿನಲ್ಲಿ ಕಾನೂನು ಹೋರಾಟ ಮಾಡಲು ಕ್ಯಾತಮಾನಹಳ್ಳಿ ಗ್ರಾಮಸ್ಥರು ಇಂದು ಒಕ್ಕೊರಲಿನ ನಿರ್ಧಾರ ಕೈಗೊಂಡಿದ್ದಾರೆ.

ವಿವಾದಿತ ಸ್ಥಳದಲ್ಲಿ ಅರೇಬಿಕ್ ಶಾಲೆ ನಡೆಸಲು ಅಲೀಂ ಸಾಧಿಯಾ ಎಜುಕೇಷನಲ್ ಟ್ರಸ್ಟ್ ಮತ್ತು ಮಸ್ಜೀದ್ ಇ–ಸಿದ್ಧಿಕಿ–ಇ–ಅಕ್ಬರ್ ಟ್ರಸ್ಟ್‌ಗೆ ಅನುಮತಿ ನೀಡಿರುವ ಜಿಲ್ಲಾಡಳಿತದ ನಿರ್ಧಾರ ವಿರೋಧಿಸಿ ಕ್ಯಾತಮಾರನಹಳ್ಳಿ ಗ್ರಾಮಸ್ಥರು ಇಂದು ಹುಲಿಯಮ್ಮ ದೇವಸ್ಥಾನದ ಆವರಣದಲ್ಲಿ ಸಭೆ ಸೇರಿ ಸರ್ವಾನುಮತದ ತೀರ್ಮಾನ ಕೈಗೊಂಡರು.

ಕ್ಯಾತಮಾರನಹಳ್ಳಿ ಶ್ರೀ ಹುಲಿಯಮ್ಮ ದೇವಸ್ಥಾನ ಅಭಿವೃದ್ಧಿ ಟ್ರಸ್ಟ್ ನೇತೃತ್ವದಲ್ಲಿ ಕಾನೂನು ಹೋರಾಟ ಮಾಡಲು ನಿರ್ಧಾರ ಕೈಗೊಳ್ಳಲಾಯಿತು.

ಈ ವೇಳೆ ಮಾತನಾಡಿದ ಶ್ರೀ ಹುಲಿಯಮ್ಮ ದೇವಸ್ಥಾನ ಅಭಿವೃದ್ಧಿ ಟ್ರಸ್ಟ್ ಪರ ವಕೀಲ ಅ.ಮ.ಭಾಸ್ಕರ್ ಅವರು, ಕ್ಯಾತಮಾರನಹಳ್ಳಿಯ ಈ ಸ್ಥಳದಲ್ಲಿ ಕೋಮು ಘರ್ಷಣೆ ಉಂಟಾಗುವ ಸಾಧ್ಯತೆಗಳು ದಟ್ಟವಾಗಿರುವ ಹಿನ್ನೆಲೆ ಕಟ್ಟಡಕ್ಕೆ ಸಂಬಂಧಿಸಿದಂತೆ ಯಥಾಸ್ಥಿತಿ ಮುಂದುವರೆಸುವುದು ಸೂಕ್ತವೆಂದು ಎಚ್ಚರಿಸಿ ನಗರ ಪೊಲೀಸ್ ಆಯುಕ್ತರು ಫೆಬ್ರವರಿ 14, 2025 ರಂದು ಜಿಲ್ಲಾಡಳಿತಕ್ಕೆ ವರದಿ ನೀಡಿದ್ದಾರೆ. ಆದರೆ ಪೊಲೀಸ್ ಆಯುಕ್ತರ ವರದಿಯನ್ನು ಧಿಕ್ಕರಿಸಿ ಅರೇಬಿಕ್ ಶಾಲೆ ಆರಂಭಕ್ಕೆ ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರು ಅನುಮತಿ ನೀಡಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂಬಂಧ ಜಿಲ್ಲಾಡಳಿತದ ಆದೇಶ ರದ್ದು ಮಾಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಗೃಹ ಸಚಿವ ಡಾ.ಜಿ. ಪರಮೇಶ್ವರ್ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಮನವಿ ಸಲ್ಲಿಸಲಾಗುವುದು ಎಂದು ತಿಳಿಸಿದರು.

ನಮ್ಮ ಮನವಿಗೆ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸದಿದ್ದರೆ ಜಿಲ್ಲಾಡಳಿತದ ಆದೇಶ ರದ್ದು ಮಾಡುವಂತೆ ಸಕ್ಷಮ ನ್ಯಾಯಾಲಯದಲ್ಲಿ ಕಾನೂನು ಹೋರಾಟ ಮಾಡಲಾಗುವುದು. ಈ ಮೂಲಕ ಯಾವುದೇ ಕಾರಣಕ್ಕೂ ವಿವಾದಿತ ಸ್ಥಳದಲ್ಲಿ ಅರೇಬಿಕ್ ಶಾಲೆಯಾಗಲಿ, ಮದರಸವಾಗಲಿ ಅಥವಾ ಮಸೀದಿಯಾಗಲಿ ನಡೆಸಲು ಬಿಡುವುದಿಲ್ಲ ಎಂದು ಭಾಸ್ಕರ್ ಹೇಳಿದರು.

ತರುವಾಯ ಮಾತನಾಡಿದ ಕೆಲ ವರ್ಷಗಳ ಹಿಂದೆ ಹತ್ಯೆಗೀಡಾದ ಆರ್‌ಎಸ್‌ಎಸ್ ಮುಖಂಡ ರಾಜು ಅವರ ತಾಯಿ ಚಂದ್ರಮ್ಮ ಅವರು, ವಿವಾದಿತ ಸ್ಥಳದ ಕಾರಣದಿಂದ ನನ್ನ ಮಗನ ಹತ್ಯೆಯಾಗಿದೆ. ಯಥಾಸ್ಥಿತಿ ಕಾಪಾಡಿಕೊಳ್ಳದೆ ಶಾಲೆ, ಮದರಸ, ಮಸೀದಿ ನಡೆಸಲು ಬಿಡುವುದಿಲ್ಲ. ನಮ್ಮೆಲ್ಲರ ವಿರೋಧ ಧಿಕ್ಕರಿಸಿ ವಿವಾದಿತ ಸ್ಥಳದಲ್ಲಿ ಕಾರ್ಯ ಚಟುವಟಿಕೆ ನಡೆಸಲು ಬಿಟ್ಟರೆ ನಾನು ಮತ್ತು ನನ್ನ ಮೊಮ್ಮಕ್ಕಳು ಆ ಸ್ಥಳದಲ್ಲಿ ಪ್ರಾಣ ತ್ಯಾಗ ಮಾಡಲು ಸಿದ್ಧರಿದ್ದೇವೆ ಎಂದು ಎಚ್ಚರಿಸಿದರು.

ಸಭೆಯ ಹಿನ್ನೆಲೆ ಯಾವುದೇ ಅಹಿತಕರ ಘಟನೆಗೆ ಅವಕಾಶ ನೀಡದಂತೆ ಕ್ಯಾತಮಾರನಹಳ್ಳಿ, ಗೌಸಿಯಾನಗರ, ಉದಯಗಿರಿ, ಗಾಯತ್ರಿಪುರಂ ಸೇರಿದಂತೆ ಇತರೆಡೆ ಬಿಗಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಶ್ರೀ ಹುಲಿಯಮ್ಮ ದೇವಸ್ಥಾನ ಟ್ರಸ್ಟ್ ಪದಾಧಿಕಾರಿಗಳಾದ ಮಹದೇವು, ಎಂ.ಲೋಕೇಶ್, ಶಿವಕುಮಾರ್, ಭೀಷ್ಮ, ಸಿದ್ದಯ್ಯ, ನಾಗರಾಜು, ಗೋವಿಂದರಾಜು, ಭಾಗ್ಯರಾಜ್, ಬಿ.ವೆಂಕಟೇಶ್, ಎಸ್.ಆನಂದ್, ಎಂ.ಕೃಷ್ಣ, ಎಸ್.ರವಿ, ನಾಗಣ್ಣ, ಗಂಗರಾಜು, ಎಂ.ಅಂಬರೀಶ್ ಸೇರಿದಂತೆ ನೂರಾರು ಮಂದಿ ಸಭೆಯಲ್ಲಿ ಹಾಜರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಏ.6– ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಏಪ್ರಿಲ್ 7 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಶ್ರೀರಾಂಪುರ 2ನೇ ಹಂತ, ರಮಾಭಾಯಿ ನಗರ, ಮಹದೇವಪುರ, ಜಯನಗರ 1 ರಿಂದ 20 ನೇ ಕ್ರಾಸ್, ಪರಸಯ್ಯನಹುಂಡಿ, ಶಿವಪುರ, ಕುವೆಂಪುನಗರ ಕೆ–ಬ್ಲಾಕ್, ಅಪೊಲೋ ಆಸ್ಪತ್ರೆಯ ಸುತ್ತಮುತ್ತಲಿನ ಪ್ರದೇಶಗಳು. ಚಿಕ್ಕಹರದನಹಳ್ಳಿ, ಗೊರೂರು ಗ್ರಾಮ, ಕಳಲವಾಡಿ, ಕೋಟೆಹುಂಡಿ, ಯಡಹಳ್ಳಿ, ರಾಯನ ಕೆರೆ, ಸರಸ್ವತಿಪುರಂ 1ನೇ ಮುಖ್ಯ ರಸ್ತೆಯಿಂದ 6ನೇ ಮುಖ್ಯರಸ್ತೆ, ಭಾಗಶಃ ಕೆ.ಜಿ.ಕೊಪ್ಪಲು ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಚೆಸ್ಕ್ ಪ್ರಕಟಣೆ ತಿಳಿಸಿದೆ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ರಿಯಾಜ್‌ಖಾನ್ ಬಿನ್ ರಶೀದ್‌ಖಾನ್, ನಂಬರ್ 1435/ಎ, 6 ನೇ ಕ್ರಾಸ್, ಇರ್ವಿನ್ ರಸ್ತೆ, ಲಷ್ಕರ್‌ಮೊಹಲ್ಲಾ, ಮೈಸೂರು ರವರು ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ಶ್ರೀ ಪ್ರಶಾಂತ್ ಎಂ. ಉಚಿಲ್ ಬಿನ್ ಲೇಟ್. ಎಂ. ಮನಮೋಹನ್, ನಂಬರ್ ಕೆ–1402, ಬ್ರಿಗೇಡ್ ಗೇಟ್ ವೇ, ಮಲ್ಲೇಶ್ವರಂ, ಬೆಂಗಳೂರುರವರಿಂದ ಖರೀದಿಸಲು ದಿನಾಂಕ 11–08–2015 ರಂದು ಕ್ರಯದ ಒಪ್ಪಂದದ ಕರಾರು ಪತ್ರವನ್ನು ಮಾಡಿಕೊಂಡಿದ್ದು, ಮೇಲ್ಕಂಡ ಪ್ರಶಾಂತ್ ಎಂ. ಉಚಿಲ್‌ರವರಿಗೆ ಮುಂಗಡ ಹಣವಾಗಿ ಭಾರಿ ಮೊತ್ತವನ್ನು ನೀಡಿರುತ್ತಾರೆ. ಈ ಸಂಬಂಧ ಪ್ರಶಾಂತ್ ಎಂ. ಉಚಿಲ್‌ರವರು ನಮ್ಮ ಕಕ್ಷಿದಾರರ ಪರ ಶುದ್ಧ ಕ್ರಯಪತ್ರವನ್ನು ಬರೆದುಕೊಡದೆ ಇದ್ದ ಕಾರಣ, ನಮ್ಮ ಕಕ್ಷಿದಾರರು ಮೈಸೂರಿನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ ಅಸಲು ದಾವೆ ಸಂಖ್ಯೆ–1064/2024 ಅನ್ನು ಮೇಲ್ಕಂಡ ಪ್ರಶಾಂತ್ ಎಂ. ಉಚಿಲ್ ಹಾಗೂ ಇತರರ ವಿರುದ್ಧ ಕರಾರಿನ ನಿರ್ದಿಷ್ಟ ಅನುಷ್ಠಾನಕ್ಕಾಗಿ ಸಲ್ಲಿಸಿರುತ್ತಾರೆ. ಹಾಗೂ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ಷೆಡ್ಯೂಲ್ ಸ್ವತ್ತನ್ನು ಯಾರಿಗೂ ಪರಬಾರೆ ಪರಾಧೀನ ಮಾಡಬಾರದೆಂದು ಆದೇಶವನ್ನೂ ಸಹ ಪಡೆದಿರುತ್ತಾರೆ. ಆದರೆ, ಕೆಲವು ಮಧ್ಯವರ್ತಿಗಳು ಮತ್ತು ಸಮಾಜ ಘಾತುಕ ವ್ಯಕ್ತಿಗಳು ಸದರಿ ಸ್ವತ್ತನ್ನು ತಮಗೆ ಕ್ರಯಕ್ಕೆ ಮತ್ತು ಬಾಡಿಗೆಗೆ ನೀಡಿರುತ್ತಾರೆಂದು ಷೆಡ್ಯೂಲ್ ಸ್ವತ್ತಿನ ಮೂಲ ಸ್ವರೂಪವನ್ನೇ ಬದಲಾವಣೆ ಮಾಡಲು ಪ್ರಯತ್ನಿಸುತ್ತಾ ಇರುತ್ತಾರೆ ಹಾಗೂ ಸಾರ್ವಜನಿಕರಿಗೆ ತಪ್ಪು ಮಾಹಿತಿಯನ್ನು ನೀಡಿ ಷೆಡ್ಯೂಲ್ ಸ್ವತ್ತು ಮಾರಾಟಕ್ಕೆ ಇರುತ್ತದೆಂದು ಪ್ರಚಾರ ಮಾಡುತ್ತಾ ಸಾರ್ವಜನಿಕರಿಗೆ ವಂಚಿಸುವ ಪ್ರಯತ್ನ ಮಾಡುತ್ತಿರುವುದು ನಮ್ಮ ಕಕ್ಷಿದಾರರ ಗಮನಕ್ಕೆ ಬಂದಿರುವ ಕಾರಣ ಈ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸುತ್ತಿದ್ದು, ಸಾರ್ವಜನಿಕರು ಯಾರೂ ಸಹ ಯಾವುದೇ ರೀತಿಯ ವಂಚನೆಗಳಿಗೆ ಗುರಿಯಾಗಬಾರದೆಂದು ಈ ಮೂಲಕ ಪ್ರಕಟಿಸಲಾಗಿದೆ. ಒಂದು ವೇಳೆ ಷೆಡ್ಯೂಲ್ ಸ್ವತ್ತಿನ ಸಂಬಂಧ ವ್ಯವಹರಿಸಿದಲ್ಲಿ ಅದು ನ್ಯಾಯಾಲಯದ ಆದೇಶದ ಉಲ್ಲಂಘನೆಯಾಗಿ ಶಿಕ್ಷೆಗೆ ಗುರಿಪಡಿಸಲಾಗುವುದು. ಆದ್ದರಿಂದ ಯಾರೂ ಯಾವುದೇ ವಿಧವಾಗಿ ಷೆಡ್ಯೂಲ್ ಸ್ವತ್ತಿನ ಸಂಬಂಧ ವ್ಯವಹರಿಸಬಾರದೆಂದು ಈ ಮೂಲಕ ಕೋರಲಾಗಿದೆ.

ಷೆಡ್ಯೂಲ್ ವಿವರ : ಮೈಸೂರು ತಾಲ್ಲೂಕು, ಕುರುಬಾರಹಳ್ಳಿ ಗ್ರಾಮದ ಜಮಾಬಂದಿಗೆ ಸೇರಿದ ಸರ್ವೆ ನಂಬರ್ 4 ರ ಪೈಕಿ ಬ್ಲಾಕ್ ನಂಬರ್–ಇ (ಬ್ಲೂ ಪ್ರಿಂಟ್ ರೀತ್ಯಾ) ವಿಸ್ತೀರ್ಣ 24 ಎಕರೆ ಜಮೀನು, ಇದಕ್ಕೆ ಚಕ್ಕುಬಂದಿ, ಪೂರ್ವಕ್ಕೆ : ಬ್ಲಾಕ್ ನಂಬರ್–ಸಿ, ಪಶ್ಚಿಮಕ್ಕೆ : ಚಂಪಾಜಿ ರಸ್ತೆ, ಉತ್ತರಕ್ಕೆ : ಬ್ಲಾಕ್ ನಂಬರ್–ಡಿ, ದಕ್ಷಿಣಕ್ಕೆ : ಚಂಪಾಜಿ ರಸ್ತೆ.

Sd/- CHANDRASHEKAR
ADVOCATE Roll No.KAR/101/1994
No.116/3, D. Banumalah Chowka
K.R. Mohalla, Mysuru - 570 004
Mob: 94485 57009

USED COMPUTERS FOR SALE

Dual Core/ 2GB Ram / 80GB HDD / 17"LCD **Rs.6,000/-**

For Quantity of 10 No's. **Rs.5,000/-** per system

For Quantity of 10 No's without Monitor **Rs.3,000/-** per system

LAPTOPS

Core i3 / 4GB Ram / 480 GB HDD / Adaptor. **Rs.12,000/-**

Courier Charges: **Rs.1,000/-** per system

COMPUTER HOUSE

L-81, SECTOR 11, 8th CROSS, 9th B MAIN, LIC COLONY, JEEVANBHIMA NAGAR, BANGALORE - 560075.

09886038331

ಹಸಿರು ನಮ್ಮ ಉಸಿರು

ಮೈಸೂರು ಮಿತ್ರ 45

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀ ಡಿ.ಚಾಮರಾಜು ಅವರು

ಇವರು ದಿನಾಂಕ 29–03–2025ನೇ ಶನಿವಾರ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ದಿನಾಂಕ 08–04–2025ರ ಮಂಗಳವಾರ ಮಧ್ಯಾಹ್ನ 1-30ಕ್ಕೆ ಮೃತರ ಸ್ವಗೃಹ #ಬಿ14, 9ನೇ ಕ್ರಾಸ್, ಬೋಗಾದಿ 2ನೇ ಹಂತ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದಿದ್ದವರು ಇದೇ ಆಹ್ವಾನ ಪತ್ರಿಕೆ ಎಂದು ತಿಳಿದು ಕಾರ್ಯಕ್ರಮಕ್ಕೆ ಬರಬೇಕಾಗಿ ಮನವಿ

ದುಃಖತಪ್ತರು: ಪತ್ನಿ ಪ್ರಭಾ, ಮಕ್ಕಳಾದ ಸುಹಾಸ್ ಧವನ್, ವಿಕಾಸ್ ಧವನ್, ಸೊಸೆ ಧನಶ್ರೀ ಕೇಂದ್ರೆ, ಮೊಮ್ಮಗ ತನಿಷ್

ಭೋಜನ ಮಧ್ಯಾಹ್ನ 2 ಗಂಟೆಗೆ

COMMERCIAL SPACE AVAILABLE FOR RENT

Suitable for Bank / Software / Microfinance company in Chaduranga Road, Mysore.

GF 1440 Sq.ft. & FF 1540 Sq.ft.

Contact:

Mob: 9448600554

ಸೆಂದಿಲ್‌ಕುಮಾರ್ ಟೆಕ್ಸ್‌ಟೈಲ್ಸ್ **ಬೇಕಾಗಿದ್ದಾರೆ**

ದಾಸಪ್ರಕಾಶ್ ಹೋಟೆಲ್ ಹತ್ತಿರ, ಹಳೇ ಬ್ಯಾಂಕ್ ರಸ್ತೆ ಗಾಂಧಿಚೌಕ, ಮೈಸೂರು – 570001

ನಮ್ಮ ಸೆಂದಿಲ್ ಕುಮಾರ್ ಟೆಕ್ಸ್‌ಟೈಲ್ಸ್ ಹಾಗೂ ಸೂಪರ್ ಮಾರ್ಕೆಟ್‌ನಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.


ಸಂದರ್ಶನದ ವೇಳೆ ದಿನಾಂಕ: 07.04.2025 ರಿಂದ 11.04.2025 (5ದಿನ)
ಸಮಯ: ಬೆಳಿಗ್ಗೆ 11.00 ರಿಂದ ಸಂಜೆ 4.00 ರವರೆಗೆ ನೇರ ಸಂದರ್ಶನ

ಖಾಲಿ ಇರುವ ಕೆಲಸಗಳು

1. ಸೇಲ್ಸ್ ಮ್ಯಾನ್ / ಗರ್ಲ್
2. ಡಾಟಾ ಎಂಟ್ರಿ
3. ಸೂಪರ್ ವೈಸರ್
4. ಕ್ಯಾಷಿಯರ್
5. ಹೌಸ್ ಕೀಪಿಂಗ್
6. ಕಸ್ಟಮರ್ ಕೇರ್
7. ಡೆಲಿವರಿ ಸ್ಟಾಫ್

1. ಕೆಲಸ ಮಾಡಲು ಇಷ್ಟವಿರುವ ವ್ಯಕ್ತಿಗಳು ಬಯೋಡೇಟಾ, ಪಾಸ್‌ಪೋರ್ಟ್ ಸೈಜ್ ಫೋಟೋ, ಆಧಾರ್ ಕಾರ್ಡ್, ಜೆರಾಕ್ಸ್‌ನ್ನು ತರತಕ್ಕದ್ದು.
2. ಪಿಎಫ್ ಮತ್ತು ಇಎಸ್ಐ ಸೌಲಭ್ಯವಿದೆ. ಅನುಭವಕ್ಕೆ ತಕ್ಕಂತೆ ಉತ್ತಮ ವೇತನ + ಇನ್ಸೆಂಟೀವ್ ನೀಡಲಾಗುತ್ತದೆ.

ಸಂಪರ್ಕಿಸಿ: 8884450015





ಮಂಡ್ಯ ಜಿಲ್ಲೆಯಾದ್ಯಂತ ಮರ್ಯಾದ ಪುರುಷೋತ್ತಮ ಶ್ರೀರಾಮ ನಾಮ ಸ್ಮರಣೆ



ಮಂಡ್ಯ ನಗರದ ಹೌಸಿಂಗ್ ಬೋರ್ಡ್ ನ ಬಿವಿಕೆ ಬಡಾವಣೆಯ ವಿನಯ ಮಾರ್ಗದಲ್ಲಿ ಶ್ರೀರಾಮ ನವಮಿಯನ್ನು ಭಕ್ತಿ ಪೂರಕವಾಗಿ ಆಚರಿಸಲಾಯಿತು. ಮಕ್ಕಳು ರಾಮ–ಸೀತೆಯಾರ ಪೋಷಕಿನಲ್ಲಿದ್ದದ್ದು ವಿಶೇಷವಾಗಿತ್ತು.



ಭಾರತೀನಗರದ ಮದ್ದೂರು–ಮಳವಳ್ಳಿ ಮುಖ್ಯ ರಸ್ತೆಯಲ್ಲಿ ಭಾರತ ವಿಕಾಸ್ ಪರಿಷತ್ ಬೌದ್ಧಯಾನ ಶಾಖೆ ವತಿಯಿಂದ ಶ್ರೀರಾಮ ನವಮಿಯನ್ನು ಆಚರಿಸಲಾಯಿತು. ದಕ್ಷಿಣ ಪ್ರಾಂತ ಉಪಾಧ್ಯಕ್ಷ ಎಂ.ಮಾಯಪ್ಪ, ಕಾರ್ಯದರ್ಶಿ ಎ.ಎಸ್.ಶಿವರಾಮು, ಖಜಾಂಚಿ ಗಾಯಿತ್ರಿ, ಶ್ರೀನಿವಾಸ್, ರಾಮಚಂದ್ರು, ರಮೇಶ್, ಶಿವಾಮು, ದೇವರಾಜು, ಬೋರಯ್ಯ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಕಿಕ್ಕೇರಿಯ ವಿಪ್ರ ಬಾಂಧವ ಸೇವಾ ಸಮಿತಿ ವತಿಯಿಂದ ರಾಮನವಮಿ ಪ್ರಯುಕ್ತ ಪಟ್ಟಾಭಿರಾಮದೇವರಿಗೆ ವಿಶೇಷ ಪೂಜೆ ನಡೆಯಿತು. ಅನಂತಸ್ವಾಮಿ, ಕೆ.ಬಿ.ವೆಂಕಟೇಶ್, ಮಹಬಲಶರ್ಮ, ಅನಿಲ್‌ಶಾಸ್ತ್ರೀ, ಶ್ರೀಹರಿ, ನರಸಿಂಹ, ಸೀತಾರಾಂ ಇದ್ದರು.

ಮಂಡ್ಯ ಗ್ಯಾರಂಟಿಗೆ ವಾರ್ಷಿಕ 1700 ಕೋಟಿ ರೂ.

ಶ್ರೀರಂಗಪಟ್ಟಣ, ಏ.6– ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳಿಗಾಗಿ ಮಂಡ್ಯ ಜಿಲ್ಲೆಗೆ ವಾರ್ಷಿಕ ರೂ.1700 ಕೋಟಿ ಹಣ ಹರಿದು ಬರುತ್ತಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ಪಟ್ಟಣದ ಟಿಎಪಿಸಿಎಂಎಸ್ ಕಲ್ಯಾಣ ಮಂಟಪದಲ್ಲಿ, ಜಿ.ಪಂ, ತಾ.ಪಂ. ಚುನಾವಣೆ ಹಿನ್ನೆಲೆಯಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ಈ ಯೋಜನೆಯಿಂದ ಶ್ರೀರಂಗಪಟ್ಟಣ ತಾಲೂಕಿಗೆ ರೂ. 230 ಕೋಟಿ ಬರುತ್ತಿದೆ. ಪ್ರತಿ ಲೀಟರ್ ಹಾಲಿಗೆ ರೂ.4 ಹೆಚ್ಚಳ ಮಾಡಿರುವ ಸರ್ಕಾರ ಆ ಹಣವನ್ನು ಹಾಲು ಉತ್ಪಾದಕರಿಗೆ ನೀಡಲು ನಿರ್ಧರಿಸಿದೆ. ಈ ಬಗ್ಗೆ ವಿರೋಧಿಗಳು ಅಪಪ್ರಚಾರ ಮಾಡುತ್ತಿದ್ದಾರೆ. ಮಂಡ್ಯದಲ್ಲಿ ಕೃಷಿ ವಿವಿ ಆರಂಭಿಸಲು ಎಚ್.ಡಿ.ಕುಮಾರಸ್ವಾಮಿ ಮತ್ತು ಎಚ್.ಡಿ.



ಶ್ರೀರಂಗಪಟ್ಟಣದಲ್ಲಿ ಭಾನುವಾರ ನಡೆದ ಕಾಂಗ್ರೆಸ್ ಕಾರ್ಯಕರ್ತರ ಸಭೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು.

ರೇವಣ್ಣ ಅವರ ವಿರೋಧ ಇತ್ತು. ಆದರೂ ಲೋಕಸಭೆ ಚುನಾವಣೆಯಲ್ಲಿ ಮಂಡ್ಯದ ಜನ 2.80 ಲಕ್ಷ ಮತಗಳ ಅಂತರದಲ್ಲಿ ಕುಮಾರಸ್ವಾಮಿ ಅವರನ್ನು ಗೆಲ್ಲಿಸಿದರು. ಅಭಿವೃದ್ಧಿ ವಿರೋಧಿಗಳನ್ನು ಗೆಲ್ಲಿಸಿದರೆ ನಮಗೆ ಕಣ್ಣೀರು ಬರುವುದಿಲ್ಲವೆ ಎಂದರು.

ಗಂಗಾ ಆರತಿ ಮಾದರಿಯಲ್ಲಿ ಕೆಆರ್ ಎಸ್‌ನಲ್ಲಿ ಕಾವೇರಿ ಆರತಿ ಆರಂಭಿಸಲು ರಾಜ್ಯ ಸರ್ಕಾರ ರೂ.80 ಕೋಟಿ ಕೊಟ್ಟಿದೆ. ಮಂಡ್ಯದ ಮೆಡಿಕಲ್ ಕಾಲೇಜು, ಮೈಷುಗರ್ ಕಾರ್ಖಾನೆ ಪುನರಾರಂಭ, ತಾಲೂಕು ಕೇಂದ್ರಗಳಲ್ಲಿ ಬಸ್ ಡಿಪೋ ಆರಂಭಿಸಿದ ತೃಪ್ತಿ ಇದೆ. ಸರ್ಕಾರದ ಯೋಜನೆಗಳನ್ನು ಜನರಿಗೆ ತಿಳಿಸಿ ಜಿ.ಪಂ, ತಾ.ಪಂ. ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಹೆಚ್ಚು ಗೆಲ್ಲುವಂತೆ ನೋಡಿಕೊಳ್ಳಿ ಎಂದು ಮನವಿ ಮಾಡಿದರು.

ಶಾಸಕ ರಮೇಶ ಬಂಡಿಸಿದ್ದೇಗೌಡ ಮಾತನಾಡಿ, ನಾಲೆಗಳ ಆಧುನೀಕರಣಕ್ಕೆ ರೂ. 300 ಕೋಟಿ ಅನುದಾನ ತಂದಿದ್ದೇನೆ. ಸೆಸ್ಕ್ ಅಧ್ಯಕ್ಷನಾದ ಬಳಿಕ ಮಹದೇವಪುರ ಮತ್ತು ದರಸಗುಪ್ಪೆ ಗ್ರಾಮಗಳಲ್ಲಿ ಸೆಕ್ಸನ್ ಕಚೇರಿ, ಮಳವಳ್ಳಿಯಲ್ಲಿ ಎಕ್ಸಿಕ್ಯೂಟಿವ್ ಕಚೇರಿ ಆರಂಭಕ್ಕೆ ಚಾಲನೆ ನೀಡಿದ್ದೇನೆ. ನಾಲೆ ಮತ್ತು ರಸ್ತೆಗಳು ಅಭಿವೃದ್ಧಿಯಾಗುತ್ತಿವೆ. ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ಕಾರ್ಯಕರ್ತರು ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂದರು.

ಶಾಸಕ ಪಿ.ಎಂ.ನರೇಂದ್ರಸ್ವಾಮಿ ಮಾತನಾಡಿ, ಲೋಕಸಭೆ ಚುನಾವಣೆಯಲ್ಲಿ ಗೆದ್ದರೆ 24 ಗಂಟೆಗಳಲ್ಲಿ ಕೇಂದ್ರ ಸರ್ಕಾರದಿಂದ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸುವುದಾಗಿ ಹೇಳಿದ್ದ ಕುಮಾರಸ್ವಾಮಿ ಮಾತಿಗೆ ತಪ್ಪಿದ್ದಾರೆ. ಕುಮಾರಸ್ವಾಮಿ ಮತ್ತು ಅವರ ಬಂಧುಗಳು ಬಿಡದಿ ಬಳಿ ಸರ್ಕಾರಿ ಭೂಮಿ ಕಬಳಿಸಿದ್ದು, ನೈತಿಕತೆ ಕಳೆದುಕೊಂಡಿದ್ದಾರೆ ಎಂದು ಟೀಕಿಸಿದರು.

ವೇದಿಕೆಯಲ್ಲಿ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಮಾಜಿ ಶಾಸಕ ಕೆ.ಬಿ. ಚಂದ್ರಶೇಖರ್, ಮನ್‌ಮುಲ್ ಅಧ್ಯಕ್ಷ ಬಿ. ಬೋರೇಗೌಡ, ಜಿಪಂ ಮಾಜಿ ಅಧ್ಯಕ್ಷ ಎಸ್. ಲಿಂಗಣ್ಣ ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಪಿ.ಎಸ್. ಚಂದ್ರಶೇಖರ್, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಸಿ.ಡಿ.ಗಂಗಾಧರ್, ಮುಖಂಡರಾದ ಎನ್.ಪ್ರಕಾಶ್, ಮಿತ್ರ ರಮೇಶ್, ಗಾಯತ್ರಿ, ಅಂಜನಾ ಶ್ರೀಕಾಂತ್, ಪಲ್ಲವಿ ಪಾಲ್ಗೊಂಡಿದ್ದರು.

ಕೆ.ಆರ್.ಪೇಟೆಯಲ್ಲಿ ಶ್ರೀರಾಮನವಮಿ ಆಚರಣೆ



ಕೆ.ಆರ್.ಪೇಟೆಯ ಕನಕದಾಸರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ರಾಮಮಂದಿರದಲ್ಲಿ ಶ್ರೀರಾಮ ನವಮಿಯನ್ನು ಆಚರಿಸಲಾಯಿತು. ತಾಲೂಕು ಎಪಿಎಂಸಿ ಮಾಜಿ ಅಧ್ಯಕ್ಷ ಯಜಮಾನ್ ಹೆಗ್ಗಡಿ ಕೃಷ್ಣೇಗೌಡ ಶ್ರೀ ರಾಮದೇವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ರಾಮನವಮಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ತಾಲೂಕು ಕನಕದಾಸ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎಸ್. ಕುಮಾರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಚಿಕ್ಕಾಡೆ ಸೊಸೈಟಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ

ಪಾಂಡವಪುರ, ಏ.6– ತಾಲೂಕಿನ ಚಿಕ್ಕಾಡೆ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಸಿ.ಆರ್.ದೀಪಕ್, ಉಪಾಧ್ಯಕ್ಷರಾಗಿ ಅಶ್ವಿನಿ ಅವಿರೋಧವಾಗಿ ಆಯ್ಕೆಯಾದರು.

ಭಾನುವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸಿ.ಆರ್.ದೀಪಕ್, ಉಪಾಧ್ಯಕ್ಷ ಸ್ಥಾನಕ್ಕೆ ಅಶ್ವಿನಿ ಅವರನ್ನು ಹೊರತುಪಡಿಸಿ ಉಳಿದ ಯಾವೊಬ್ಬ ನಿರ್ದೇಶಕರು ನಾಮಪತ್ರವನ್ನು ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧವಾಗಿ ಆಯ್ಕೆ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ಘೋಷಿಸಿದರು.

ಸಂದರ್ಭದಲ್ಲಿ ನಿರ್ದೇಶಕರಾದ ವಿಜೇಂದ್ರಮೂರ್ತಿ, ಕಿರಣ್‌ಕುಮಾರ್, ಸಿ.ಆರ್.ರಾಮು, ಗೌತಮ್, ಮಂಜುನಾಥ್, ಲೋಹಿತ್, ರವಿಕುಮಾರ್, ಜಗದೀಶ್ ಸೇರಿದಂತೆ ಮುಖಂಡರು, ಕಾರ್ಯಕರ್ತರು ಹಾಜರಿದ್ದರು.

ಪಾಂಡವಪುರದಲ್ಲಿ ಶ್ರೀರಾಮನವಮಿ



ಪಾಂಡವಪುರದಲ್ಲಿ ಶ್ರೀರಾಮನವಮಿ ಹಬ್ಬದ ಪ್ರಯುಕ್ತ ಪಟ್ಟಣದ ಹಿರೋಡೆ ಬೀದಿಯಲ್ಲಿನ ಶ್ರೀರಾಮಾಂಜನೇಯ ದೇವಸ್ಥಾನದ ಜೀರ್ಣೋದ್ಧಾರ ಸಮಿತಿ ವತಿಯಿಂದ ಮಜ್ಜಿಗೆ, ಪಾನಕ ಹಾಗೂ ಕೋಸಂಬರಿಯನ್ನು ವಿತರಿಸಲಾಯಿತು. ಹಿರೋಡೆ ಬೀದಿಯ ಪಟೇಲ್ ಪ್ರಸಾದ್ ಮತ್ತವರ ಕುಟುಂಬ ಶ್ರೀರಾಮಾಂಜನೇಯ ಹಾಗೂ ಶ್ರೀರಾಮ ಮಂದಿರದ ವಿಶೇಷ ಪೂಜೆ ಸಲ್ಲಿಸಿದರು.

ಏ.10, 36ನೇ ರಾಷ್ಟ್ರೀಯ ಭೂಮಾಪನ ದಿನಾಚರಣೆ


ಮಂಡ್ಯ, ಏ.6– 36ನೇ ರಾಷ್ಟ್ರೀಯ ಭೂಮಾಪನ ದಿನಾಚರಣೆಯನ್ನು ಮುಖ್ಯಮಂತ್ರಿಗಳು, ಉಪಮುಖ್ಯಮಂತ್ರಿಗಳು ಹಾಗೂ ಕಂದಾಯ ಸಚಿವರುಗಳ ಉಪಸ್ಥಿತಿಯಲ್ಲಿ ಏ.10 ರಂದು ಬೆಳಿಗ್ಗೆ 11 ಗಂಟೆಗೆ ಬೆಂಗಳೂರಿನ ವಿಧಾನಸೌಧ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಗಳ ತಾಂತ್ರಿಕ ಸಹಾಯಕರು ಹಾಗೂ ಭೂದಾಖಲೆಗಳ ಉಪ ನಿರ್ದೇಶಕರುಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀರಂಗಪಟ್ಟಣದ ಪಶ್ಚಿಮವಾಹಿನಿ ಬಳಿ ಮರಗಳಿಗೆ ಬೆಂಕಿ

ಮರಕ್ಕೆ ಅರಿಶಿಣ, ಕುಂಕುಮ ಇಟ್ಟು ಕ್ಷಮೆ ಕೋರಿ ವಿನೂತನ ಪ್ರತಿಭಟನೆ

ಶ್ರೀರಂಗಪಟ್ಟಣ, ಏ.6(ಬಿಎಲ್‌ಯು)– ಹಸಿರಿನಿಂದ ಕಂಗೊಳಿಸುತ್ತ ದಾರಿಹೋಕರಿಗೆ ನೆರಳಾಗಿದ್ದ ಮರಗಳಿಗೆ ಕಿಡಿಗೇಡಿಗಳು ಬೆಂಕಿಯಿಟ್ಟು ನಾಶ ಮಾಡುತ್ತಿರುವುದನ್ನು ಖಂಡಿಸಿ ಪರಿಸರ ಪ್ರೇಮಿಗಳು ಮರಕ್ಕೆ ಅರಿಸಿನ–ಕುಂಕುಮ ಹಚ್ಚಿ ಕ್ಷಮೆ ಕೋರುವ ಮೂಲಕ ವಿನೂತನ ಪ್ರತಿಭಟನೆ ನಡೆಸಿದರು.

ಶ್ರೀರಂಗಪಟ್ಟಣದ ಪಶ್ಚಿಮ ವಾಹಿನಿಯಿಂದ ರಂಗನತಿಟ್ಟುವಿಗೆ ಹೋಗುವ ರಸ್ತೆಯಲ್ಲಿ ನಾನಾ ರೀತಿಯ ಭಾರೀ ಮರಗಳಿವೆ. ಕೆಲವು ಮರಗಳು ನೇರಳೆ ಸೇರಿದಂತೆ ಹಲವು ಹಣ್ಣುಗಳನ್ನು ಬಿಡುತ್ತಿದ್ದು, ಕೋತಿಗಳು, ಪಕ್ಷಿಗಳು ಸೇರಿದಂತೆ ಹಲವು ಜೀವಿಗಳಿಗೆ ಆಶ್ರಯ ತಾಣವಾಗಿದೆ. ಆದರೆ ಪರಿಸರ ನಾಶ ಮಾಡುವ ವಿಕೃತ ಮನೋಭಾವದ ವ್ಯಕ್ತಿಗಳು ಮರಗಳ ಬುಡಕ್ಕೆ ಬೆಂಕಿ ಇಡುತ್ತಿದ್ದಾರೆ. ಬೆಂಕಿಯ ಕಿಚ್ಚಿಗೆ ಮರಗಳು



ಒಣಗಿ ಅಸ್ಥಿ ಪಂಜರಗಳಾಂತಾಗುತ್ತಿವೆ.

ಮರಗಳು ಬೆಂಕಿಗಾಹುತಿ ಆಗುತ್ತಿರುವುದನ್ನು ತಡೆಯಲು ಅರಣ್ಯ ಇಲಾಖೆಯವರು ವಿಫಲರಾಗಿದ್ದಾರೆ ಎಂದು ಆರೋಪಿಸಿ ಪರಿಸರ ಪ್ರೇಮಿಗಳು ಅರಣ್ಯ ಇಲಾಖೆಯವರನ್ನು ಎಚ್ಚರಿಸಲು ವಿನೂತನ ಪ್ರತಿಭಟನೆ ನಡೆಸಿದರು. ಬೆಂಕಿಯಿಂದ ಸುಟ್ಟಿರುವ ಮರಗಳಿಗೆ ಅರಿಶಿಣ ಕುಂಕುಮ ಹಚ್ಚಿ ಹೂವು ಹಾಕಿ ಕ್ಷಮೆ ಕೇಳಿದ್ದಾರೆ. ನೆರಳು, ಹಸಿರು, ಹಣ್ಣು, ತಂಪಿನ ವಾತಾವರಣ ನೀಡಿದ ನೀನು ನಮ್ಮನ್ನು ಕ್ಷಮಿಸು ಎಂದು ಕೇಳಿದರು.

ಹಾಗೆಯೇ ಮರ ನಾಶ ಮಾಡಿದವರನ್ನು ಶಿಕ್ಷಿಸುವಂತೆ ದೇವರನ್ನು ಬೇಡಿಕೊಂಡರು. ಪರಿಸರ ಪ್ರೇಮಿಗಳ ಇಂದಿನ ವಿನೂತನ ಪ್ರತಿಭಟನೆಯಲ್ಲಿ ಫರೂಕಿಯಾ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪ್ರೊ.ಇಲಿಯಾಸ್ ಅಹಮ್ಮದ್, ಜನ ಸಂಗ್ರಾಮ್ ಪರಿಷತ್ ರಾಜ್ಯ ಸಮಿತಿ ಸದಸ್ಯ ಪ್ರಸನ್ನ, ಪೈಲ್ವಾನ್ ವಿಜೇಂದ್ರ, ಶೃತಿ, ನಿಂಗರಾಜು, ರಮೇಶ್ ಹಾಗೂ ಇತರರು ಭಾಗವಹಿಸಿದ್ದರು.

ಮೂರನೇ ಪುಟದಿಂದ

ಪರಿಸರವಾದಿಗಳಿಂದ ಬೃಹತ್ ಪಾದಯಾತ್ರೆ

ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ಮುಂಭಾಗದಿಂದ ಆರಂಭವಾದ ಪಾದಯಾತ್ರೆಯಲ್ಲಿ ಅಪಾರ ಸಂಖ್ಯೆಯ ಪರಿಸರ ಪ್ರೇಮಿಗಳು ಪಾಲ್ಗೊಂಡಿದ್ದರು. ಕಗ್ಗಳದಹುಂಡಿ ಗ್ರಾಮದಿಂದ ಮದ್ದೂರು ಚೆಕ್‌ಪೋಸ್ಟ್‌ವರೆಗೆ 2.5 ಕಿ.ಮಿವರೆಗೆ ಪಾದಯಾತ್ರೆ ನಡೆಸಿದರು. ದಾರಿಯುದ್ದಕ್ಕೂ ರಾತ್ರಿ ವಾಹನ ಸಂಚಾರದಿಂದಾಗಿರುವ ಪ್ರಾಣಿ–ಪಕ್ಷಿಗಳ ಸಾವಿನ ಚಿತ್ರಣ ಬಿಂಬಿಸುವ ಬಿತ್ತಿ ಪತ್ರ ಪ್ರದರ್ಶಿಸಿ ಗಮನ ಸೆಳೆದರಲ್ಲದೆ, ಅರಣ್ಯ ಪ್ರದೇಶದಲ್ಲಿ ರಾತ್ರಿ ವಾಹನ ಸಂಚಾರ ಪುನಾರಾರಂಭಿಸುವುದಕ್ಕೆ ವಿರೋಧಿಸುವಂತೆ ಜನರಲ್ಲಿ ಜಾಗೃತಿ ಮೂಡಿಸಿದರು.

ಪ್ರತಿಭಟನಾ ಸಭೆ: ಪಾದಯಾತ್ರೆ ಮೂಲಕ ಆಗಮಿಸಿದ ಪರಿಸರವಾದಿಗಳು ಮದ್ದೂರು ಗೇಟ್ ಬಳಿ ಪ್ರತಿಭಟನಾ ಸಭೆ ನಡೆಸಿದರು. ರಾಜ್ಯ ಸರ್ಕಾರ ಯಾವುದೆ ಕಾರಣಕ್ಕೂ ಕೇರಳದ ಲಾಭಿಗೆ ಮಣಿಯಬಾರದರು. ಬಂಡೀಪುರ ಅರಣ್ಯದಲ್ಲಿ ಹಾದು ಹೋಗಿರುವ ಹೆದ್ದಾರಿಗಳಲ್ಲಿ ರಾತ್ರಿ ವಾಹನ ಸಂಚಾರಕ್ಕೆ ನಿಷೇಧಿಸಿರುವ ಕ್ರಮದಿಂದ ಹಿಂದೆ ಸರಿಯಬಾರದು ಎಂದು ಆಗ್ರಹಿಸಿದರು.

80 ಲಕ್ಷ ಜೀವಿಯಲ್ಲಿ ಮಾನವ ಜೀವ ಒಂದೇ: ವನ್ಯಜೀವಿ ತಜ್ಞ ಸೇನಾನಿ ಮಾತನಾಡಿ, ಭೂಮಿ ಮೇಲೆ 80 ಲಕ್ಷ ಜೀವಿಗಳು ನೆಲೆಸಿವೆ. ಅವುಗಳಲ್ಲಿ ಮಾನವ ಜೀವಿ ಒಂದೆ ಆಗಿದ್ದು, ಉಳಿದ ಜೀವಿಗಳು ಪ್ರಾಣಿ, ಪಕ್ಷಿ, ಕೀಟ ಹಾಗೂ ಇನ್ನಿತರ ಜೀವಿಗಳಾಗಿವೆ. ಈ ಹಿನ್ನೆಲೆಯಲ್ಲಿ ಮಾನವ ಪ್ರಾಣಿ–ಪಕ್ಷಿಗಳನ್ನು ರಕ್ಷಿಸುತ್ತಾನೆ ಎನ್ನುವ ಮಾತು ಸರಿಯಲ್ಲ. ಬಂಡೀಪುರ ನೀಲಗಿರಿ ಜೀವಗೋಳ (ಬಯೋಸ್ಪಿಯರ್)ಗೆ ಸೇರುತ್ತದೆ. ನೀಲಗಿರಿ ಜೀವಗೋಳವು 5500 ಚದರ ಕಿ.ಮೀ. ವ್ಯಾಪ್ತಿ ಹೊಂದಿದೆ. ಬಂಡೀಪುರ ಅರಣ್ಯದಲ್ಲಿ ಕೇವಲ ಆನೆ, ಹುಲಿ ಮಾತ್ರವಲ್ಲದೆ ವಿವಿಧ ಜೀವ ಸಂಕುಲವಿದೆ. ಈ ಜೀವ ಸಂಕುಲದ ಸಂರಕ್ಷಣೆ ಹಿತದೃಷ್ಟಿಯಿಂದ ಬಂಡೀಪುರ ಅರಣ್ಯ ಪ್ರದೇಶ ಹೆದ್ದಾರಿಯಲ್ಲಿ ರಾತ್ರಿ ವಾಹನ ಸಂಚಾರ ನಿಷೇದ ಮುಂದುವರೆಸಬೇಕು ಎಂದು ಒತ್ತಾಯಿಸಿದರು.

ಕಾಡಿದ್ದರೆ ನಾವು: ಪರಿಸರ ತಜ್ಞ ಸಪ್ತಗಿರೀಶ್ ಮಾತನಾಡಿ, ಬಂಡೀಪುರದಲ್ಲಿ ರಾತ್ರಿ ವೇಳೆ ವಾಹನ ಸಂಚಾರ ನಿರ್ಬಂಧ ಮುಂದುವರೆಸಬೇಕು. ಇದು ದೊಡ್ಡ ಜೀವಗೋಳದ ಪ್ರದೇಶ. ಇದನ್ನು ಉಳಿಸಿಕೊಳ್ಳಬೇಕು. ಕಾಡಿದ್ದರೆ ನಾವು. ಪ್ರಾಣಿ, ಪಕ್ಷಿ, ಕಾಡು ಇದ್ದರೆ ಮಳೆ, ಬೆಳೆ ಸರಿಯಾಗುತ್ತದೆ. ಒಂದು ವೇಳೆ ರಾತ್ರಿ ಸಂಚಾರ ಪುನರಾರಂಭಿಸಿದರೆ ಹೋರಾಟ ಮುಂದುವರೆಸುತ್ತೇವೆ ಎಂದು ಎಚ್ಚರಿಸಿದರು.

ಮಾನವ–ಪ್ರಾಣಿ ಸಂಘರ್ಷ ಹೆಚ್ಚಾಗುತ್ತದೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ನಿವೃತ್ತ ನಿರ್ದೇಶಕ ಟಿ.ಬಾಲಚಂದರ್ ಮಾತನಾಡಿ, ಬಂಡೀಪುರ ಉಳಿಸಿ ಅಭಿಯಾನ ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದೆ. ಬಂಡೀಪುರದ ರಸ್ತೆಯಲ್ಲಿ ಕಳೆದ 16 ವರ್ಷದಿಂದ ರಾತ್ರಿ ವೇಳೆ ವಾಹನ ಸಂಚಾರ ನಿಷೇದಿಸುವ ನಿಯಮ ಜಾರಿಯಲ್ಲಿದೆ. ಅಂದಿನಿಂದಲೂ ವನ್ಯಜೀವಿಗಳಿಗೆ ಹಾಗೂ ಕಾಡಂಚಿನ ಗ್ರಾಮಗಳ ಜನರಿಗೆ ಯಾವುದೇ ತೊಂದರೆಯಾಗಿಲ್ಲ. ಈ ನಿಟ್ಟಿನಲ್ಲಿ ರಾತ್ರಿ ಸಂಚಾರ ನಿರ್ಬಂಧ ಮುಂದುವರೆಸಬೇಕು. ರಾತ್ರಿ ವೇಳೆ ವಾಹನ ಸಂಚಾರ ಆರಂಭವಾದರೆ ಮಾನವ–ಪ್ರಾಣಿ ಸಂಘರ್ಷ ಹೆಚ್ಚಾಗುತ್ತದೆ. ಇದರಿಂದ ಪ್ರತಿ ವರ್ಷ 30–40 ಕೋಟಿ ಈಗಾಗಲೇ ಪರಿಹಾರ ನೀಡಲಾಗುತ್ತಿದ್ದು, ಅದರ ಮೊತ್ತ ಹೆಚ್ಚಾಗುವ ಸಾಧ್ಯತೆ ಇದೆ. ಹಾಗಾಗಿ ರಾತ್ರಿ ಸಂಚಾರ ನಿರ್ಬಂಧ ಮುಂದುವರೆಸಬೇಕು ಎಂದರು.

ಹೋರಾಟದಲ್ಲಿ ಕೇರಳದ ಪರಿಸರವಾದಿ ಬಾದ್‌ಶಾ, ಹೋರಾಟಗಾರರಾದ ಜೋಸೆಫ್ ಹೂವರ್, ಮಣಿ, ನಾಗಾರ್ಜುನ್ ಕುಮಾರ್, ಭರತ್ ಸೇರಿದಂತೆ ಇನ್ನಿತರು ಪಾಲ್ಗೊಂಡಿದ್ದರು.



ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದ ಮುಂದೆ ಗಂಧದ ಗುಡಿ ಫೌಂಡೇಷನ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ರಾತ್ರಿ ಸಂಚಾರ ಹಿಂಪಡೆಯುವ ಆಲೋಚನೆ ಸರ್ಕಾರದ ಮುಂದೆ ಇಲ್ಲ

ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ಹೆದ್ದಾರಿಗಳಲ್ಲಿ ಸಂಚಾರ ನಿಷೇದ ಹಿಂಪಡೆಯಲು ಕೇರಳ ಲಾಭಿ ಮಾಡುತ್ತಿಲ್ಲ. ಈಗ ರಾತ್ರಿ ವೇಳೆ ನಾಲ್ಕು ಬಸ್ ಸಂಚಾರಿಸುತ್ತಿವೆ. ಅದರೊಂದಿಗೆ ಇನ್ನೆರಡು ಬಸ್ ಸಂಚಾರಕ್ಕೆ ಅನುಮತಿ ನೀಡಿ ಎಂದು ಕೇಳಿದ್ದಾರೆ. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ತಪ್ಪು ಸಂದೇಶ ರವಾನೆಯಾಗುತ್ತಿದೆ. ರಾತ್ರಿ ವೇಳೆ ವಾಹನ ಸಂಚಾರದ ಅನುಮತಿ ಅಥವಾ ನಿರ್ಬಂಧದ ವಿಚಾರ ಸುಪ್ರೀಂಕೋರ್ಟ್‌ನಲ್ಲಿದೆ. ನ್ಯಾಯಾಲಯದಲ್ಲಿರುವುದರಿಂದ ಎರಡು ರಾಜ್ಯಗಳ ನಡುವೆ ಇಲ್ಲದ ವಿಷಯ ಇದಾಗಿದೆ. ಕೇರಳ ನ್ಯಾಯಾಲಯಕ್ಕೆ ಅಫಿಡವಿಟ್ ಹಾಕಿ, ಅದಕ್ಕೆ ಸುಪ್ರೀಂಕೋರ್ಟ್ ತೀರ್ಮಾನ ಮಾಡುತ್ತದೆ. ರಾಜ್ಯ ಸರ್ಕಾರ ರಾತ್ರಿ ವಾಹನ ಸಂಚಾರ ನಿಷೇಧ ಮುಂದುವರೆಸುವುದಕ್ಕೆ ಬದ್ಧವಾಗಿದೆ. ರಾಜ್ಯ ಸರ್ಕಾರ ಅರಣ್ಯ ಸಂರಕ್ಷಣೆಯ ವಿಷಯದಲ್ಲಿ ಕ್ರಮ ಕೈಗೊಳ್ಳಲಿದೆ. ಅರಣ್ಯ, ವನ್ಯಜೀವಿ ಸಂರಕ್ಷಣೆಯ ವಿಚಾರದಲ್ಲಿ ರಾತ್ರಿ ಸಂಚಾರ ನಿರ್ಬಂಧ ಮುಂದುವರೆಸಬೇಕು ಎನ್ನುವುದು ನನ್ನ ಅಭಿಪ್ರಾಯವೂ ಆಗಿದೆ. ಪರಿಸರವಾದಿಗಳು ಇಂದು ನೀಡಿದ ಮನವಿಯನ್ನು ಸರ್ಕಾರದ ಗಮನಕ್ಕೆ ತರುತ್ತೇವೆ. ನಿಮ್ಮ ಹೋರಾಟಕ್ಕೆ ನನ್ನ ಬೆಂಬಲವೂ ಇದೆ.



– ಗಣೇಶ್ ಪ್ರಸಾದ್, ಶಾಸಕ

ಜನಾಕ್ರೋಶ ಯಾತ್ರೆ

ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ನಡೆಯಲಿದೆ. ಏಪ್ರಿಲ್ 15ರಿಂದ 18ರವರೆಗೆ ಎರಡನೇ ಹಂತದ ಜನಾಕ್ರೋಶ ಯಾತ್ರೆಯು ನಿಪ್ಪಾಣಿ, ಬೆಳಗಾವಿ, ಹುಬ್ಬಳ್ಳಿ, ಬೀದರ್, ಕಲಬುರ್ಗಿ, ವಿಜಯಪುರ, ಬಾಗಲಕೋಟೆ ಗಳಲ್ಲಿ ನಡೆಯಲಿದೆ. ಏಪ್ರಿಲ್ 21ರಿಂದ 25ರ ವರೆಗೆ ಮೂರನೇ ಹಂತದ ಯಾತ್ರೆಯು ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ, ಕೊಪ್ಪಳ, ಗದಗ, ಹಾವೇರಿ, ದಾವಣಗೆರೆ, ಚಿತ್ರದುರ್ಗ, ತುಮಕೂರು ಜಿಲ್ಲೆಗಳಲ್ಲಿ ನಡೆಯಲಿದೆ

ಏಪ್ರಿಲ್ 27ರಿಂದ ಮೇ 3ರ ವರೆಗೆ ನಾಲ್ಕನೇ ಹಂತದ ಯಾತ್ರೆ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆಗಳಲ್ಲಿ ನಡೆಯಲಿದೆ.

ಶ್ರೀರಾಮನವಮಿ ಪ್ರಯುಕ್ತ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಕ್ಕೆ ಚಾಲನೆ

ಮೈಸೂರು,ಏ.6(ಪಿಎಂ)– ನಮ್ಮ ಬದುಕಿಗೆ ಅಗತ್ಯವಿರುವ ಜೀವನ ಮೌಲ್ಯಗಳನ್ನು ರಾಮಾಯಣ ಒಳಗೊಂಡಿದೆ. ಈ ಮಹಾಕಾವ್ಯದಲ್ಲಿರುವ ಸಂಸ್ಕಾರ ಅರಿಯಲು ಭಜನೆ ಹಾಗೂ ಶಾಸ್ತ್ರೀಯ ಸಂಗೀತ ಮಹತ್ವದ ಪಾತ್ರ ವಹಿಸಲಿವೆ ಎಂದು ಶಾಸಕ ಕೆ.ಹರೀಶ್‌ಗೌಡ ಹೇಳಿದರು.

ಮೈಸೂರಿನ ಶ್ರೀರಾಮಪೇಟೆಯಲ್ಲಿರುವ ಕುಂಚಿಟಿಗರ ಸಂಘದ ಶ್ರೀಮತಿ ಆಲಮ್ಮನವರ ಛತ್ರದ ಆವರಣದಲ್ಲಿ ಶ್ರೀರಾಮ ಮಂದಿರದ (ಶ್ರೀರಾಮಪೇಟೆ) ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಶ್ರೀರಾಮ ನವಮಿ ಪ್ರಯುಕ್ತ ಏ.18ರವರೆಗೆ ಹಮ್ಮಿಕೊಂಡಿರುವ ಶಾಸ್ತ್ರೀಯ ಸಂಗೀತ ಕಾರ್ಯಕ್ರಮದ (135ನೇ ವರ್ಷದ ಸಂಗೀತೋತ್ಸವ–2025) ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ನಮ್ಮ ಇಂದಿನ ಯುವ ಪೀಳಿಗೆಗೆ ನಮ್ಮ ಹಿಂದೂ ಸಂಸ್ಕಾರ ಪರಿಚಯಿಸಬೇಕಿದೆ. ಭಜನೆ ಹಾಗೂ ಇಂತಹ ಸಂಗೀತ ಕಾರ್ಯಕ್ರಮಗಳು ನಮ್ಮ ಪುರಾಣದಲ್ಲಿನ ಮೌಲ್ಯಗಳನ್ನು ನಮಗೆ ತಿಳಿಸಲಿವೆ. ನಿಜವಾಗಲೂ ಇದು ಉತ್ತಮ ಕಾರ್ಯಕ್ರಮ. ಈ ನೆಲದ ಸಂಸ್ಕಾರವನ್ನು ಕಾಪಾಡಲು ಇಂತಹ ಕಾರ್ಯಕ್ರಮ ಆಯೋಜನೆ ಮುಖ್ಯ. ನಾನು ಚಿಕ್ಕ ಹುಡುಗನಾಗಿದ್ದಾಗ ರಾಮನವಮಿ ಬಂದರೆ ಅತ್ಯಂತ ಖುಷಿ ಪಡುತ್ತಿದ್ದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿದ ಆಕಾಶವಾಣಿ ಮೈಸೂರು ಉಪ ನಿರ್ದೇಶಕ ಎಸ್.ಎಸ್.ಉಮೇಶ್ ಮಾತನಾಡಿ, ಸಂಗೀತ, ಆಕಾಶವಾಣಿ ಹಾಗೂ ಶ್ರೀರಾಮನ ಕುರಿತ ರಾಮಾಯಣ ಬಹುತೇಕ ಶ್ರವ್ಯ ಮಾಧ್ಯಮವೇ. ಈ ಎಲ್ಲವೂ ಮೂಲತಃ ಕೇಳುವಿಕೆಯಿಂದ ಪಾರಂಪರಗಾತವಾಗಿ ಬಂದಿವೆ. ರಾಮಾಯಣ ಬಾಯಿ ಮಾತು ಹಾಗೂ ಹಾಡುವಿಕೆ ಮೂಲಕ ಸಾವಿರಾರು ವರ್ಷಗಳಿಂದ ಜನರನ್ನು ತಲುಪುತ್ತಾ ಬಂದಿದೆ. ಅದೇ ರೀತಿ ಸಂಗೀತಕ್ಕೆ ಜನಪದವೇ ಮೂಲ. ನಂತರದಲ್ಲಿ ಶಾಸ್ತ್ರೀಯ ರೂಪ ಪಡೆಯಿತು. ಅದೇ ರೀತಿ ಆಕಾಶವಾಣಿ ಕೂಡ ಶ್ರವ್ಯ ಮಾಧ್ಯಮ ಎಂದು ಹೇಳಿದರು.

ನಂತರ ಪಂಡಿತ್ ಪ್ರವೀಣ್ ಗೋಡ್‌ಕಿಂಡಿ ಮತ್ತು ಪಂಡಿತ್ ಶಡಜ್ ಗೋಡ್‌ಕಿಂಡಿ ಅವರ ದ್ವಂದ್ವ ಕೊಳಲು ವಾದನ ನಡೆಯಿತು. ಇದೇ ಆವರಣದಲ್ಲಿ ಏ.18 ರವರೆಗೆ ಪ್ರತಿದಿನ ಸಂಜೆ 6.30ರಿಂದ ರಾತ್ರಿ 9.30ರವರೆಗೆ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳು ನಡೆಯಲಿವೆ. ಹೆಬ್ಬಾಳಿನ ಎಸ್‌ಎಲ್‌ವಿ ಬುಕ್ ಇಂಡಿಯಾ ಪ್ರೈ.ಲಿ.ನ ಮಾಲೀಕ ದಿವಾಕರ್‌ದಾಸ್, ಶ್ರೀ ರಾಮಾಭ್ಯುದಯ ಸಭಾದ ಅಧ್ಯಕ್ಷ ಡಾ.ಎನ್.ಶ್ರೀರಾಮ್, ಕಾರ್ಯದರ್ಶಿ ಫಣೀಂದ್ರ ಹಾಗೂ ಸಂಗೀತಾಸಕ್ತರು ಮತ್ತು ಶ್ರೀರಾಮನ ಭಕ್ತರು ಹಾಜರಿದ್ದರು.



ಮೈಸೂರಿನ ಆಲಮ್ಮನವರ ಛತ್ರದ ಆವರಣದಲ್ಲಿ ಭಾನುವಾರ ಪಂಡಿತ್ ಪ್ರವೀಣ್ ಗೋಡ್‌ಕಿಂಡಿ ಮತ್ತು ಪಂಡಿತ್ ಶಡಜ್ ಗೋಡ್‌ಕಿಂಡಿ ಅವರ ದ್ವಂದ್ವ ಕೊಳಲು ವಾದನ ನಡೆಯಿತು. ಪಂಡಿತ್ ಇಶಾನ್ ಘೋಶ್ ತಬಲದಲ್ಲಿ ಸಹಕರಿಸಿದರು.

ಸೂರ್ಯ ತಿಲಕ

ಸುಮಾರು 4 ನಿಮಿಷಗಳ ಕಾಲ ಇತ್ತು ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಸದಸ್ಯ ಅನಿಲ್ ಮಿಶ್ರಾ ಹೇಳಿದ್ದಾರೆ. ಸೂರ್ಯನ ಕಿರಣಗಳು ರಾಮ ಲಲ್ಲಾನ ಹಣೆಯ ಮೇಲೆ ಬಿದ್ದ ತಕ್ಷಣ ನೆರೆದಿದ್ದ ಭಕ್ತರು ಸಂತೋಷದಿಂದ ನೃತ್ಯ ಮಾಡಿದರು. ಅಯೋಧ್ಯೆಗೆ ತಲುಪಲು ಸಾಧ್ಯವಾಗದವರು ಶ್ರೀರಾಮ ಲಲ್ಲಾನ ಮಹಾ ಮಸ್ತಕಾಭಿಷೇಕದ ನೇರ ಪ್ರಸಾರವನ್ನು ತಮ್ಮ ಸ್ಥಳಗಳಿಂದ ವೀಕ್ಷಿಸಿದರು ಎಂದು ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಪ್ರಕಟಣೆಯಲ್ಲಿ ತಿಳಿಸಿದೆ.

ಮಾಜಿ ಎಂಡಿ ಬಂಧನ

ನಿಗಮ ಸೇರಿದಂತೆ 10 ಕಡೆಗಳಲ್ಲಿ ದಾಳಿ ನಡೆಸಿದ್ದರು. ಈ ವೇಳೆ ದಾಖಲೆಗಳು ಹಾಗೂ ಆಸ್ತಿಗಳ ಡಿಜಿಟಲ್ ದಾಖಲೆಗಳನ್ನು ಜಪ್ತಿ ಮಾಡಿದ್ದರು. ಭೋವಿ ನಿಗಮದಲ್ಲಿ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಆತ್ಮಹತ್ಯೆಗೆ ಶರಣಾದ ಜೀವಾ ಅವರ ಪಾತ್ರ ಇತ್ತಾ ಎಂಬ ಅನುಮಾನ ಇದೆ. ಇದರ ಬಗ್ಗೆ ಸಿಐಡಿ ಅಧಿಕಾರಿಗಳು ವಿಚಾರಣೆ ನಡೆಸಿದ್ದಾರೆ. ಜೀವಾ ಅವರ ಅನ್ನಿಕಾ ಎಂಟರ್ ಪ್ರೈಸಸ್‌ಗೆ ಕೋಟಿ ಕೋಟಿ ಹಣ ವರ್ಗಾವಣೆ ಆಗಿದೆ. ಅನ್ನಿಕಾ ಎಂಟರ್‌ಪ್ರೈಸಸ್‌ಗೆ 7.16 ಕೋಟಿ ರೂ., ಸೋದರಿ ಹೆಸರಿನಲ್ಲಿರುವ ಹರ್ನಿತಾ ಕ್ರಿಯೇಷನ್ಸ್‌ಗೆ ಒಟ್ಟು 10.9 ಕೋಟಿ ರೂ. ವರ್ಗವಾಗಿದೆ. ಇನ್ನುಳಿದ ಮೂರು ಕಂಪನಿಗಳಲ್ಲಿ ನಿಗಮದ ಮಾಜಿ ಪ್ರಧಾನ ವ್ಯವಸ್ಥಾಪಕ ಬಿ.ಕೆ.ನಾಗರಾಜಪ್ಪರವರ ಆಪ್ತರ ಪಾಲುದಾರಿಕೆ ಇದೆ.

ನಿಗಮದ ಮಾಜಿ ಪ್ರಧಾನ ವ್ಯವಸ್ಥಾಪಕಿ ಲೀಲಾವತಿ ಅವರ ಸೋದರಿ ಮಂಗಳ ರಾಮು ಅವರಿಗೆ ಹಂತ ಹಂತವಾಗಿ ಕಳ್ಳ ಹಾದಿಯಲ್ಲಿ 1.48 ಕೋಟಿ ರೂ. ಹಣ ವರ್ಗವಾಗಿದೆ. ಇಷ್ಟೆಲ್ಲಾ ಹಣ ವರ್ಗಾವಣೆ ಆಗಿರೋದು ತನಿಖೆ ವೇಳೆ ಬಯಲಾಗಿತ್ತು.

ಮೈಸೂರಲ್ಲಿ ಅಟಲ್ ವಿರಾಸತ್ ಜಿಲ್ಲಾ ಸಮ್ಮೇಳನ



'ಅಟಲ್ ವಿರಾಸತ್ ಜಿಲ್ಲಾ ಸಮ್ಮೇಳನ'ದಲ್ಲಿ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಚಾಲಕ ಎನ್.ರವಿಕುಮಾರ್, ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್, ಕರ್ನಾಟಕ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್ ಉಪಸ್ಥಿತರಿದ್ದರು.

ಮೈಸೂರು, ಏ.6(ಎಸ್‌ಪಿಎನ್)– ಮೈಸೂರು ನ್ಯೂ ಕಾಂತರಾಜ ಅರಸ್ ರಸ್ತೆಯ ನೇರಂಬಳ್ಳಿ ಸಾವಿತ್ರಮ್ಮ ಸುಬ್ಬರಾವ್ ಕಲ್ಯಾಣ ಮಂಟಪದಲ್ಲಿ ಬಿಜೆಪಿ ಮೈಸೂರು ನಗರ ಮತ್ತು ಜಿಲ್ಲಾ ಘಟಕದ ವತಿಯಿಂದ ಆಯೋಜಿಸಿದ್ದ ಅಟಲ್ ಜಿ ಶತಮಾನೋತ್ಸವ ಅಂಗವಾಗಿ 'ಅಟಲ್ ವಿರಾಸತ್ ಜಿಲ್ಲಾ ಸಮ್ಮೇಳನ' ಭಾನುವಾರ ಜರುಗಿತು.

ಈ ಸಮ್ಮೇಳನದಲ್ಲಿ ಸಂಸದ ಯದುವೀರ್ ಕೃಷ್ಣ ದತ್ತ ಚಾಮರಾಜ ಒಡೆಯರ್ ಮಾತನಾಡಿ, ಭಾರತ ರತ್ನ, ಮಾಜಿ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ತತ್ವಾದರ್ಶಗಳು ಇಂದಿನ ಯುವ ಬಿಜೆಪಿ ಕಾರ್ಯಕರ್ತರಿಗೆ ಮಾದರಿ ಎಂದು ಅಭಿಪ್ರಾಯಪಟ್ಟರು.

ಅಟಲ್ ಜೀ ಅವರು ಲೋಕಸಭಾ ಚುನಾವಣೆ ಪ್ರಚಾರಗಳಲ್ಲಿ ಮೈಸೂರಿಗೆ ಬಂದಾಗ ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಪರವಾಗಿಯೂ ಪ್ರಚಾರ ಮಾಡಿದ್ದಾರೆ ಎಂದ ಸಂಸದರು, ಅಟಲ್ ಬಿಹಾರಿ ವಾಜಪೇಯಿ ಅವರ ರಾಜಕೀಯ ಬದ್ಧತೆ, ಒಂದು ಸಿದ್ಧಾಂತಕ್ಕೆ ಬದ್ಧರಾಗಿ ದೇಶದ ಪ್ರಧಾನ ಮಂತ್ರಿಯಾಗಿ ಕೆಲಸ ಮಾಡುವಲ್ಲಿ ಅವರ ದುಡಿಮೆ ಬಹಳಷ್ಟಿದೆ. ಅಲ್ಲದೆ, ಭಾರತದ ಅಭಿವೃದ್ಧಿಯಲ್ಲಿ ಅವರ ಸ್ವಚ್ಛ ಆಡಳಿತ ಇಂದಿಗೂ ಮಾದರಿಯಾಗಿದೆ ಎಂದರು.

ಅಟಲ್ ವಿರಾಸತ್ ಜಿಲ್ಲಾ ಸಮ್ಮೇಳನದ ಸಂಚಾಲಕ ಎನ್.ರವಿಕುಮಾರ್ ಮಾತನಾಡಿ, ಅಟಲ್‌ಜೀ ಗುಣಗಾನ ಮಾಡಿದರು. ವೇದಿಕೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ, ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಗ್ರಾಮಾಂತರ ಅಧ್ಯಕ್ಷ ಎಲ್.ಆರ್.ಮಹದೇವಸ್ವಾಮಿ, ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಮೇಯರ್ ಶಿವಕುಮಾರ್, ಕರ್ನಾಟಕ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಬಿ.ಪಿ.ಮಂಜುನಾಥ್, ಮುಖಂಡರಾದ ಫಣೀಶ್, ಬಿ.ಎಂ.ರಘು, ಜೋಗಿ ಮಂಜು, ಗೋಕುಲ್‌ಗೋವರ್ಧನ್, ಗಿರಿಧರ್, ಕೇಬಲ್ ಮಹೇಶ್, ಕಿರಣ್ ಜಯರಾಮೇಗೌಡ, ಸುರೇಶ್ ಬಾಬು, ಡಾ.ಅನಿಲ್‌ಥಾಮಸ್, ಟಿ.ರಮೇಶ್ ಸೇರಿದಂತೆ ಇತರರಿದ್ದರು.

ಮೈಸೂರು ಮಿತ್ರ ಸೋಮವಾರ 7 ಏಪ್ರಿಲ್ 2025

ಬಿಎಐ ನೂತನ ಪದಾಧಿಕಾರಿಗಳ ಪದಗ್ರಹಣ



ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆ ನಿವೃತ್ತ ನಿರ್ದೇಶಕಿ ಡಾ.ವಿಜಯಲಕ್ಷ್ಮಿ ದೇಶಮಾನೆ ಅವರನ್ನು ಬಿಎಐ ವತಿಯಿಂದ ಸನ್ಮಾನಿಸಲಾಯಿತು.

ಮೈಸೂರು,ಏ.6(ಆರ್‌ಕೆ)– ಮೈಸೂರಿನ ಜೆಪಿ ನಗರದಲ್ಲಿರುವ ಎಂಬಿಸಿಟಿ ಸಭಾಂಗಣದಲ್ಲಿ ಶುಕ್ರವಾರ ಸಂಜೆ ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ)ದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ನಡೆಯಿತು.

ಬಿಎಐ ಅಧ್ಯಕ್ಷರಾಗಿ ವಿ.ಶ್ರೀನಾಥ, ಉಪಾಧ್ಯಕ್ಷ ಕೆ.ಆರ್.ಪ್ರಭಾಕರರಾವ್, ಕಾರ್ಯದರ್ಶಿ ಸಿ.ಟಿ.ಕೃಷ್ಣ, ಖಜಾಂಚಿ ಎಸ್.ವಾಸುದೇವನ್, ಜಂಟಿ ಕಾರ್ಯದರ್ಶಿ ಎಸ್.ಶಶಿರಾಜ್, ನಿಕಟಪೂರ್ವ ಅಧ್ಯಕ್ಷ ಎ.ಎಸ್.ಯೋಗಾನರಸಿಂಹ, ಸಲಹೆಗಾರರಾಗಿ ಎ.ವಿ.ಶ್ರೀಧರ, ರವೀಂದ್ರ ಭಟ್, ಕಾರ್ಯಕಾರಿ ಸಮಿತಿ ಸೇರಿದಂತೆ ವಿವಿಧ ಸಮಿತಿ ಸದಸ್ಯರು ಅಧಿಕಾರ ವಹಿಸಿಕೊಂಡರು. ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಬೆಂಗಳೂರಿನ ಕಿದ್ವಾಯಿ ಆಸ್ಪತ್ರೆ ನಿವೃತ್ತ ನಿರ್ದೇಶಕಿ ಡಾ.ವಿಜಯಲಕ್ಷ್ಮಿ ದೇಶಮಾನೆ ಅವರನ್ನು ಬಿಎಐ ವತಿಯಿಂದ ಸನ್ಮಾನಿಸಲಾಯಿತು.

ಮುಖ್ಯಮಂತ್ರಿ ಪದಕ ಪುರಸ್ಕೃತರಿಗೆ ಅಭಿನಂದನೆ...



ಮುಖ್ಯಮಂತ್ರಿ ಪದಕ ಸ್ವೀಕರಿಸಿದ ಅರಮನೆ ಭದ್ರತೆ ಇನ್‌ಸ್ಪೆಕ್ಟರ್ ಮಾರುತಿ, ಕೆಪಿಎ ಇನ್‌ಸ್ಪೆಕ್ಟರ್ ಸೋಮಣ್ಣ, ಎನ್‌ಆರ್ ಸಂಚಾರ ಠಾಣೆ ಸಬ್‌ಇನ್‌ಸ್ಪೆಕ್ಟರ್ ಸಿದ್ದೇಶ್, ಮೇಟಗಳ್ಳಿ ಠಾಣೆ ಸಬ್ ಇನ್‌ಸ್ಪೆಕ್ಟರ್ ಶಬರೀಶ್‌ರನ್ನು ಮೈಸೂರು ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್ ತಮ್ಮ ಕಚೇರಿಯಲ್ಲಿ ಅಭಿನಂದಿಸಿದರು.

ಪೂರ್ಣಿಮಾಗೆ ಪಿಹೆಚ್.ಡಿ ಪದವಿ



ಮೈಸೂರು: ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾನಿಲಯದ ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಎಸ್.ಶ್ರೀನಾಥ್ ಅವರ ಮಾರ್ಗದರ್ಶನದಲ್ಲಿ ಬಿ.ವಿ. ಪೂರ್ಣಿಮಾ ಕಂಪ್ಯೂಟರ್ ಸೈನ್ಸ್ ಅಂಡ್ ಇಂಜಿನಿಯರಿಂಗ್ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಶ್ರೀಮತಿ ಶೋಭಾಗೆ ಅಭಿನಂದನೆ...



ಕುಂಬಾರಕೊಪ್ಪಲಿನ ಮಹದೇಶ್ವರ ಸಹಕಾರ ಸಂಘದ ನೂತನ ನಿರ್ದೇಶಕರಾಗಿ ಚುನಾಯಿತರಾದ ಹಾಲಿ ಅಧ್ಯಕ್ಷೆ ಶ್ರೀಮತಿ ಶೋಭಾ ಅವರನ್ನು ನಗರ ಕಾಂಗ್ರೆಸ್ ಉಪಾಧ್ಯಕ್ಷ ಟಿ.ಸುಂದರ್‌ಕುಮಾರ್, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಪಡುವಾರಹಳ್ಳಿ ಎಂ.ರಾಮಕೃಷ್ಣ, ಎನ್.ಯೋಗಾನಂದ, ಮಾಜಿ ನಿರ್ದೇಶಕ ಎಸ್.ಆರ್.ರವಿಕುಮಾರ್, ದಿ ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ವಿ.ಮಧು, ಹೇಮಾ ಆತ್ಮೀಯವಾಗಿ ಅಭಿನಂದಿಸಿದರು.

ರಂಗಾಯಣ ಚಿಣ್ಣರ ಮೇಳ ಅರ್ಜಿ ಕೇವಲ 70 ನಿಮಿಷದಲ್ಲೇ ವಿತರಣೆ

- ಮುಂಜಾನೆ 3ರಿಂದಲೇ ಕಾದು ಕುಳಿತಿದ್ದ ಪೋಷಕರು
- 250 ಅರ್ಜಿ ವಿತರಣೆ, ಹಿಂದಿರುಗಿಸಲು ಏ.9 ಕೊನೆ ದಿನ





ರಂಗಾಯಣದ ಚಿಣ್ಣರ ಮೇಳ ಅರ್ಜಿ ಪಡೆಯಲು ಸರದಿ ಸಾಲಿನಲ್ಲಿ ನಿಂತಿರುವ ಪೋಷಕರು. ಅರ್ಜಿ ಸಿಗುವ ನಿರೀಕ್ಷೆಯಲ್ಲಿ ರಂಗಾಯಣ ಗೇಟ್ ಮುಂದೆ ಕಾಯುತ್ತಿರುವುದು.

ಮೈಸೂರು,ಏ.6(ಎಂಟಿವೈ)– ಪ್ರತಿಷ್ಠಿತ ಮೈಸೂರು ರಂಗಾಯಣದಲ್ಲಿ ಏ.14ರಿಂದ ಮೇ 10ರವರೆಗೆ ನಡೆಯಲಿರುವ 'ಚಿಣ್ಣರ ಮೇಳ'ದ ಅರ್ಜಿ ಪಡೆಯಲು ವಿವಿಧೆಡೆಯಿಂದ ಆಗಮಿಸಿದ್ದ ಪೋಷಕರು ಮುಗಿಬಿದ್ದರೆ, 70 ನಿಮಿಷದಲ್ಲಿಯೇ 250 ಅರ್ಜಿ ವಿತರಿಸಲಾಯಿತು.

ಪ್ರತಿವರ್ಷದಂತೆ ರಂಗಾಯಣದಲ್ಲಿರುವ ನಡೆಯುವ ಚಿಣ್ಣರ ಮೇಳಕ್ಕೆ ಮಕ್ಕಳನ್ನು ಸೇರಿಸಲು ಮೈಸೂರು ಮಾತ್ರವಲ್ಲದೆ ಮಂಡ್ಯ ಸೇರಿದಂತೆ ವಿವಿಧೆಡೆಯಿಂದ ಪೋಷಕರು ಆಗಮಿಸಿ, ಅರ್ಜಿ ಪಡೆಯಲು ಹರಸಾಹಸ ಮಾಡಿದರು. ಬೇಸಿಗೆಯಲ್ಲಿ ರಂಗಾಯಣವು ನಡೆಸುವ ಚಿಣ್ಣರ ಮೇಳಕ್ಕೆ ಭಾರಿ ಬೇಡಿಕೆಯಿದ್ದು, ಈ ಬಾರಿ 250 ಮಕ್ಕಳಿಗೆ ಬೇಸಿಗೆ ಶಿಬಿರದಲ್ಲಿ ಪಾಲ್ಗೊಳ್ಳುವ ಅವಕಾಶ ಇರುವುದರಿಂದ ಅರ್ಜಿ ಪಡೆಯಲು ಮುಂಜಾನೆಯಿಂದಲೇ ಪೋಷಕರು ರಂಗಾಯಣದ ಮುಂದೆ ಸರದಿ ಸಾಲಿನಲ್ಲಿ ನಿಂತಿದ್ದ ದೃಶ್ಯ ಕಂಡುಬಂದಿತು.

ಪೋಷಕರಿಂದಲೇ ಲಿಸ್ಟ್ ಸಿದ್ಧ: ರಂಗಾಯಣವು ಮೊದಲು ಬರುವ 250 ಮಂದಿಗೆ ಮಾತ್ರ ಚಿಣ್ಣರ ಮೇಳದ ಅರ್ಜಿ ವಿತರಿಸುವುದಕ್ಕೆ ಪ್ರಕಟಿಸಿದ್ದರಿಂದ ಮುಂಜಾನೆ 3 ಗಂಟೆಯಿಂದಲೇ ಚಿಣ್ಣರ ಮೇಳದ ಅರ್ಜಿ ಪಡೆಯಲು ಆಗಮಿಸಿದ್ದ ಪೋಷಕರು ತಾವೇ ಬೇಸಿಗೆ ಶಿಬಿರದ ಅರ್ಜಿ ಪಡೆಯಲು ಬರುವವರ ಪಟ್ಟಿ ಸಿದ್ಧ ಮಾಡಿ, ಮೊಬೈಲ್ ಸಂಖ್ಯೆ ಹಾಗೂ ಮೇಳಕ್ಕೆ ಸೇರಿಸುವ ಮಕ್ಕಳ ಹೆಸರನ್ನು ಬರೆದುಕೊಂಡರು.

ಭದ್ರತೆಗಾಗಿ ನಿಯೋಜಿಸಿದ್ದ ಪೊಲೀಸರು ಪೋಷಕರು ತಯಾರಿಸಿದ್ದ ಪಟ್ಟಿಯಂತೆ ಕ್ರಮಬದ್ಧವಾಗಿ ಸರದಿ ಸಾಲಿನಲ್ಲಿ ನಿಲ್ಲಿಸಿ, ಅರ್ಜಿ ವಿತರಣೆ ಯಾವುದೇ ಗೊಂದಲವಿಲ್ಲದೆ ಸುಸೂತ್ರವಾಗಿ ನೆರವೇರುವಂತೆ ನೋಡಿಕೊಂಡರು.

ಚಿಣ್ಣರ ಮೇಳದ ಅರ್ಜಿ ಪಡೆಯಲು ಮುಂಜಾನೆ 3 ಗಂಟೆಯಿಂದಲೇ ಪೋಷಕರು ಆಗಮಿಸಿದ್ದರಾದರೂ, ಅರ್ಜಿ ವಿತರಣೆ ಬೆಳಗ್ಗೆ 10ಕ್ಕೆ ಆರಂಭಿಸಲಾಯಿತು. ಅಷ್ಟರಲ್ಲಾಗಲೇ 250 ಮಂದಿ ಪಟ್ಟಿ ಸಿದ್ಧವಾಗಿತ್ತು. ಮೊದಲು ಬಂದ 250 ಮಂದಿಯನ್ನು ರಂಗಾಯಣದ ಆವರಣದಲ್ಲಿ ಸರದಿ ಸಾಲಿನಲ್ಲಿ ನಿಲ್ಲಿಸಲು ಅವಕಾಶ ಮಾಡಿಕೊಟ್ಟರು. ಆ ನಂತರ ಬಂದವರನ್ನು ರಂಗಾಯಣದ ಗೇಟ್ ಒಳಗೆ ಬಿಡಲಿಲ್ಲ. ಇದರಿಂದ 10 ಗಂಟೆಗೆ ಅರ್ಜಿ ವಿತರಣೆ ಆರಂಭವಾಗಿ 11.10ರ ವೇಳೆಗೆ ಮುಕ್ತಾಯವಾಯಿತು.

ಕಾದು ಕುಳಿತ 58 ಮಂದಿ: ಚಿಣ್ಣರ ಮೇಳದ 250 ಅರ್ಜಿ ವಿತರಿಸಿದರೂ, ನಮಗೂ ಸಿಗಬಹುದೇನೊ ಎಂಬ ದೃಢ ವಿಶ್ವಾಸದಿಂದ 58 ಮಂದಿ ಗೇಟ್ ಬಳಿಯೇ ಕಾಯುತ್ತಿದ್ದರು. ಎಲ್ಲರ ಅರ್ಜಿ ವಿತರಣೆಯಾದ ಬಳಿಕ, ಗೇಟ್ ಬಳಿ ಕಾಯುತ್ತಿದ್ದವರನ್ನು ರಂಗಾಯಣದ ಒಳಗೆ ಬಿಡಲಾಯಿತು. ಆದರೆ, ಅರ್ಜಿ ಸಿಗಲಿಲ್ಲ. ಹೆಚ್ಚುವರಿಯಾಗಿ ಇನ್ನಷ್ಟು ಮಕ್ಕಳಿಗೆ ಅವಕಾಶ ನೀಡಲು ನಿರ್ಧರಿಸಿದರೆ, ಅರ್ಜಿ ನೀಡಲು ಮುಂದಾದರೆ ತಮ್ಮ ಹೆಸರನ್ನು ಆದ್ಯತೆ ಮೇಲೆ ಪರಿಗಣಿಸುವಂತೆ 58 ಮಂದಿ ಲಿಸ್ಟ್ ಅನ್ನು ನೀಡಿದರು.

ಹಿಂದಿರುಗಿಸಲು ಏ.9 ಕೊನೆ ದಿನ: 100 ರೂ. ಪಾವತಿಸಿ ಚಿಣ್ಣರ ಮೇಳ ಅರ್ಜಿ ಪಡೆದ ಪೋಷಕರು ಅದನ್ನು ಭರ್ತಿ ಮಾಡಿ, ರಂಗಾಯಣದ ನಿರ್ದೇಶಕರ ಹೆಸರಿಗೆ 3500 ರೂ. ಮೊತ್ತದ ಡಿಡಿ ಹಾಗೂ ಮಕ್ಕಳ ವಯಸ್ಸಿನ ದಾಖಲೆ, ಎರಡು ಭಾವಚಿತ್ರದೊಂದಿಗೆ ಏ.9ರಂದು ಸಂಜೆ 5ಗಂಟೆಯೊಳಗೆ ಸಲ್ಲಿಸಬೇಕಾಗಿದೆ. ಅರ್ಜಿ ಸಲ್ಲಿಕೆಯಾದ ನಂತರ ಮಕ್ಕಳನ್ನು ವಿವಿಧ ಗುಂಪುಗಳಾಗಿ ವಿಂಗಡಿಸಿ, ಏ.14ರಿಂದ ಮೇ 10ರವರೆಗೆ ಪ್ರತಿದಿನ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಚಿಣ್ಣರ ಮೇಳ ನಡೆಯಲಿದೆ.

ಖಾಸಗಿ ಸಂಸ್ಥೆಗಳ ಮೇಳದ ಮಾಹಿತಿ: ರಂಗಾಯಣದ ಚಿಣ್ಣರ ಮೇಳದ ಅರ್ಜಿ ಪಡೆಯಲು ಬಂದಿದ್ದ ಮಕ್ಕಳ ಪೋಷಕರಿಗೆ ರಂಗಾಯಣ ಗೇಟ್ ಬಳಿ ಖಾಸಗಿ ಸಂಸ್ಥೆಗಳು ನಡೆಸುವ ಚಿಣ್ಣರ ಮೇಳದ ಭಿತ್ತಿಪತ್ರ ನೀಡಿ, ಮಕ್ಕಳನ್ನು ಬೇಸಿಗೆ ಶಿಬಿರಕ್ಕೆ ಸೇರಿಸುವಂತೆ ಆಯಾ ಶಿಬಿರದ ಆಯೋಜಕರು ದುಂಬಾಲು ಬೀಳುತ್ತಿದ್ದರು.

ಮಕ್ಕಳ ಕರೆದೊಯ್ಯಲು ವಾಹನ ವ್ಯವಸ್ಥೆ: ಚಿಣ್ಣರ ಮೇಳದ ಅರ್ಜಿ ಪಡೆದ ಪೋಷಕರಿಗೆ ರಂಗಾಯಣ ಆವರಣದಲ್ಲಿ ಕೆಲ ಆಟೋರಿಕ್ಷಾ ಹಾಗೂ ಶಾಲಾ ಮಕ್ಕಳನ್ನು ಕರೆದೊಯ್ಯುವ ವಾಹನಗಳ ಚಾಲಕರು ತಮ್ಮ ಮೊಬೈಲ್ ನಂಬರ್ ನೀಡಿ, ಅಗತ್ಯ ಬಿದ್ದರೆ ಬೇಸಿಗೆ ಶಿಬಿರಕ್ಕೆ ಮಕ್ಕಳನ್ನು ಕರೆದುಕೊಂಡು ಮತ್ತೆ ಮನೆಗೆ ಕರೆತರುವುದಾಗಿ ಹೇಳಿ ಮಾಹಿತಿ ಹೇಳಿ ಪೋಷಕರ ನಂಬರ್ ಪಡೆಯುತ್ತಿದ್ದರು.

ಆ.28, ಮೈಸೂರಲ್ಲಿ ರಾಜ್ಯ ಮಟ್ಟದ ಪತ್ರಿಕಾ ವಿತರಕರ ಸಮ್ಮೇಳನ

ಪೂರ್ವಭಾವಿ ಸಭೆಯಲ್ಲಿ ಪೋಸ್ಟರ್ ಬಿಡುಗಡೆ



ಮೈಸೂರಿನಲ್ಲಿ ನಡೆಸಲುದ್ದೇಶಿಸಿರುವ ರಾಜ್ಯ ಮಟ್ಟದ ಪತ್ರಿಕಾ ವಿತರಕರ ಸಮ್ಮೇಳನದ ಪೋಸ್ಟರ್ ಬಿಡುಗಡೆ ಮಾಡಲಾಯಿತು.

ಮೈಸೂರು, ಏ. 6(ಆರ್‌ಕೆ)– ಆಗಸ್ಟ್ 28ರಂದು ರಾಜ್ಯ ಮಟ್ಟದ ಪತ್ರಿಕಾ ವಿತರಕರ ರಾಜ್ಯ ಮಟ್ಟದ ಸಮ್ಮೇಳನವನ್ನು ಮೈಸೂರಿನಲ್ಲಿ ನಡೆಸಲು ನಿರ್ಧರಿಸಲಾಗಿದೆ.

ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ ಹಾಗೂ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಸಹಯೋಗದಲ್ಲಿ ಆಯೋಜಿಸಲುದ್ದೇಶಿಸಿರುವ ಸಮ್ಮೇಳನಕ್ಕೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಸುಮಾರು 2,500ರಿಂದ 3,000 ಮಂದಿ ಪತ್ರಿಕಾ ವಿತರಕರು ಭಾಗವಹಿಸುವ ನಿರೀಕ್ಷೆ ಇದೆ ಎಂದು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಅಧ್ಯಕ್ಷ ಶಂಭುಲಿಂಗ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ನಡೆದ ಸಮ್ಮೇಳನ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಪತ್ರಿಕಾ ವಿತರಕರು ಅನುಭವಿಸುತ್ತಿರುವ ಹಲವು ಸಮಸ್ಯೆಗಳಿಗೆ ಕಾನೂನಾತ್ಮಕವಾಗಿ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಪತ್ರಿಕಾ ವಿತರಕರ ಒಕ್ಕೂಟ ಕೆಲಸ ಮಾಡುತ್ತಿದ್ದು, ಈಗಾಗಲೇ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆಸಿದ ನಾಲ್ಕು ಸಮ್ಮೇಳನಗಳಲ್ಲಿ ಸರ್ಕಾರದ ಗಮನ ಸೆಳೆದು ಕೆಲ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲಾಗಿದೆ ಎಂದರು.

ಪತ್ರಿಕಾ ವಿತರಕರಿಗೆ ಆರೋಗ್ಯ ಸುರಕ್ಷತೆ, ನಿವೇಶನಗಳಂತಹ ಮೂಲ ಸೌಲಭ್ಯಗಳಿಗಾಗಿ ನಿರಂತರ ಹೋರಾಡಬೇಕಾಗಿರುವುದರಿಂದ ರಾಜ್ಯದ ಎಲ್ಲಾ ಜಿಲ್ಲೆಗಳನ್ನು ಒಗ್ಗೂಡಿಸಿ ಒಂದೇ ವೇದಿಕೆಗೆ ಕರೆತಂದು ಪ್ರಚಲಿತ ವಿದ್ಯಮಾನಗಳ ಬಗ್ಗೆ ಚರ್ಚಿಸಲು ಮೈಸೂರಲ್ಲಿ ಆ.28ರಂದು 5ನೇ ರಾಜ್ಯ ಮಟ್ಟದ ಸಮ್ಮೇಳನ ಆಯೋಜಿಸಲಾಗುತ್ತಿದೆ ಎಂದು ಶಂಭುಲಿಂಗ ತಿಳಿಸಿದರು.

ಒಕ್ಕೂಟದ ಉಪಾಧ್ಯಕ್ಷ ಶಿವಶಾಂತ, ಪ್ರಧಾನ ಕಾರ್ಯದರ್ಶಿ ಸಂಗಮ್ ಸುರೇಶ್, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ನಿಕಟಪೂರ್ವ ಅಧ್ಯಕ್ಷ ಎಸ್.ಟಿ. ರವಿಕುಮಾರ್, ವಿಜಯವಾಣಿ ಸ್ಥಾನಿಕ ಸಂಪಾದಕ ಎಂ.ಆರ್.ಸತ್ಯನಾರಾಯಣ, ಸಂಯುಕ್ತ ಕರ್ನಾಟಕದ ಬಸವರಾಜು, ಎಂ.ಟಿ.ಮಹದೇವು, ಬಿ ಟಿವಿಯ ಬಿ.ರಾಘವೇಂದ್ರ, ವಿಶ್ವದೂತ ಸಂಪಾದಕ ಎಂ. ಸುಬ್ರಹ್ಮಣ್ಯ, ಆಂದೋಲನದ ಶ್ರೀಧರ ಭಟ್, ಪ್ರಕಾಶ್, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜೆ.ಎಸ್. ಹೋಮದೇವ, ಎಂ.ನಾಗರಾಜು, ಸಿ.ಶಿವಣ್ಣ, ಎಂ.ಮಂಜು, ಸಿ.ರಾಜಶೇಖರ್, ಪವನ್, ರಮೇಶ್, ಸಿ.ಟಿ. ಹರೀಶ್, ಶ್ರೀಕಾಂತ್, ಗೋವಿಂದ, ಈಶ್ವರ ಪ್ರಸಾದ್, ಗಿರೀಶ್ ಇತರರು ಸಭೆಯಲ್ಲಿ ಭಾಗವಹಿಸಿ, ಸಲಹೆ ನೀಡಿದರು.

ಗುಂಡು ಹಾರಿಸಿಕೊಂಡು ಯೋಧ ಆತ್ಮಹತ್ಯೆ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ರಾಂಬನ್ ಜಿಲ್ಲೆಯ ಸೇನಾ ಶಿಬಿರ ದಲ್ಲಿ ಭಾನುವಾರ ಬೆಳಗ್ಗೆ ಸೈನಿಕನೊಬ್ಬ ತನ್ನ ಸರ್ವೀಸ್ ರೈಫಲ್ ನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಧರ್ಮುಂಡ್ ಮಿಲಿಟರಿ ಆಸ್ಪತ್ರೆಯಲ್ಲಿ ಸೆಂಟ್ರಿ ಕರ್ತವ್ಯದಲ್ಲಿದ್ದ 26ನೇ ರಾಷ್ಟ್ರೀಯ ರೈಫಲ್ಸ್‌ನ ಸಿಪಾಯಿ ವಿಜಯ್‌ಕುಮಾರ್ ಇಂದು ಬೆಳಗಿನ ಜಾವ 3.40ಕ್ಕೆ ಗುಂಡು ಹಾರಿಸಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಅವರ ಆತ್ಮಹತ್ಯೆಯ ಹಿಂದಿನ ಕಾರಣ ತಕ್ಷಣಕ್ಕೆ ತಿಳಿದುಬಂದಿಲ್ಲ. ಶವವನ್ನು ಮರಣೋತ್ತರ ಪರೀಕ್ಷೆ ಗಾಗಿ ರಾಂಬನ್ ಜಿಲ್ಲಾ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಯೋಧ ಆತ್ಮಹತ್ಯೆ ಅಧಿಕಾರಿಗಳ ಪ್ರಕಾರ, ವಿಜಯ್ ಕುಮಾರ್ ರಾಜಸ್ಥಾನ ಮೂಲದವರಾಗಿದ್ದು, ಸುಮಾರು ಎರಡು ತಿಂಗಳ ರಜೆ ಪಡೆದ ನಂತರ ಮಾ.28ರಂದು ಮತ್ತೆ ಕರ್ತವ್ಯಕ್ಕೆ ಹಾಜರಾಗಿದ್ದರು.

ಯುಗಾದಿ ಕವಿ–ಕಾವ್ಯ ಸಂಭ್ರಮ; ರಾಜ್ಯಮಟ್ಟದ ಕವಿ ಸಮ್ಮೇಳನ

ಮನಸ್ಸುಗಳು ಸದೃಢವಾಗುವ ಬದಲು ದುರ್ಬಲವಾಗುತ್ತಿವೆ

ವಿಶ್ರಾಂತ ಕುಲಪತಿ ಡಾ.ಸಬಿಹಾ ಭೂಮಿಗೌಡ ವಿಷಾದ



ಮೈಸೂರಿನ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಏರ್ಪಡಿಸಿದ್ದ ಯುಗಾದಿ ಕವಿ– ಕಾವ್ಯ ಸಂಭ್ರಮ–ರಾಜ್ಯಮಟ್ಟದ ಕವಿಮೇಳದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸಮಾಜಮುಖಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು, ಏ.6(ಜಿಎ)–ಇತ್ತೀಚೆಗೆ ಮನಸ್ಸುಗಳು ಸದೃಢವಾಗುವ ಬದಲು ದುರ್ಬಲವಾಗುತ್ತಿವೆ ಎಂದು ವಿಶ್ರಾಂತ ಕುಲಪತಿ ಹಾಗೂ ಸಾಹಿತಿ ಡಾ.ಸಬಿಹಾ ಭೂಮಿಗೌಡ ವಿಷಾದ ವ್ಯಕ್ತಪಡಿಸಿದರು.

ಮೈಸೂರಿನ ವಿಜಯನಗರದಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಸ್ಪಂದನ ಸಾಂಸ್ಕೃತಿಕ ಪರಿಷತ್ತು, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿಸ್ಮಯ ಪ್ರಕಾಶನವು ಭಾನುವಾರ ಏರ್ಪಡಿಸಿದ್ದ ಯುಗಾದಿ ಕವಿ–ಕಾವ್ಯ ಸಂಭ್ರಮ–ರಾಜ್ಯಮಟ್ಟದ ಕವಿಮೇಳವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಎಲ್ಲವನ್ನು ಸಮಚಿತ್ತತೆಯಿಂದ ಸ್ವೀಕರಿಸುವ ಮನೋಭಾವ ಕ್ಷೀಣಿಸುತ್ತಿದ್ದು, ಈ ಬಗ್ಗೆ ಪ್ರತಿಯೊಬ್ಬರೂ ಆತ್ಮಾವಲೋಕನ ಮಾಡಿಕೊಳ್ಳಬೇಕು. ನಾವು ಸಮಚಿತ್ತತೆಯಿಂದ ಸ್ವೀಕರಿಸಲು ಸೋಲುತ್ತಿದ್ದು, ಮನಸ್ಸುಗಳು ಸದೃಢವಾಗುವ ಬದಲು ದುರ್ಬಲವಾಗುತ್ತಿವೆ. ಬದುಕಿಗೆ ಬೆನ್ನು ತಿರುಗಿಸುವುದನ್ನು ನೋಡಿದರೆ ಗ್ರಹಿಸುವ ಕ್ರಮದಲ್ಲಿ ತಪ್ಪಿದೆ ಎನಿಸುತ್ತಿದೆ ಎಂದು ಅವರು ವಿಷಾದಿಸಿದರು.

ಪ್ರಸ್ತುತ ಮನಸ್ಸುಗಳು ಬೇರೆ ಬೇರೆಯಾಗುವ ಸಂದರ್ಭದಲ್ಲಿ ಎಲ್ಲರೂ ಒಂದೆಡೆ ಸೇರುವುದೇ ಕಷ್ಟ ಎಂಬ ಪರಿಸ್ಥಿತಿಯಲ್ಲಿ ಮೂರು ಸಂಘಟನೆಗಳು ಸೇರಿ ವಿಭಿನ್ನ ಮನಸ್ಸುಗಳನ್ನು ಒಂದೆಡೆ ಸೇರಿಸಿ, ಸಂಬಂಧವನ್ನು ಗಟ್ಟಿಗೊಳಿಸುತ್ತಿರುವುದು ಉತ್ತಮವಾದ ಬೆಳವಣಿಗೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಅಪರ ಜಿಲ್ಲಾಧಿಕಾರಿ ಹಾಗೂ ಸಾಹಿತಿ ಡಾ.ಪಿ.ಶಿವರಾಜು ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಹೆಸರಿನಲ್ಲಿ ಪ್ರಶಸ್ತಿ ಸ್ವೀಕಾರ ಮಾಡಲು ಅವರಷ್ಟೇ ವ್ಯಕ್ತಿತ್ವದ ತೂಕವಿರಬೇಕು. ಅಂತಹ ವ್ಯಕ್ತಿತ್ವದವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಶ್ಲಾಘನೀಯ ಎಂದರು.

ಕೆಡಕು ಬಯಸುವವರಿಗೂ ಒಳಿತು ಬಯಸುವವನೇ ಕವಿ. ಎಲ್ಲರ ಮನಸ್ಸಿನಲ್ಲಿಯೂ ಕವಿ ಇರಲಿ. ಕವಿತೆ ಮನಸ್ಸಿನ ಪ್ರತಿಫಲನವಾಗಿರುತ್ತದೆ. ಕವಿತೆಯಲ್ಲಿ ಕವಿಯ ವ್ಯಕ್ತಿತ್ವ ಪ್ರಕಟವಾಗುತ್ತದೆ. ನಾವೆಲ್ಲಾ ಪ್ರಕೃತಿಯ ಬಾಡಿಗೆದಾರರೇ ಹೊರತು ವಾರಸುದಾರರಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು ಎಂದ ಅವರು, ಯುಗಾದಿ ಹಬ್ಬ ಮುಗಿದಿದೆ. ಆದರೆ ಇಲ್ಲಿ ಸಾಹಿತ್ಯ ಯುಗಾದಿ ನಡೆಯುತ್ತಿದೆ ಎಂದು ಸಂತಸ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕಾವೇರಿ ಕನ್ನಿಕಾ ವಿದ್ಯಾಸಂಸ್ಥೆ ಅಧ್ಯಕ್ಷೆ ಎಂ.ಸಿ ಚೆಂದಮ್ಮ, ಹಿರಿಯ ಸಾಹಿತಿ ಮತ್ತು ವಕೀಲ ಎಲ್.ಪುರುಷೋತ್ತಮ, ಕನ್ನಡ ಹೋರಾಟಗಾರ ಚಾಮರಾಜನಗರ ಚಾ.ರಂ ಶ್ರೀನಿವಾಸಗೌಡ, ದಕ್ಷ ಕಾಲೇಜು ಅಧ್ಯಕ್ಷ ಪಿ.ಜಯಚಂದ್ರ ರಾಜು, ಮಹಿಳಾ ಪರ ಹೋರಾಟಗಾರ್ತಿ ಮಂಡ್ಯ ರಜನಿ ರಾಜ್ ಅವರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಸಮಾಜಮುಖಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕವಿಗೋಷ್ಠಿಯಲ್ಲಿ ವಿವಿಧ ಕಡೆಗಳಿಂದ, 70ಕ್ಕೂ ಹೆಚ್ಚು ಮಂದಿ ಕವಿತೆ ವಾಚನ ಮಾಡಿದರು. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸ್ಪಂದನ ಸಾಂಸ್ಕೃತಿಕ ಪರಿಷತ್ತು ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಶಿಕ್ಷಕ ನಾ.ಗಂಗಾಧರಪ್ಪ, ಹಿರಿಯ ಲೇಖಕ ಹಾಗೂ ಸಂಘಟಕ ಬನ್ನಂಗಾಡಿ ಸಿದ್ಧಲಿಂಗಯ್ಯ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರಲ್ಲಿ ಎರಡು ದಿನ ಶಾಪಿಂಗ್ ಉತ್ಸವ

ಮೈಸೂರು, ಏ.6(ಜಿಎ)–ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಹೈಲೈಫ್ ಸಂಸ್ಥೆ ವತಿಯಿಂದ ಏ.7 ಮತ್ತು 8ರಂದು ಭಾರತೀಯ ಫ್ಯಾಷನ್ ಕುರಿತ ಎರಡು ದಿನಗಳ ಶಾಪಿಂಗ್ ಉತ್ಸವ ಆಯೋಜಿಸಲಾಗಿದೆ ಎಂದು ಆಯೋಜಕಿ ಶೋಮಿಕಾ ಎಸ್. ರಾವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿಯ ವಿವಾಹ ಋತು ಹಿನ್ನೆಲೆಯಲ್ಲಿ ವಧುಗಳಿಗೆ ಅಗತ್ಯವಾದ ಎಲ್ಲ ರೀತಿಯ ಪ್ರಸಿದ್ಧ ವಿನ್ಯಾಸಕರ ಉಡುಪು, ಲೆಹಂಗಾ, ಸೀರೆ, ಆಧುನಿಕ ಗೌನ್, ವಿಶಿಷ್ಟ ಆಭರಣ ಪ್ರದರ್ಶನ ಮತ್ತು ಮಾರಾಟಕ್ಕೆ ಇರಲಿವೆ. ವಧುಗಳು ತಮ್ಮ ಶೈಲಿ ಮತ್ತು ಆದ್ಯತೆಗಳಿಗೆ ಅನುಗುಣವಾಗಿ ವಿನ್ಯಾಸಕರ ಉಡುಪು ಆಯ್ಕೆ ಮಾಡಲಾಗಿದೆ. ಕರ್ನಾಟಕ ಮಾತ್ರವಲ್ಲದೇ ಮಹಾರಾಷ್ಟ್ರ, ಪಂಜಾಬ್, ದೆಹಲಿ ಸೇರಿದಂತೆ ದೇಶದ ನಾನಾ ಭಾಗದ ವಸ್ತ್ರಾಭರಣಕ್ಕೆ ಒಂದೇ ಸೂರಿನಲ್ಲಿ ದೊರೆಯುತ್ತದೆ. ಬೆಳಗ್ಗೆ 10 ಗಂಟೆಯಿಂದ ರಾತ್ರಿ 9ರವರೆಗೆ ಮೇಳ ನಡೆಯಲಿದೆ. ಪ್ರವೇಶ ಉಚಿತವಿದ್ದು, ಮೈಸೂರಿಗರು ಸದುಪಯೋಗ ಪಡೆದುಕೊಳ್ಳಿ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಯೋಜಕರಾದ ಎಸ್. ಶ್ರೀಕಾಂತ್ ಉಪಸ್ಥಿತರಿದ್ದರು.

IN THE COURT OF HON'BLE PRINCIPAL CIVIL JUDGE (SR. DIV) AT MYSORE

O. S: 842/2019

PLAINTIFF: Mr. Lalith Kumar, S/o Purnashankar aged about 48 years Door No. 59, 4th Cross, Near Milk dairy, Venkatalingaiah Layout, Mysore.

V/S

DEFENDANT: Mr. Sri Krishnaiah.S, Dead by his L.Rs,. Nikhil C.K., S/o Krishnaiah.S aged about 35 years Door No 1040, 7th Cross Kanakadasanagar Mysore

PAPER PUBLICATION

The plaintiff has filed this case against the defendant for the relief of specific performance of contact. That the plaintiff has taken the steps against Krishnaiah's legal representatives, i.e., his son NIKHIL C.K to appear before this Hon'ble court of law. Hence nearby notice that if any legal representative of diseased krishnaiah is there come and appear before this honorable Court of law on or before 4/6/25. If nobody will appear before this court of law it will be considered as exparte on behalf of the Plaintiff in the interest of justice and equality.

By order of the Court
Sd/- Chief Ministerial Officer
Court of Senior Civil Judge and CJM, Mysore

Advocates for the Plaintiff
Sd/- C.P. Veerabhadraswamy, B.Sc., LL.B.
Advocate, No. L-27, Kesare 2nd Stage, R.S. Naidunagar, Mysuru-570 007. Mob: 9590423328

ಗನ್ ಹಿಡಿದು ರೀಲ್ಸ್ ಮಾಡಿದ ಮೈಸೂರಿನ ಯುವಕ

- ಜೀಪ್ ಬ್ಯಾನೆಟ್ ಮೇಲೆ ನಿಂತು ಪೋಸ್, ಸರ್ಕಾರಿ ವಾಹನದಲ್ಲೂ ರೀಲ್ಸ್
- ಸರಸ್ವತಿಪುರಂ ಪೊಲೀಸರಿಂದ ವಿಚಾರಣೆ



ಗನ್ ಅಥವಾ ರಿವಾಲ್ವರ್ ಸೇರಿದಂತೆ ಶಸ್ತ್ರಾಸ್ತ್ರಗಳನ್ನು ಸಾರ್ವಜನಿಕವಾಗಿ ಪ್ರದರ್ಶಿಸುವುದು ಶಸ್ತ್ರಾಸ್ತ್ರ ಕಾಯಿದೆಯಡಿ ಅಪರಾಧವಾಗುತ್ತದೆ. ಟಿ.ಕೆ.ಬಡಾವಣೆಯ ವಿನೋದ್



ಜೀಪ್‌ನ ಬ್ಯಾನೆಟ್ ಮೇಲೆ ನಿಂತಿದ್ದರೆ, ಚಾಲಕನಿಲ್ಲದೆ ಜೀಪ್ ನಿಧಾನವಾಗಿ ಚಲಿಸುವ ದೃಶ್ಯ ವೈರಲ್ ಆಗಿದೆ. ಅದೇ ವಿಡಿಯೋದಲ್ಲಿ ವಿನೋದ್ ಎರಡು ಕಾರುಗಳನ್ನು ಅಕ್ಕಪಕ್ಕ ನಿಲ್ಲಿಸಿಕೊಂಡು ಎರಡು ಕಾರುಗಳ ಮೇಲೂ ಒಂದೊಂದು ಕಾಲನಿಟ್ಟು ನಿಂತಿರುವ ದೃಶ್ಯ ಹಾಗೂ ಸರ್ಕಾರಿ ವಾಹನದಲ್ಲಿ ಕುಳಿತು ವಿಡಿಯೋ ಮಾಡಿರುವ ದೃಶ್ಯ ವೈರಲ್ ಆಗಿದೆ. ಅಲ್ಲದೇ ಕೈಯ್ಯಲ್ಲಿ ಗನ್ ಹಿಡಿದು ಕಾರು ಹತ್ತುತ್ತಿರುವ ದೃಶ್ಯವೂ ಕೂಡ ವೈರಲ್ ವಿಡಿಯೋದಲ್ಲಿ ಇದೆ. ಈ ಹಿನ್ನೆಲೆಯಲ್ಲಿ ಸರಸ್ವತಿಪುರಂ ಠಾಣೆ ಇನ್ಸ್‌ಪೆಕ್ಟರ್ ಪುರುಷೋತ್ತಮ್ ಅವರು ವಿನೋದ್‌ನನ್ನು ಠಾಣೆಗೆ ಕರೆಸಿ ಮುಚ್ಚಳಿಕೆ ಬರೆಸಿಕೊಂಡು ಮತ್ತೆ ಕರೆದಾಗ ಬರಬೇಕೆಂದು ತಿಳಿಸಿ ಕಳುಹಿಸಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಅಲ್ಲದೇ ಕೆಆರ್.ಸಂಚಾರ ಠಾಣೆ ಪೊಲೀಸರು ಜೀಪ್ ಮತ್ತು ಕಾರುಗಳನ್ನು ವಶಪಡಿಸಿಕೊಂಡು ಸಂಚಾರ ಕಾಯ್ದೆಯಡಿ ಕ್ರಮ ಕೈಗೊಳ್ಳುತ್ತಾರೆ ಎಂದು ಹೇಳಲಾಗಿದೆ.

ಮೈಸೂರು, ಏ.6–ಇತ್ತೀಚೆಗೆ ಯುವಕರಿಗೆ ಮಾರಕಾಸ್ತ್ರಗಳನ್ನು ಹಿಡಿದು ರೀಲ್ಸ್ ಮಾಡುವ ಚಟ ಹೆಚ್ಚಾಗುತ್ತಿದೆ. ಕೆಲ ದಿನಗಳ ಹಿಂದೆಯಷ್ಟೇ ಬಿಗ್ ಬಾಸ್ ಮಾಜಿ ಸ್ಪರ್ಧಿಗಳಾದ ರಜತ್ ಮತ್ತು ವಿನಯ್ ಲಾಂಗ್ ಹಿಡಿದು ರೀಲ್ಸ್ ಮಾಡಿದ ಫಲವಾಗಿ ಜೈಲಿಗೆ ಹೋಗಿ ಬಂದಿದ್ದಾರೆ. ಇದರ ಬೆನ್ನಲ್ಲೇ ಮೈಸೂರಿನ ಯುವಕನೋರ್ವ ಗನ್ ಹಿಡಿದು ಜೀಪ್ ಮೇಲೆ ನಿಂತು ರೀಲ್ಸ್ ಮಾಡಿರುವುದು ಬೆಳಕಿಗೆ ಬಂದಿದೆ.

ಮೈಸೂರಿನ ಟಿ.ಕೆ.ಬಡಾವಣೆ ನಿವಾಸಿ ಜ್ಯುವೆಲರಿ ಶಾಪ್‌ವೊಂದರ ಪುತ್ರ ವಿನೋದ್ ಎಂಬಾತ ಗನ್ ಹಿಡಿದು ರೀಲ್ಸ್ ಮಾಡಿರುವ ದೃಶ್ಯಾವಳಿಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಆತನನ್ನು ಸರಸ್ವತಿಪುರಂ ಠಾಣೆ ಪೊಲೀಸರು ವಿಚಾರಣೆಗೊಳಪಡಿಸಿ, ಮುಚ್ಚಳಿಕೆ ಬರೆಸಿಕೊಂಡು ಬಿಟ್ಟು ಕಳುಹಿಸಿದ್ದಾರೆ ಎನ್ನಲಾಗಿದೆ.

ಇಂದು ವೈರಲ್ ಆಗಿರುವ ದೃಶ್ಯಾವಳಿಗಳು 2020ರಲ್ಲೇ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಲಾಗಿತ್ತು. ತಾನು ಹಿಡಿದಿರುವುದು ಆಟಿಕೆ ಗನ್ ಎಂದು ಪೊಲೀಸರು ಬಳಿ ಆತ ತಿಳಿಸಿದ್ದಾನೆ ಎನ್ನಲಾಗಿದೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿದ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಸುಂದರ ರಾಜ್ ಅವರು, ವೈರಲ್ ಆಗಿರುವ ವಿಡಿಯೋ ಆಧರಿಸಿ ಮೊದಲು ಶಸ್ತ್ರಾಸ್ತ್ರ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಗನ್ ವಶಪಡಿಸಿ ಕೊಳ್ಳ ಬೇಕಾಗುತ್ತದೆ. ಗನ್ ಪರಿಶೀಲನೆ ನಂತರ ಅದು ಆಟಿಕೆ ಗನ್ ಅಥವಾ ಫಯರ್ ಗನ್ ಇಲ್ಲವೇ ಏರ್ ಗನ್ ಎಂಬುದು ದೃಢಪಟ್ಟ ನಂತರ ಅದನ್ನನುಸರಿಸಿ ಕ್ರಮ ಕೈಗೊಳ್ಳಬೇಕಾಗುತ್ತದೆ. ಸದ್ಯಕ್ಕೆ ಸರಸ್ವತಿಪುರಂ ಠಾಣೆ ಇನ್ಸ್‌ಪೆಕ್ಟರ್ ವಿನೋದ್‌ನನ್ನು ಕರೆಸಿ ಪ್ರಾಥಮಿಕ ವಿಚಾರಣೆ ನಡೆಸಿದ್ದಾರೆ ಎಂದು ತಿಳಿದು ಬಂದಿದೆ. ನಾಳೆ (ಸೋಮವಾರ) ನಗರ ಪೊಲೀಸ್ ಆಯುಕ್ತರೊಂದಿಗೆ ಚರ್ಚಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು.

ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಮಾಜಿಕ ಅರಣ್ಯ ವಿಭಾಗ, "ಅರಣ್ಯ ಭವನ"ಅಶೋಕಪುರಂ, ಮೈಸೂರು

ಕಛೇರಿ ಮತ್ತು ಫ್ಯಾಕ್ಸ್ : 0821–2484606

ಇ–ಮೇಲ್ : defsfmys@yahoo.com

ಕ್ರಸಂ:ಬಿ1/ಬಿಯುಡಿ/ಅ.ಕಾ.ಟೆಂಡರ್/ಸಿಆರ್134/2024–25 ದಿನಾಂಕ:04.04.2025

ಇ–ಟೆಂಡರ್ ಪ್ರಕಟಣೆ (2 ಮತ್ತು 3 ನೇ ಕರೆ)

(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ – ದ್ವಿಲಕೋಟೆಯಲ್ಲಿ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2025–26 ನೇ ಸಾಲಿಗೆ ಮೈಸೂರು ಸಾಮಾಜಿಕ ಅರಣ್ಯ ವಿಭಾಗ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಬೇಕಾಗಿರುವ ಅರಣ್ಯೀಕರಣ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಈ ಕಛೇರಿಯಿಂದ ಆಹ್ವಾನಿಸಲಾಗಿದ್ದ 141 ಕಾಮಗಾರಿಗಳಿಗೆ ನೊಂದಾಯಿತ ಗುತ್ತಿಗೆದಾರರಿಂದ ನಿಬಂಧನೆಗಳನ್ನೊಳಗೊಂಡಂತೆ ಎರಡನೇ ಮತ್ತು ಮೂರನೇ ಬಾರಿಗೆ ಇ–ಟೆಂಡರ್ ಆಹ್ವಾನಿಸಲಾಗಿದೆ.

ಇ–ಟೆಂಡರ್ ಸ್ವೀಕರಿಸಲು **ದಿನಾಂಕ:16.04.2025** ರ ಅಪರಾಹ್ನ 03.00 ಘಂಟೆಯವರೆಗೆ ಕಡೆಯ ದಿನಾಂಕವಾಗಿರುತ್ತದೆ. ಸದರಿ ಇ–ಟೆಂಡರನ್ನು **ದಿನಾಂಕ:17.04.2025** ರಂದು ಅಪರಾಹ್ನ **03.10** ಘಂಟೆಗೆ ತೆರೆಯಲಾಗುವುದು. ಇತರೆ ಹೆಚ್ಚಿನ ಮಾಹಿತಿಗಳನ್ನು **http://Kppp.karnataka.gov.in** ವೆಬ್‌ಸೈಟ್‌ನಲ್ಲಿ ಹಾಗೂ ಸದರಿ ಕಛೇರಿಯಿಂದ ಕರ್ತವ್ಯ ದಿನಗಳಂದು ಕೆಲಸದ ಅವಧಿಯಲ್ಲಿ ಪಡೆಯಬಹುದು.

ಸಹಿ/–ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ವಿಭಾಗ, ಮೈಸೂರು

DIPR-DD-MYS/32/KSMCA-031/2025-26

ಮೈಸೂರು ಮಿತ್ರ ಸೋಮವಾರ 7 ಏಪ್ರಿಲ್ 2025

ಶ್ರದ್ಧಾಭಕ್ತಿಯಿಂದ ಜರುಗಿದ ಶ್ರೀ ರಾಮಲಿಂಗೇಶ್ವರ ಬ್ರಹ್ಮರಥೋತ್ಸವ

ಕುಶಾಲನಗರ,ಏ.6– ಸಮೀಪದ ರಾಂಪುರ ಕಣಿವೆ ಗ್ರಾಮದಲ್ಲಿ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಜರುಗಿದ ವಾರ್ಷಿಕ ಬ್ರಹ್ಮ ರಥೋತ್ಸವ ಶ್ರದ್ಧಾಭಕ್ತಿಯಿಂದ ನಡೆಯಿತು.

ರಥೋತ್ಸವದಲ್ಲಿ ಸಾವಿರಾರು ಮಂದಿ ಭಕ್ತಾದಿಗಳು ಪಾಲ್ಗೊಂಡು ತೇರನ್ನು ಎಳೆದು ಪುನೀತರಾದರು. ರಾಮಲಿಂಗೇಶ್ವರ, ಅಗಸ್ತೇಶ್ವರ, ಗುಹೇಶ್ವರ, ಲಕ್ಷ್ಮಣೇಶ್ವರ ಹಾಗೂ ಬಸವೇಶ್ವರ ಎಂಬ ಪಂಚ ಲಿಂಗಗಳ ಸನ್ನಿಧಿಯಲ್ಲಿ ಸೇರಿದ್ದ ಅಪಾರ ಭಕ್ತ ಸಮೂಹ ರಥೋತ್ಸವಕ್ಕೆ ಸಾಕ್ಷಿಯಾಯಿತು. ಗ್ರಾಮೀಣ ಸಾಂಸ್ಕೃತಿಯ ಸೊಗಡನ್ನು ಪ್ರತಿಬಿಂಬಿಸಿದ್ದ ಜಾತ್ರೆಯಲ್ಲಿ ಜಿಲ್ಲೆಯ ವಿವಿದೆಡೆಯಿಂದಲ್ಲದೆ ನೆರೆಯ ಹಾಸನ ಮತ್ತು ಮೈಸೂರು ಜಿಲ್ಲೆಯ ಗಡಿಗ್ರಾಮಗಳ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ವಿವಿಧ ಪುಷ್ಪಗಳಿಂದ ಧ್ವಜಗಳಿಂದ ಅಲಂಕೃತಗೊಂಡಿದ್ದ ರಥದಲ್ಲಿ ರಾಮ, ಸೀತಾ, ಲಕ್ಷ್ಮಣ, ಆಂಜನೇಯ ಸ್ವಾಮಿಗಳ ವಿಗ್ರಹಗಳನ್ನು ಕುಳ್ಳಿರಿಸಿ ರಥಕ್ಕೆ ಪೂಜೆ ಸಲ್ಲಿಸಿದ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.


ಕುಶಾಲನಗರದಲ್ಲಿ ನಡೆದ ರಾಮಲಿಂಗೇಶ್ವರ ರಥೋತ್ಸವದಲ್ಲಿ ಸಾವಿರಾರು ಮಂದಿ ಭಕ್ತಾದಿಗಳು ಪಾಲ್ಗೊಂಡಿದ್ದರು.

ದೇವಸ್ಥಾನ ಸಮಿತಿಯ ಅಧ್ಯಕ್ಷ ಕೆ.ಎನ್. ಸುರೇಶ್, ಕಾರ್ಯದರ್ಶಿ ಶೇಷಾಚಲ ನೇತೃತ್ವದಲ್ಲಿ ಧಾರ್ಮಿಕ ಕೈಂಕರ್ಯಗಳು ಹಾಗೂ ಉತ್ಸವಗಳು ಜರುಗಿದವು. ಸಮಿತಿ ಕಾರ್ಯಾಧ್ಯಕ್ಷ ಕೆ.ಎಸ್.ಮಾಧವ, ಕಾರ್ಯದರ್ಶಿ ಟಿ.ಎನ್.ಶೇಷಾಚಲ, ಉಪಾಧ್ಯಕ್ಷ ಮಂಜುನಾಥಸ್ವಾಮಿ, ನಿರ್ದೇಶಕ ಮಧು, ಕೆ.ಎಲ್.ಮಹೇಶ ಕುಮಾರ್, ಇ.ಎಸ್. ಗಣೇಶ್,ರಾಕೇಶ್, ಟಿ.ಎಂ.ಕಾರ್ತಿಕ್, ನುಜುಂಡ ಸ್ವಾಮಿ, ಅರ್ಚಕ ರಾಘವೇಂದ್ರ ಆಚಾರ್, ಉದಯಪ್ರಕಾಶ್ ಹಾಗೂ ದೇವಾಲಯ ಸಮಿತಿ ಪದಾಧಿಕಾರಿಗಳಿದ್ದರು.

ಬಿಜೆಪಿ ಧೋರಣೆ ಖಂಡಿಸಿ ಕಾಂಗ್ರೆಸ್ ಬೃಹತ್ ಪ್ರತಿಭಟನೆ

ಮಡಿಕೇರಿ,ಏ.6–ವಿನಯ್ ಸೋಮಯ್ಯ ಅವರ ಆತ್ಮಹತ್ಯಾ ಪ್ರಕರಣವನ್ನು ಬಳಸಿಕೊಂಡು ಸಾವಿನಲ್ಲೂ ರಾಜಕಾರಣ ಮಾಡುತ್ತಾ, ಜಿಲ್ಲೆಯ ಶಾಸಕರನ್ನು ಅವಹೇಳನ ಮಾಡುತ್ತಿರುವ ಬಿಜೆಪಿಯ ಧೋರಣೆಯನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್‌ನಿಂದ ನಗರದಲ್ಲಿ ಇಂದು ಬೃಹತ್ ಪ್ರತಿಭಟನೆ ನಡೆಯಿತು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಜಿಲ್ಲೆಯ ವಿವಿದೆಡೆಗಳಿಂದ ಆಗಮಿಸಿದ್ದ ಕಾರ್ಯಕರ್ತರು, ಬಿಜೆಪಿ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ನಗರದ ಗಾಂಧಿ ಮೈದಾನದಿಂದ ಜನರಲ್ ತಿಮ್ಮಯ್ಯ ವೃತ್ತದವರೆಗೆ ಬೃಹತ್ ಮೆರವಣಿಗೆ ನಡೆಸಿದರು. ಶಾಸಕರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವುದಾಗಿ ಆರೋಪಿಸಿ ಮಾಜಿ ಸಂಸದ ಪ್ರತಾಪ ಸಿಂಹ ಪ್ರತಿಕೃತಿಯನ್ನು ದಹಿಸಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಕನಿಷ್ಠ ಸಜ್ಜನಿಕೆಯನ್ನು ತೋರದ ಬಿಜೆಪಿ: ಗಾಂಧಿ ಮೈದಾನದಲ್ಲಿ ನಡೆದ ಸಭೆಯಲ್ಲಿ ಶಾಸಕ ಎ.ಎಸ್. ಪೊನ್ನಣ್ಣ ಮಾತನಾಡಿ ಹಿಂದೂ ಧರ್ಮ, ಸಂಸ್ಕೃತಿಗಳ ಸಂರಕ್ಷಣೆಯ ಬಗ್ಗೆ ದೊಡ್ಡ ಮಾತನಾಡುವ ಬಿಜೆಪಿಗರು, ವಿನಯ್ ಸೋಮಯ್ಯ ಮೃತದೇಹವನ್ನು ತಡೆದು, ಅವರ ಕುಟುಂಬಸ್ಥರಿಗೆ ಕೊನೆಯ ಸಂಸ್ಕಾರಗಳನ್ನು ನಡೆಸಲು ಅಡ್ಡಿ ಮಾಡಿದ್ದಾರೆ. ಮೃತದೇಹವನ್ನು ಸಾಗಿಸಲು ಅವಕಾಶ ಒದಗಿಸುವ ಕನಿಷ್ಠ ಸಜ್ಜನಿಕೆ ಇಲ್ಲದ, ನಾಗರಿಕತೆಯೇ ಇಲ್ಲದವರು ಬಿಜೆಪಿಗರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕುಶಾಲನಗರದಲ್ಲಿ ನಡೆದ ಪ್ರತಿಭಟನೆಯಲ್ಲಿ ಪಾಲ್ಗೊಂಡ ಬಿಜೆಪಿ ರಾಜ್ಯ ನಾಯಕರಿಗೆ ಮೃತಪಟ್ಟ ವ್ಯಕ್ತಿಯ ಹೆಸರೇ ತಿಳಿದಿಲ್ಲ ಎಂದು ವ್ಯಂಗ್ಯವಾಡಿದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮಾಜಿ ಎಂಎಲ್‌ಸಿ ವೀಣಾ ಅಚ್ಚಯ್ಯ, ಕಾಂಗ್ರೆಸ್ ಮುಖಂಡ ಚಂದ್ರಮೌಳಿ, ಮಾಜಿ ಎಂಎಲ್‌ಸಿ ಅರುಣ್ ಮಾಚಯ್ಯ, ಜಿಲ್ಲಾ ಕಾಂಗ್ರೆಸ್ ಮಾಧ್ಯಮ ವಕ್ತಾರ ಟಿ.ಪಿ.ರಮೇಶ್, ಕುಶಾಲನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಪಿ.ಶಶಿಧರ್ ಮಾತನಾಡಿದರು.

ಪ್ರತಿಭಟನೆಯಲ್ಲಿ ಕಾಂಗ್ರೆಸ್ ಮುಖಂಡರಾದ ಸಂಕೇತ್ ಪೂವಯ್ಯ, ಕೊಲ್ಯದ ಗಿರೀಶ್, ಸುಜು ತಿಮ್ಮಯ್ಯ, ಎಸ್.ಐ. ಮುನೀರ್ ಅಹಮ್ಮದ್, ಹಂಸ, ಇಸ್ಮಾಯಿಲ್, ಬಿ.ಎಸ್. ತಮ್ಮಯ್ಯ, ನೆರವಂಡ ಉಮೇಶ್ ಕಾರ್ಯಕರ್ತರು ಪಾಲ್ಗೊಂಡಿದ್ದರು.


ಬಿಜೆಪಿಯ ಧೋರಣೆಯನ್ನು ಖಂಡಿಸಿ ಜಿಲ್ಲಾ ಕಾಂಗ್ರೆಸ್‌ನಿಂದ ಮಡಿಕೇರಿ ನಗರದಲ್ಲಿ ಇಂದು ಬೃಹತ್ ಪ್ರತಿಭಟನೆ ನಡೆಯಿತು.

ವಿನಯ್ ಸೋಮಯ್ಯ ಪತ್ನಿಗೆ ಬರೆದ ಪತ್ರ

ಮಡಿಕೇರಿ: ಬೆಂಗಳೂರಿನಲ್ಲಿ ಆತ್ಮಹತ್ಯೆ ಮಾಡಿಕೊಂಡ ಬಿಜೆಪಿ ಕಾರ್ಯಕರ್ತ ಸೋಮವಾರಪೇಟೆ ಗೋಣಿಮರೂರು ಮೂಲದ ವಿನಯ್ ಸೋಮಯ್ಯ ಅವರು ತಮ್ಮ ಪತ್ನಿಗೆ 15 ಪುಟಗಳ ಸಾವಿಗೂ ಮುನ್ನ ಬರೆದಿರುವ ಪತ್ರ ಇದೀಗ ವೈರಲ್ ಆಗುತ್ತಿದೆ. ಮೃತರ ಸಹೋದರ ಏ.4ರಂದು ವಿನಯ್ ಸೋಮಯ್ಯ ಪೊಲೀಸರಿಗೆ ನೀಡಿದ ದೂರಿನಲ್ಲಿ ವಿನಯ್ ತನ್ನ ಪತ್ನಿಗೆ ಬರೆದಿರುವ ವಾಟ್ಸ್ ಅಪ್ ಸಂದೇಶದ ಪ್ರತಿಯನ್ನೂ ಅಳವಡಿಸಿರುವುದು ಇದೀಗ ಬೆಳಕಿಗೆ ಬಂದಿದೆ.

ಈ ವಾಟ್ಸ್ ಅಪ್ ಸಂದೇಶದಲ್ಲಿ 'ತನ್ನ ಮೇಲೆ ಎಫ್ಐಆರ್ ದಾಖಲಿಸಿರುವುದು, ಬೇಲ್ ಸಿಕ್ಕಿದ ಮೇಲೂ ಮಾನಸಿಕ ಹಿಂಸೆ ನೀಡಿರುವುದು, ವಿವಿಧ ವಾಟ್ಸ್ ಅಪ್ ಗ್ರೂಪ್‌ಗಳಲ್ಲಿ ತಮ್ಮನ್ನು ಕಿಡಿಗೇಡಿಗಳು ಎಂದು ಬಿಂಬಿಸುತ್ತಿರುವುದು, ನಮ್ಮ ಮೇಲೆ ರೌಡಿ ಶೀಟರ್ ಹಾಕೋಕೆ ಟ್ರೈ ಮಾಡುತ್ತಿರುವುದು, ಪೊಲೀಸ್ ಸಿಬ್ಬಂದಿ ಫೋನ್ ಮಾಡಿ ತಹಶೀಲ್ದಾರ್ ಮುಂದೆ ಸಿಗ್ನೇಚರ್ ಮಾಡಬೇಕು ಅಂತ ಫೋರ್ಸ್ ಮಾಡುತ್ತಿರುವುದು' ಸೇರಿದಂತೆ ವಿವಿಧ ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ.

ವಾಟ್ಸ್ ಅಪ್ ಮೂಲಕ ವಿನಯ್ ಸೋಮಯ್ಯ ತನ್ನ ಪತ್ನಿ ಶೋಭಿತಾ ಅವರಿಗೆ ಪತ್ರ ಬರೆದಿದ್ದರೂ, ಅದನ್ನು ಪತ್ನಿಯ ತಮ್ಮ ಸುಶಾಂತ್ ಎಂಬಾತನಿಗೆ ಫಾರ್ವಡ್ ಮಾಡಿ 'ಇದನ್ನು ನೀನು ಶೋಭಿತಾನಿಗೆ ಫಾರ್ವಡ್ ಮಾಡಬೇಡ ನೇರವಾಗಿ ಅವಳಿಗೆ ತೋರಿಸು' ಎಂದು ಉಲ್ಲೇಖಿಸಿದ್ದಾರೆ. 'ಸಾಧ್ಯ ಆದರೆ ನನ್ನನ್ನು ಕ್ಷಮಿಸು ಬಿಡು' ಎಂದು ಪತ್ನಿಯ ತಮ್ಮನಲ್ಲಿ ಮನವಿ ಮಾಡಿರುವುದು ವಾಟ್ಸ್ ಅಪ್ ಸಂದೇಶದಲ್ಲಿದೆ.

'ಶೋಭಿ ಈ ಲೆಟರ್ ನಾನು ಸುಶಾಂತ್‌ಗೆ ಕಳುಸಿದ್ದು ಯಾಕಂದ್ರೆ ನಿಂಗೆ ಕಳಿಸಿದರೆ ನಿನ್ನ ಸಂಭಾಲಿಸುವವರು ಯಾರು ಇರುವುದಿಲ್ಲ. ಸಾರಿ' ಎಂದು ಉಲ್ಲೇಖಿಸಲಾಗಿದೆ. ಇದರ ಜೊತೆಯಲ್ಲೇ ತನ್ನ ಮಗಳು ಸಾಧ್ವಿ ಬಗ್ಗೆಯೂ ಉಲ್ಲೇಖಿಸಿ 'ಸಾಧ್ವಿ 1 ವಾರ ಕೇಳಬಹುದು. ನಂತರ ಸರಿ ಆಗುತ್ತೆ ಬಿಡು. ಅವಳಿಗೆ ಅಪ್ಪ ದೂರ ಹೋಗಿದ್ದಾರೆ ಎಂತ ಹೇಳು. ಅವಳಿಗೆ ನೀನಿದ್ರೆ ಸಾಕು, ನೀನೇ ಅವಳ ಪ್ರಪಂಚ. ಅವಳು ದೊಡ್ಡವಳಾದ ಮೇಲೆ ಹೇಳು. ಅಪ್ಪ ಅವಳನ್ನು ತುಂಬಾ ಇಷ್ಟ ಪಡ್ತಾ ಇದ್ರು ಅಂತ' ಎಂದು ಮಗಳ ಕುರಿತು ಭಾವನಾತ್ಮಕವಾಗಿ ಸಂದೇಶ ಮಾಡಲಾಗಿದೆ.

ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಆತ್ಮಹತ್ಯೆ ಕುರಿತು ಬೆಂಗಳೂರು ಹೆಣ್ಣೂರು ಠಾಣೆಯಲ್ಲಿ ತೆನ್ನೀರಾ ಮೈನಾ ಮತ್ತು ಇತರರು ಎಂದು ಪ್ರಕರಣ ದಾಖಲಾಗಿದೆ. ತನಿಖೆಯ ಬಳಿಕ ಸತ್ಯಾಂಶಗಳು ಹೊರ ಬರಬೇಕಿದೆ.

ಚೆಕ್ಕೇರ ಕ್ರಿಕೆಟ್ ನಮ್ಮೆಗೆ ವರ್ಣರಂಜಿತ ಚಾಲನೆ


ಚೆಕ್ಕೇರ ಕ್ರಿಕೆಟ್ ನಮ್ಮೆಗೆ ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ಚೆಕ್ಕೇರ ಕ್ರಿಕೆಟ್ ಹಬ್ಬದ ಅಧ್ಯಕ್ಷ ಚಂದ್ರಪ್ರಕಾಶ್ ವರ್ಣರಂಜಿತ ಚಾಲನೆ ನೀಡಿದರು.

ಗೋಣಿಕೊಪ್ಪ,ಏ.6– ಚೆಕ್ಕೇರ ಕುಟುಂಬ ಹಾಗೂ ಕೊಡವ ಕ್ರಿಕೆಟ್ ಅಕಾಡೆಮಿ ಸಹಯೋಗದಲ್ಲಿ ಹುದಿಕೇರಿಯ ಜನತಾ ಪ್ರೌಢಶಾಲಾ ಮೈದಾನ ಮತ್ತು ಕಿರಿಯ ಪ್ರಾಥಮಿಕ ಶಾಲಾ ಮೈದಾನಗಳಲ್ಲಿ 41 ದಿನಗಳ ಚೆಕ್ಕೇರ ಕ್ರಿಕೆಟ್ ನಮ್ಮೆಗೆ ವರ್ಣರಂಜಿತ ಚಾಲನೆ ದೊರೆಯಿತು.

ಹುದಿಕೇರಿಯ ಮಹಾದೇವರ ದೇವಸ್ಥಾನದಲ್ಲಿ ಚೆಕ್ಕೇರ ಕುಟುಂಬಸ್ಥರು ಪೂಜೆ ಸಲ್ಲಿಸಿ, ಹುದಿಕೇರಿಯ ಮುಖ್ಯ ರಸ್ತೆಯಲ್ಲಿ ಮೆರವಣಿಗೆ ಮೂಲಕ ಶಾಲಾ ಮೈದಾನಕ್ಕೆ ಸಾಗಿ ಬಂದರು. ಚೆಕ್ಕೇರ ಕ್ರಿಕೆಟ್ ಕಪ್ ಅಧ್ಯಕ್ಷ ಚಂದ್ರ ಪ್ರಕಾಶ್ ಅವರ ಮುಂದಾಳತ್ವದಲ್ಲಿ ಧ್ವಜಾರೋಹಣ ನೆರವೇರಿಸಿ, ಸಾಂಪ್ರದಾಯಿಕವಾಗಿ ಗಾಳಿಯಲ್ಲಿ ಗುಂಡು ಹಾರಿಸುವುದರ ಮೂಲಕ ಅಧಿಕೃತವಾಗಿ ಕೊಡವ ಕುಟುಂಬಗಳ ಕ್ರಿಕೆಟ್ ಹಬ್ಬಕ್ಕೆ ಚಾಲನೆ ನೀಡಲಾಯಿತು.

ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ, ಸ್ವಾತಂತ್ರ್ಯ ಹೋರಾಟಗಾರ ಹುಬ್ಬಳ್ಳಿ ಹುಲಿ ಚೆಕ್ಕೇರ ಬಿ.ಮೊಣ್ಣಯ್ಯ ಹೆಸರಿನಲ್ಲಿ ರಸ್ತೆ ಉದ್ಘಾಟನೆ ನೆರವೇರಿಸಿ, ಚಿಕ್ಕ ಜಿಲ್ಲೆಯಲ್ಲಿ ಚಿಕ್ಕ ಸಮುದಾಯ ಕೊಡವ ಸಮುದಾಯ ಇವೆಲ್ಲ ಇತಿಮಿತಿಯ ನಡುವೆಯೂ ಕ್ರೀಡೆಯಲ್ಲಿ ಇತಿಹಾಸ ನಿರ್ಮಿಸಿದ್ದೇವೆ ಹಿರಿಯರು ನೀಡಿರುವ ಕೊಡುಗೆಯನ್ನು ಮುಂದುವರಿಸಿಕೊಂಡು ಹೋಗುವುದು ಇಂದಿನ ಪೀಳಿಗೆಯ ಜವಾಬ್ದಾರಿಯಾಗಿದೆ ಎಂದರು.

ಸರಕಾರದ ಪ್ರಧಾನ ಎಲೆಕ್ಟ್ರಿಕಲ್ ಇನ್ಸ್‌ಪೆಕ್ಟರ್ ತಿತೀರ ರೋಷನ್ ಅಪ್ಪಚ್ಚು ಮಾತನಾಡಿ, ರಾಜ್ಯ ಸರ್ಕಾರದಿಂದ ಕ್ರೀಡೆಗೂ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತಿದೆ. ಈ ಸೌಲಭ್ಯವನ್ನು ಯುವ ಜನಾಂಗ ಬಳಸಿಕೊಂಡು ಬೆಳೆಯಬೇಕು ಎಂದರು.

ಮಾಜಿ ಒಲಂಪಿಯನ್ ಲೆಫ್ಟಿನೆಂಟ್ ಕರ್ನಲ್ ಬಾಳೆಯಡ ಸುಬ್ರಮಣಿ ಮಾತನಾಡಿ, ಚೆಕ್ಕೇರ ಕುಟುಂಬಸ್ಥರು ಹಾಕಿ ಹಬ್ಬವನ್ನು ಅಚ್ಚುಕಟ್ಟಾಗಿ ನಡೆಸಿದಂತೆ 23ನೇ ವರ್ಷದ ಕ್ರಿಕೆಟ್ ಹಬ್ಬವನ್ನು ಅಚ್ಚುಕಟ್ಟಾಗಿ ನಡೆಸುತ್ತಾರೆ ಎಂಬ ಆಶಾಭಾವನೆ ವ್ಯಕ್ತಪಡಿಸಿದರು. ಚೆಕ್ಕೇರ ಕುಟುಂಬಕ್ಕೆ ಕೊಡವರ ಪೀಚೆ ಕತ್ತಿಯನ್ನು ಉಡುಗೊರೆಯಾಗಿ ನೀಡಿದರು.

ಚೆಕ್ಕೇರ ಕ್ರಿಕೆಟ್ ಹಬ್ಬದ ಅಧ್ಯಕ್ಷ ಚಂದ್ರಪ್ರಕಾಶ್ ಮಾತನಾಡಿ, ಕ್ರಿಕೆಟ್ ನಮ್ಮೆಯಲ್ಲಿ 281 ಪುರುಷರ ತಂಡಹಾಗೂ 64 ಮಹಿಳೆಯರ ತಂಡ ನೋಂದಾವಣಿಯಾಗಿದೆ ಎಂದರು. ಕೊಡವ ಕ್ರಿಕೆಟ್ ಅಕಾಡೆಮಿ ಅಧ್ಯಕ್ಷ ಕೀತಿಯಂಡ ಕಾರ್ಸನ್ ಕಾರ್ಯಪ್ಪ ಹಾಗೂ ರೀ ಪಬ್ಲಿಕ್ ಟಿವಿ ಅಧ್ಯಕ್ಷ ಚೇರಂಡ ಕಿಸನ್ ಮಾತನಾಡಿ ಪಂದ್ಯಾಟಕ್ಕೆ ಶುಭ ಕೋರಿದರು.

ಚೆಕ್ಕೇರ ಕುಟುಂಬಸ್ಥರು ಬೆಳ್ಳಿಯ ಕ್ರಿಕೆಟ್ ಬ್ಯಾಟ್ ಅನ್ನು ವರ್ಷಂಪ್ರತಿ ನಡೆಯುವ ಕೊಡವ ಕುಟುಂಬದ ಕ್ರಿಕೆಟ್ ಹಬ್ಬಕ್ಕೆ ಉಡುಗೊರೆಯಾಗಿ ನೀಡಿದರು. ಕೊಡವ ಇಲವೆನ್ ಹಾಗೂ ಅಮ್ಮ ಕೊಡವ ಇಲವನ್ ತಂಡಗಳ ಪ್ರದರ್ಶನ ಪಂದ್ಯಾಟ ನಡೆಯಿತು.

ಈ ಸಂದರ್ಭ ಅಂಜಿಕೇರಿ ನಾಡ್ ತಕ್ಕ ಚೆಕ್ಕೇರ ರಾಜೇಶ್, ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಅಜಿನಿಕಂಡ ಮಹೇಶ್ ನಾಚಯ್ಯ, ಕೊಕ್ಕಲೆಮಾಡ ಮಂಜು ಚಿನ್ನಪ್ಪ, ಹುದಿಕೇರಿ ಪಂಚಾಯಿತಿ ಅಧ್ಯಕ್ಷೆ ಕುಪ್ಪಣಮಾಡ ನಿವ್ಯಾ ಕಾವೇರಮ್ಮ, ಜನತಾ ಪ್ರೌಢ ಶಾಲಾ ಅಧ್ಯಕ್ಷ ಮಂಡಗಡ ಅಶೋಕ್, ಕ್ರಿಕೆಟ್ ಅಕಾಡೆಮಿ ಕಾರ್ಯದರ್ಶಿ ಕೂಡಂಡ ಬೋಪಣ್ಣ, ಚೆಕ್ಕೇರ ಕುಟುಂಬದ ಹಿರಿಯರಾದ ವಾಸು ಕುಟ್ಟಪ್ಪ, ಮತ್ತಿತರರು ಉಪಸ್ಥಿತರಿದ್ದರು.

ಮಡಿಕೇರಿ ಮಲ್ಲಿಕಾರ್ಜುನ ನಗರದಲ್ಲಿ ಶ್ರೀ ರಾಮನವಮಿ ಆಚರಣೆ

ಮಡಿಕೇರಿ:ಶ್ರೀ ಕೋದಂಡ ರಾಮೋತ್ಸವ ಸಮಿತಿ ವತಿಯಿಂದ 35ನೇ ವರ್ಷದ ರಾಮೋತ್ಸವ ಕಾರ್ಯಕ್ರಮಗಳು ಇಲ್ಲಿನ ಮಲ್ಲಿಕಾರ್ಜುನ ನಗರದ ಶ್ರೀ ಕೋದಂಡ ರಾಮ ದೇವಾಲಯದಲ್ಲಿ ಶ್ರದ್ಧಾಭಕ್ತಿ ಮತ್ತು ವಿಜೃಂಭಣೆಯಿಂದ ನಡೆಯಿತು.

ಸಂಜೆ ನಗರದ ಗಾಂಧಿ ಮೈದಾನದಿಂದ ಧಾರ್ಮಿಕ ಮತ್ತು ಸಾಂಸ್ಕೃತಿಕ ಮೆರವಣಿಗೆ ಸಾಗಿತು. ಮೆರವಣಿಗೆಯಲ್ಲಿ ಚಂಡೆ, ತೈಯಂ ಕುಣಿತ, ಫ್ಲವರ್ ಡ್ಯಾನ್ಸ್, ತಮಟೆ, ರಾಮ, ಆಂಜನೇಯ ವೇಷಧಾರಿಗಳು, ಹುಲಿ ವೇಷ ಭಜನಾ ತಂಡಗಳು, ಕಳಸ ಹಾಗೂ ರಾಮನ ಪಲ್ಲಕ್ಕಿ ಮೆರವಣಿಗೆ ಆಕರ್ಷಿಸಿತು.


ರಾಮೋತ್ಸವದ ಅಂಗವಾಗಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಮೆರವಣಿಗೆ ನಡೆಯಿತು.

ನಗರದ ಪ್ರಮುಖ ಬೀದಿಗಳಲ್ಲಿ ಸಾಗಿದ ಮೆರವಣಿಗೆ ಶ್ರೀಮುತ್ತಪ್ಪ ದೇವಾಲಯ ರಸ್ತೆಯಿಂದ ಶ್ರೀಕೋದಂಡರಾಮ ದೇವಾಲಯ ಸೇರಿತು. ಮೆರವಣಿಗೆಯಲ್ಲಿ ಶಾಸಕರಾದ ಎ.ಎಸ್.ಪೊನ್ನಣ್ಣ, ಡಾ.ಮಂತರ್ ಗೌಡ, ರಾಮೋಹಳ್ಳಿ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮದ ಶ್ರೀ ಡಾ.ಆರೂಢ ಭಾರತಿ ಸ್ವಾಮೀಜಿ ಮತ್ತಿತರ ಪ್ರಮುಖರು ಪಾಲ್ಗೊಂಡಿದ್ದರು. ದೇವಾಲಯದಲ್ಲಿ ಪಲ್ಲಕ್ಕಿಯನ್ನು ಹೊತ್ತು ಪೂಜೆ ಸಲ್ಲಿಸಿದರು.

ಕೊಲೆ ಯತ್ನ ದೂರು ಹ್ಯಾರೀಸ್ ಬಂಧನ

ನಾಪೋಕ್ಲು,ಏ.6–ಪಟ್ಟಣದ ಅಬ್ದುಲ್ ಅಜೀಜ್ ಮೇಲೆ ಕಾರು ಹರಿಸಿ ಕೊಲೆ ಯತ್ನಕ್ಕೆ ಯತ್ನಿಸಿದ್ದ ಆರೋಪಕ್ಕೊಳಗಾಗಿದ್ದ ಹ್ಯಾರಿಸ್‌ನನ್ನು ಪೋಲೀಸರು ಬಂಧಿಸಿದ್ದಾರೆ.

ರಂಜಾನ್ ಹಬ್ಬದ ಆಚರಣೆವೇಳೆ ಅಬ್ದುಲ್ ಅಜೀಜ್ ಪ್ರಾರ್ಥನೆ ಸಲ್ಲಿಸಿ ರಸ್ತೆಗೆ ಬರುತ್ತಿದ್ದ ಸಂದರ್ಭದಲ್ಲಿ ಹ್ಯಾರೀಸ್ ತನ್ನ ಕಾರು ಚಲಾಯಿಸಿ ಕೊಲೆಗೆ ಯತ್ನಿಸಿದ್ದು ಅಜೀಜ್ ಪ್ರಾಣಾಪಾಯದಿಂದ ಪಾರಾಗಿ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು. ಕೊಲೆ ಯತ್ನ ಪ್ರಕರಣದ ಅಡಿ ಸೆಕ್ಷನ್ 307 ರಂತೆ ಹ್ಯಾರೀಸ್ ವಿರುದ್ಧ ಪೋಲೀಸರು ಮೊಕದ್ದಮೆ ದಾಖಿಸಿಕೊಂಡಿದ್ದಾರೆ.

ಕ್ರಾಂತಿಕಾರಿ ರಥಯಾತ್ರೆಗೆ ಮಾದಿಗ ಸಮುದಾಯ ಅದ್ದೂರಿ ಸ್ವಾಗತ

ಚಾಮರಾಜನಗರ, ಏ.6– ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಶ್ರೀ ಮಲೈ ಮಹದೇಶ್ವರ ಬೆಟ್ಟದಿಂದ ಆರಂಭವಾಗಿರುವ ಕ್ರಾಂತಿಕಾರಿ ರಥಯಾತ್ರೆಯು ಇಂದು ಜಿಲ್ಲಾ ಕೇಂದ್ರಕ್ಕೆ ಆಗಮಿಸುತ್ತಿದ್ದಂತೆ ಮಾದಿಗ ಸಮುದಾಯದ ಬಂಧುಗಳು ಅದ್ದೂರಿ ಸ್ವಾಗತ ಕೋರಿದರು.

ನಗರದ ಸಂತೇಮರಹಳ್ಳಿ ವೃತ್ತದಲ್ಲಿ ಬೈಕ್ ರ‍್ಯಾಲಿ ಮೂಲಕ ಕ್ರಾಂತಿ ರಥಯಾತ್ರೆ ಸ್ವಾಗತ ಕೋರಿ, ಪಟಾಕಿ ಸಿಡಿಸಿ, ಭುವನೇಶ್ವರಿ ವೃತ್ತ, ಜಿಲ್ಲಾಡಳಿತ ಭವನದ ಅವರಣದಲ್ಲಿರುವ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ನಂತರ 15ನೇ ವಾರ್ಡಿನ ಮಾದಿಗರ ಬಡಾವಣೆಯಲ್ಲಿರುವ ಬಾಬು ಜಗಜೀವನರಾಂ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.



ಕ್ರಾಂತಿ ರಥಯಾತ್ರೆಗೆ ಮಾದಿಗ ಸಮುದಾಯದ ಬಂಧುಗಳು ಅದ್ದೂರಿ ಸ್ವಾಗತ ಕೋರಿದರು

ಸುಪ್ರೀಂಕೋರ್ಟ್ ತೀರ್ಪಿನಂತೆ ಒಳ ಮೀಸಲಾತಿಯನ್ನು ಸರ್ಕಾರ ಕೂಡಲೇ ಜಾರಿ ಮಾಡಬೇಕು ಇದನ್ನು ಜಾರಿ ಮಾಡುವವರೆಗೂ ಹುದ್ದೆಗಳ ನೇಮಕಾತಿಯನ್ನು ರದ್ದುಪಡಿಸಬೇಕು ಎಂದು ರಥಯಾತ್ರೆಯ ನೇತೃತ್ವ ವಹಿಸಿರುವ ಬಿ.ಆರ್. ಭಾಸ್ಕರ್ ಒತ್ತಾಯಿಸಿದರು. ಕಾಂಗ್ರೆಸ್ ನೇತೃತ್ವದ ಸರ್ಕಾರ ಒಳಮೀಸಲಾತಿ ಅನುಷ್ಠಾನ ಮಾಡುವಲ್ಲಿ ಮೋಸ ಮಾಡುತ್ತಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಒಳ ಮೀಸಲಾತಿ ಜಾರಿ ಮಾಡುವ ಬದಲು ವಿಳಂಬ ನೀತಿಯನ್ನು ಅನುಸರಿಸುತ್ತಿದ್ದಾರೆ. ಮತ್ತೊಂದು ಕಡೆ ಸಚಿವರಾದ ಪರಮೇಶ್ವರಪ್ಪ ಪ್ರಿಯಾಂಕ ಖರ್ಗೆ, ಎಚ್.ಸಿ.ಮಹದೇವಪ್ಪ ಕುತಂತ್ರ ಮಾಡಿ, ಬಡ್ತಿ ಮೀಸಲಾತಿ ಮೂಲಕ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುತ್ತಿದ್ದಾರೆ ಎಂದವರು ಆರೋಪಿಸಿದರು. ನಮ್ಮ ಸಮುದಾಯದ ಸಚಿವರಾದ ಕೆ.ಎಚ್. ಮುನಿಯಪ್ಪ, ಆರ್.ವಿ. ತಿಮ್ಮಾಪುರ ಅವರು ಸಚಿವ ಸಂಪುಟ ಸಭೆಯಲ್ಲಿ ಮಾತನಾಡುತ್ತಿಲ್ಲ. ಇವರು ನಿದ್ರೆ ಮಾಡುತ್ತಿದ್ದಾರೆ. ಈ ಕೂಡಲೇ ಬಡ್ತಿ ಮೀಸಲಾತಿಯನ್ನು ತಡೆ ಹಿಡಿಯಬೇಕು. ಇಲ್ಲದ್ದರೆ ರಾಜಕೀಯ ಭವಿಷ್ಯ ಸಮಾಧಿಯಾಗುತ್ತದೆ ಎಂದು ಕಾಂಗ್ರೆಸ್ ಸಚಿವರಿಗೆ ಎಚ್ಚರಿಕೆ ನೀಡಿದರು.

ಕಾರ್ಯಕ್ರಮದಲ್ಲಿ ವಕೀಲರಾದ ಎಸ್.ಅರುಣ್ ಕುಮಾರ್, ಬೂದಿತಿಟ್ಟು ರಾಜೇಂದ್ರ, ಮಲ್ಲರಾಜು, ಮುಖಂಡರಾದ ಉಡಾ ನಾಗರಾಜು, ಕನಕರಾಜು, ಅರಕಲವಾಡಿ ನಾಗೇಂದ್ರ ಎಂ.ಶಿವಮೂರ್ತಿ, ಬಸನಪುರರಾಜಶೇಖರ್, ಜವರಯ್ಯ ಅರಕಲವಾಡಿ, ಚಾ.ಗು.ನಾಗರಾಜ್, ಹೆಚ್.ಹೆಚ್.ನಾಗರಾಜು. ಶಿವಕುಮಾರ್, ಮೂಡಹಳ್ಳಿ ಮೂರ್ತಿ, ಎಂ.ಶಿವಕುಮಾರ್, ಅರಕಲವಾಡಿ ಮಹದೇವಯ್ಯ, ಚನ್ನಬಸವಯ್ಯ, ಶಿವಣ್ಣ ಆರ್.ಎನ್. ಸಿದ್ದಪ್ಪ, ರಾಮಣ್ಣ , ಸಂತೇಮರಹಳ್ಳಿ ರಾಜು, ಮಾದಪ್ಪ ಮಾದಿಗರು ಎಲ್ಐಸಿ ಸಿದ್ದರಾಜು, ಸುಂದರ್, ಇತರರು ಭಾಗವಹಿಸಿದ್ದರು.

ಕೆಸ್ತೂರು ಗ್ರಾಮದಲ್ಲಿ ಅದ್ದೂರಿ ಮಂಟೇಸ್ವಾಮಿ ಕಂಡಾಯ ಮೆರವಣಿಗೆ



ಯಳಂದೂರು,ಏ.6– ತಾಲೂಕಿನ ಕೆಸ್ತೂರು ಗ್ರಾಮದ ಅದಿಜಾಂಬರವರ ಬಡಾವಣೆಯಲ್ಲಿ ಕುರುಬನ ಕಟ್ಟೆ ಕಂಡಾಯ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.

ಎರಡು ವರುಷಕ್ಕೊಮ್ಮೆ ಅದಿಜಾಂಬವರ ಬಡಾವಣೆಯಲ್ಲಿ ಕುರುಬನ ಕಟ್ಟೆಯ ಚೆನ್ನಯ್ಯ, ಲಿಂಗಯ್ಯರವರ ಕಂಡಾಯವನ್ನು ತರಿಸಿ ಹಬ್ಬವನ್ನು ಆಚರಿಸಲಾಗುತ್ತದೆ.

ರಾತ್ರಿ ಗ್ರಾಮದ ಈಶ್ವರ ದೇವಾಲಯದಲ್ಲಿ ಕಂಡಾಯಗಳನ್ನು ಶುಚ್ಚಿಗೊಳಿಸಿ ಹೊಂಬಾಳೆ, ವಿವಿಧ ಬಗೆಯ ಹೂಗಳಿಂದ ಶೃಂಗಾರಗೊಳಿಸಿ ನಂತರ ಮಾರಿಗುಡಿ, ಮಂಟೇಸ್ವಾಮಿ ದೇವಾಲಯದಲ್ಲಿ ಪೂಜೆ ಸಲ್ಲಿಸಿ ಮುಖ್ಯ ರಸ್ತೆಯ ಮೂಲಕ ಅದಿಜಾಂಬರವರ ಬಡಾವಣೆವರೆಗೆ ಮಂಟೇಸ್ವಾಮಿ ಕಂಡಾಯಗಳನ್ನು ಮಂಗಳವಾದ್ಯ ಮತ್ತು ತಮಟೆ ಸದ್ದಿನೊಂದಿಗೆ ಮೆರವಣಿಗೆ ಮಾಡಲಾಯಿತು.

ರಸ್ತೆ ಉದ್ದಕ್ಕೂ ಹೆಂಗಳೆಯರು ನೀರು ಹಾಕಿ ರಂಗೋಲಿಗಳನ್ನು ಬಿಡಿಸಿದರು. ಹೂ ಹಣ್ಣು ಕಾಯಿ ಪೂಜೆಗಳನ್ನು ಮಾಡಿ ದೇವರನ್ನು ಸ್ಮರಿಸಿದರು. ಗ್ರಾಮದಲ್ಲಿ ಸಂಪೂರ್ಣ ವಿವಿಧ ಬಗೆ ವಿದ್ಯುತ್ ದೀಪಗಳಿಂದ ಹಾಗೂ ಬಾಳೆ ಮಾವಿನ ತೋರಣಗಳಿಂದ ಸಿಂಗಾರಗೊಂಡಿತು.

ಅದಿಜಾಂಬವರ ಸಮುದಾಯ ಯಜಮಾನರಾದ ಮರಪ್ಪ, ಚಾಮರಾಜು, ಮಹೇಶ್, ಚಾಮರಾಜ್, ನಿಂಗರಾಜು,ಸೋಮರಾಜ್, ನಿಂಗಣ್ಣ, ಗವಿನಿಂಗಯ್ಯ ಹಾಗೂ ಎಲ್ಲಾ ಜನಾಂಗದ ಮುಖಂಡರು ಹಾಜರಿದ್ದರು

ಭಗತ್ ಯುವಸೇನೆಯಿಂದ ಶ್ರೀರಾಮನವಮಿ


ಭಗತ್ ಯುವಸೇನೆ ವತಿಯಿಂದ ಭಗವಾಧ್ವಜಾರೋಹಣ ಮೂಲಕ ಶ್ರೀರಾಮನವಮಿ ಆಚರಿಸಿತು.

ಚಾಮರಾಜನಗರ, ಏ.6– ಶ್ರೀರಾಮ ನವಮಿ ಪ್ರಯುಕ್ತ ಭಗತ್ ಯುವಸೇನೆ ವತಿಯಿಂದ ಭಗವಾಧ್ವಜಾರೋಹಣ ಮಾಡಲಾಯಿತು.

ನಗರದ ಮಾರಿಗುಡಿ ಮುಂಭಾಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಭಾರತಮಾತೆ, ಶೀರಾಮ, ಭಗತ್ ಸಿಂಗ್ ಫೋಟೋ ಇಟ್ಟು ಪೂಜೆ ಸಲ್ಲಿಸಿ ಮಷ್ಪಾರ್ಚನೆ ಮಾಡಿ ಅನ್ನಸಂತರ್ಪಣೆ ಮಾಡಲಾಯಿತು.

ನಗರಸಭಾ ಅಧ್ಯಕ್ಷ ಸುರೇಶ್, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಧ್ವಜಾರೋಹಣ ನೆರವೇರಿಸಿದರು.

ಬಿಜೆಪಿ ಜಿಲ್ಲಾಧ್ಯಕ್ಷ ಕುಮಾರ್ ಸಿ.ಎಸ್. ನಿರಂಜನ್ ಪುಷ್ಪಾರ್ಚನೆ ಮಾತನಾಡಿ, ಶ್ರೀರಾಮನ ವಿಚಾರಧಾರೆಗಳು... ಆದರ್ಶಗಳನ್ನು ನಾವೆಲ್ಲರೂ ನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದರು.

ಪರಿಮಳ ರಾಮ ಪಾಠ ಶಾಲೆಯ ಆಚಾರ್ಯ ಪ್ರದೀಪ್ ಕುಮಾರ್ ದೀಕ್ಷಿತ್ ಮಾತನಾಡಿ, ಶ್ರೀರಾಮ ವ್ಯಕ್ತಿಯಲ್ಲಿ ಅದ್ಭುತ ಶಕ್ತಿ. ಅವರ ನಾಮಜಪದಿಂದ ವಿಶೇಷವಾದ ಪಾಪವಿಮೋಚನೆ ಆಗುತ್ತದೆ. ಆದರ್ಶಮರುಷ ಶ್ರೀರಾಮನ ಅನುಗ್ರಹ ಎಲ್ಲರ ಮೇಲಿರ ಎಂದರು.

ಭಗತ್ ಯುವಸೇನೆ ಅಧ್ಯಕ್ಷ ಶಿವು ವಿರಾಟ್ ಮಾತನಾಡಿದರು. ಕಾರ್ಯಕ್ರಮದಲ್ಲಿ ನಗರಸಭಾ ಮಾಜಿ ಅಧ್ಯಕ್ಷ ಸುರೇಶ ನಾಯಕ, ಮುಖಂಡ ನೂರೊಂದುಶೆಟ್ಟಿ, ಮಾಜಿ ಚುಡಾ ಅಧ್ಯಕ್ಷರಾದ ಕುಲಗಾಲ ಶಾಂತಮೂರ್ತಿ, ಬಾಲಸುಬ್ರಹ್ಮಣ್ಯಂ, ವೆಂಕಟರಾವ್‌ಸಾಠೆ, ಚಂದ್ರಶೇಖರ್, ನಗರಸಭಾ ಮಾಜಿ ಸದಸ್ಯರಾದ ಸುಂದರ್ ಶಿವಣ್ಣ, ಚಂದ್ರು ಬುಲೆಟ್, ಸೂರ್ಯಕುಮಾರ್, ಅರ್ಜುನ್, ಹರೀಶ್, ರಾಮು, ಮಹೇಶ್, ಕಿರಣ್ ಸಂತು, ನಾಗಚೇತ್, ರಕ್ಷಿ, ಪದ್ಮ, ಶೈಲಾ, ಕಮಲಮ್ಮ, ಸರಸ್ವತಿ, ಮನು, ಪ್ರದೀಪ್, ರವಿ, ಬಿಜೆಪಿಮಣಿ ಕೃಷ್ಣ, ರಾಮಸಮುದ್ರ ಶಿವಣ್ಣ, ರುದ್ರ, ಬಂಗಾರು, ರಾಮು ಇತರರು ಹಾಜರಿದ್ದರು.

ಕೈವಾರ ತಾತಯ್ಯನವರ ಚಿಂತನೆ ಅಳವಡಿಸಿಕೊಳ್ಳಲು ಕರೆ

ಕೊಳ್ಳೇಗಾಲ.ಏ.6– ಒಂದೊಂದು ಮತವೂ ಮುಖ್ಯ ಎಂಬುದಕ್ಕೆ 1ಮತದಿಂದ ಪರಾಭವ ಹೊಂದಿದ ನಾನೇ ಉದಾಹರಣೆಯಾಗಿದ್ದೇನೆ, ಈ ಹಿನ್ನೆಲೆಯಲ್ಲಿ ಯಾವುದೆ ಚಿಕ್ಕ ಸಮಾಜ ನನಗೆ ಆಹ್ವಾನಿಸಿದರೂ ಅಲ್ಲಿನ ಸಮಸ್ಯೆಗೆ ನನ್ನ ಕೈಲಾದ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಸ್ಪಂದಿಸುವೆ ಎಂದು ಶಾಸಕ ಎ ಆರ್ ಕೃಷ್ಣಮೂರ್ತಿ ಹೇಳಿದರು

ಪಟ್ಟಣದಲ್ಲಿ ಬಲಜಿಗ ಸಮಾಜ ಅಯೋಜಿಸಿದ್ದ ಕೈವಾರ ತಾತಯ್ಯ ಜಯಂತಿ ಸಮಾರಂಭಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಯಾವ ವ್ಯಕ್ತಿ ಕರೆದರೂ ಅಲ್ಲಿಗೆ ತೆರಳಿ ಸ್ಪಂದಿಸುವ ಮನೋಭಾವ ನನ್ನದು, ಕೈವಾರ ತಾತಯ್ಯ ಅವರ ಈ ದೇಶ ಕಂಡ ದಾರ್ಶನಿಕರಲ್ಲಿ ಒಬ್ಬರು, ಅವರು ಹಾಕಿಕೊಟ್ಟ ಹಾದಿಯಲ್ಲಿ ಸಾಗುವ ಮೂಲಕ ತಾತಯ್ಯನವರ ಚಿಂತನೆಗಳನ್ನು ಕಿಂಚಿತ್ತಾದರೂ ಅಳವಡಿಸಿಕೊಳ್ಳೋಣ, ಸಮಾಜಿಕ ದಾರ್ಶನಿಕರು ನೀಡಿರುವ ಕೊಡುಗೆ ಅಪಾರ, ಅವರ ಜಯಂತಿ ಆಚರಣೆ ಮೂಲಕ ನಾವು ಅವರನ್ನು ಸ್ಮರಿಸಲಾಗುತ್ತಿದೆ ಎಂದರು.


ಕೈವಾರ ತಾತಯ್ಯ ಜಯಂತಿ ಸಮಾರಂಭಕ್ಕೆ ಶಾಸಕ ಕೃಷ್ಣಮೂರ್ತಿ ಚಾಲನೆ ನೀಡಿದರು.

ಬಲಿಜಗ ಕುಲಬಾಂಧವರ ಸಂಘದ ಅಧ್ಯಕ್ಷ ಉದಯ ಕುಮಾರ್, ಹನೂರು ಮುಖಂಡ ವೆಂಕಟೇಶ್, ಸಂಸದ ಜಗದೀಶ್ ಶೆಟ್ಟರ್ ಆಪ್ತ ಸಹಾಯಕ ಗಿರೀಶ್ ಬಾಬು, ನಗರಸಭೆ ಸದಸ್ಯ ಪರಮೇಶ್ವರಯ್ಯ, ಬಿಜೆಪಿ ಮುಖಂಡ ಚಿಕ್ಕಲಿಂಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ರಘು ಇನ್ನಿತರಿದ್ದರು.

ಸ್ಮಾರ್ಟ್ ಮೀಟರ್ ಅಳವಡಿಕೆಗೆ ವಿರೋಧಿಸಿ ರೈತ ಸಂಘ ಪ್ರತಿಭಟನೆ

ಚಾಮರಾಜನಗರ, ಏ.6–ಕೃಷಿ ಪಂಪ್ ಸೆಟ್‌ಗಳಿಗೆ ವಿದ್ಯುತ್ ಸ್ಮಾರ್ಟ್ ಮೀಟರ್ ಅಳವಡಿಸುವಂತೆ ನೀಡಿರುವ ಆದೇಶವನ್ನು ಹಿಂಪಡೆಯುವಂತೆ ಆಗ್ರಹಿಸಿ ರಾಜ್ಯ ರೈತ ಸಂಘ ಪ್ರತಿಭಟನೆ ನಡೆಸಿತು.

ನಗರದ ಸೆಸ್ಕ್ ಕಚೇರಿ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ರಾಜ್ಯ ಸರ್ಕಾರ ಹಾಗೂ ಸೆಸ್ಕ್ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಕೃಷಿ ಪಂಪ್ ಸೆಟ್‌ಗಳನ್ನು ಅಳವಡಿಸಿಕೊಂಡು ವ್ಯವಸಾಯ ಮಾಡುತ್ತಿರುವ ರೈತರ ಬದುಕು ಬೀದಿಗೆ ಬಿದ್ದಿರುವ ಸಂದರ್ಭದಲ್ಲಿ ಪ್ರೀಪೇಡ್ ಹಾಗೂ ಫ್ರೀಪೈಡ್ ವ್ಯವಸ್ಥೆಯ ಸ್ಮಾರ್ಟ್ ಮೀಟರ್‌ಗಳನ್ನು ಅಳವಡಿಸಿರುವುದನ್ನು ಖಂಡಿಸುತ್ತೇವೆ ಎಂದರು.

ಸರ್ಕಾರ ಸ್ವಾಮಿನಾಥನ್ ವರದಿ ಜಾರಿಗೊಳಿಸಿ ರೈತರ ಬೆಳೆಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಿ, ಖರೀದಿಸುವ ಮೂಲಕ ರೈತರ ಬದುಕನ್ನು ಹಸನು ಮಾಡುವ ತನಕ ಇದನ್ನು ಜಾರಿಗೊಳಿಸಬಾರದು ಎಂದು ಒತ್ತಾಯಿಸಿದ ಪ್ರತಿಭಟನಾಕಾರರು ಸೆಸ್ಕ್ ಅಧಿಕಾರಿಗಳ ಮೂಲಕ ಇಂಧನ ಸಚಿವರಿಗೆ ಮನವಿ ಸಲ್ಲಿಸಿದರು

ರೈತ ಸಂಘದ ರಾಜ್ಯಾಧ್ಯಕ್ಷ ಎ.ಎಂ. ಮಹೇಶ್ ಪ್ರಭು, ಪದಾಧಿಕಾರಿಗಳಾದ ಮರಿಯಾಲ ಮಹೇಶ್, ಮಹೇಶ್, ಯಶ್ವಂತ್, ಮಲ್ಲಣ್ಣ, ಕಾಡಳ್ಳಿ ಮಹೇಶ್, ರಂಗಸ್ವಾಮಿ ಸೇರಿದಂತೆ ಇತರರು ಭಾಗವಹಿಸಿದ್ದರು.

ಹಿಂದೂ ಜಾಗೃತಿ ವೇದಿಕೆಯಿಂದ ಶ್ರೀರಾಮನವಮಿ ಆಚರಣೆ


ಚಾಮರಾಜನಗರದ ಶ್ರೀಮಾರಮ್ಮ ಗುಡಿ ಮುಂಭಾಗದಲ್ಲಿ ಹಿಂದೂ ಜಾಗೃತಿ ವೇದಿಕೆ ಶ್ರೀರಾಮನವಮಿ ಆಚರಿಸಿತು


ಚಾಮರಾಜನಗರ: ಹಿಂದೂ ಜಾಗೃತಿ ವೇದಿಕೆ ನಗರದ ಶ್ರೀ ಮಾರಮ್ಮ ಗುಡಿ ಮುಂಭಾಗದಲ್ಲಿ ಶ್ರೀರಾಮನವಮಿ ಆಚರಿಸಿತು.

ಬೆಳಗ್ಗೆ 11 ಗಂಟೆಗೆ ನಗರದ ಹಳೇ ಖಾಸಗಿ ಬಸ್ ನಿಲ್ದಾಣದ ಬಳಿ ಶ್ರೀರಾಮದೇವರ ಫೋಟೊಗೆ ಪೂಜೆ ಸಲ್ಲಿಸಿ ಸಾರ್ವಜನಿಕರಿಗೆ ಮಜ್ಜಿಗೆ, ಪಾನಕ ಹಾಗೂ ಕೋಸಂಬರಿಯನ್ನು ಹಂಚಿಕೆ ಮಾಡಿದರು. ಹಿಂದೂ ಜಾಗೃತಿ ವೇದಿಕೆಯ ಅಧ್ಯಕ್ಷ ಶ್ರೀಕಂಠಸ್ವಾಮಿ ಮಾತನಾಡಿ, ರಾಮನವಮಿ ಪುಣ್ಯದ ದಿನದಂದು ಹಿಂದೂ ಧರ್ಮವನ್ನು ಉಳಿಸುವ ಸಂಕಲ್ಪವನ್ನು ಎಲ್ಲರು ಮಾಡೋಣ, ಅಖಂಡ ಹಿಂದೂ ಧರ್ಮ ಉಳಿದರೆ ಮಾತ್ರ ನಮ್ಮ ಸಂಸ್ಕೃತಿ ಪರಂಪರೆಯನ್ನು ಉಳಿಸಲು ಸಾಧ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ವೇದಿಕೆಯ ಸಂಚಾಲಕ ಕೃಷ್ಣಕುಮಾರ್, ನಗರಸಭೆ ಅಧ್ಯಕ್ಷ ಸುರೇಶ್, ಮಾಜಿ ಅಧ್ಯಕ್ಷ ಸುರೇಶ್ ನಾಯಕ, ಬುಲೆಟ್ ಚಂದ್ರು, ಸದಸ್ಯರಾದ ಮಂಜುನಾಥ್, ಬಸವಣ್ಣ, ಮಾಜಿ ಸದಸ್ಯ ಸುಂದರರಾಜ್, ಸಿ.ಎಂ.ಮಂಜುನಾಥಗೌಡ, ಡಾ. ಪರಮೇಶ್ವರಪ್ಪ, ಆರ್.ಪುಟ್ಟಮಲ್ಲಪ್ಪ, ಚಂದ್ರಶೇಖರ್, ಬಾಲಸುಬ್ರಮಣ್ಯ ಹಾಜರಿದ್ದರು.

ಅಕ್ರಮ ನಾಡಬಂದೂಕನ್ನು ಕೊಂಡೊಯ್ಯುತ್ತಿದ್ದ ಆರೋಪಿ ಬಂಧನ

ಕೊಳ್ಳೇಗಾಲ: ಕಾಡು ಪ್ರಾಣಿಗಳನ್ನು ಬೇಟೆಗಾಗಿ ಅಕ್ರಮವಾಗಿ ನಾಡಬಂದೂಕನ್ನು ಕೊಂಡೊಯ್ಯುತ್ತಿದ್ದ ವ್ಯಕ್ತಿಯೊಬ್ಬನನ್ನು ಪೊಲೀಸರು ಬಂಧಿಸಿದ್ದಾರೆ.



ತಾಲೂಕಿನ ಕುಣಗಳ್ಳಿ ಗ್ರಾಮದ ಲೇಟ್ ಸಿದ್ದಯ್ಯನ ಮಗನಾದ ಕೆಂಪಶೆಟ್ಟಿ(50) ಬಂಧಿತ ಆರೋಪಿ. ಈತನಿಂದ ಬಂದೂಕನ್ನು ಜಪ್ತಿ ಮಾಡಲಾಗಿದೆ. ಆರೋಪಿ ಗ್ರಾಮದ ಲಕಯ್ಯನ ಕೆರೆ ಏರಿ ಮೇಲೆ ಕಾಡು ಪ್ರಾಣಿಗಳನ್ನು ಬೇಟೆಯಾಡುವ ಸಲುವಾಗಿ ಅಕ್ರಮವಾಗಿ ಬಂದೂಕನ್ನು ಸಾಗಾಣಿಕೆ ಮಾಡುತ್ತಿದ್ದುದ್ದನ್ನು ಖಚಿತ ಪಡಿಸಿಕೊಂಡ ಅಗರ ಮಾಂಬಳ್ಳಿ ಪೊಲೀಸರು ಆರೋಪಿಯನ್ನು ಬಂಧಿಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ದಾಳಿಯಲ್ಲಿ ಯಳಂದೂರು ಸಿಪಿಐ ಶ್ರೀಕಾಂತ್, ಪ್ರಭಾರ ಕ್ರೈಂ ಪಿಎಸ್ಐ ಉಮಾವತಿ, ಸಿಬ್ಬಂದಿಗಳು ಶಿವಕುಮಾರ್, ಸಕ್ರುನಾಯ್ಕ್, ಉಸ್ಮಾನ್, ಬಸವರಾಜು, ಶಿವಕುಮಾರ್, ಚಾಲಕ ಮಲ್ಲೇಶ್ ಇದ್ದರು.

ಆನ್‌ಲೈನ್ ಹೂಡಿಕೆಯಲ್ಲಿ ವೈದ್ಯೆಗೆ 19 ಲಕ್ಷ ವಂಚನೆ

ಮೈಸೂರು, ಏ.6(ಎಸ್‌ಬಿಡಿ)– ವೈದ್ಯೆಯೊಬ್ಬರು ಆನ್‌ಲೈನ್ ಮೂಲಕ ಹೂಡಿಕೆ ಮಾಡಿ ಸುಮಾರು 19 ಲಕ್ಷ ರೂ. ಕಳೆದು ಕೊಂಡಿರುವ ಬಗ್ಗೆ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ನಗರದ ಟಿ.ಕೆ.ಲೇಔಟ್‌ನಲ್ಲಿ ನೆಲೆಸಿರುವ ವೈದ್ಯೆಯೊಬ್ಬರು ಗೂಗಲ್‌ನಲ್ಲಿ ಅಪ್‌ಸ್ಟಾಕ್ಸ್ ಡಿಮ್ಯಾಟ್ ಅಂಡ್ ಟ್ರೇಡಿಂಗ್ ಬಗ್ಗೆ ಮಾಹಿತಿ ನೋಡುವಾಗ ಹೆಚ್ಚಿನ ಮಾಹಿತಿಗೆ ಅಲ್ಲಿದ್ದ ಲಿಂಕ್ ಮೇಲೆ ಕ್ಲಿಕ್ ಮಾಡುವಂತೆ ಸೂಚನೆ ಬಂದಿದೆ. ಅದರಂತೆ ಅವರು ಲಿಂಕ್ ಕ್ಲಿಕ್ ಮಾಡಿ, ನೋಂದಾಯಿಸಿಕೊಂಡಿದ್ದಾರೆ. ನಂತರ ಅವರ ಮೊಬೈಲ್ ಸಂಖ್ಯೆಯನ್ನು ಅಪ್‌ಸ್ಟಾಕ್ಸ್ ವ್ಯಾಲ್ಯೂ ಆಡೆಡ್ ಗ್ರೂಪ್ ವಾಟ್ಸಾಪ್ ಗುಂಪಿಗೆ ಸೇರಿಸಲಾಗಿದೆ. ಆ ಗ್ರೂಪ್‌ನಲ್ಲಿ ತಿಳಿಸಿದಂತೆ ಹೂಡಿಕೆ ಮಾಡಲು ನಿರ್ಧರಿಸಿ, 9 ಸಾವಿರ, 57 ಸಾವಿರ ನಂತರ 1.25 ಲಕ್ಷ ರೂ. ಹೂಡಿಕೆ ಮಾಡಿದ್ದಾರೆ.

ಈ ಹಣಕ್ಕೆ ಲಾಭ ಬಂದಿದೆ ಎಂದು ಸಂದೇಶ ಬರುತ್ತಿದ್ದಂತೆ 500 ರೂ. ವಿತ್ ಡ್ರಾ ಮಾಡಿದ್ದಾರೆ. ಇದರಿಂದ ಅವರ ನಂಬಿಕೆ ಮತ್ತಷ್ಟು ಗಟ್ಟಿಯಾಗಿ 5.50 ಲಕ್ಷ ರೂ. ವರ್ಗಾವಣೆ ಮಾಡಿದ್ದಾರೆ. ಆ ಹಣಕ್ಕೂ ಲಾಭ ಬಂದಿರುವುದಾಗಿ ತಿಳಿಸಲಾಗಿದೆ. ಆದರೆ ಆ ಹಣವನ್ನು ವಿತ್ ಡ್ರಾ ಮಾಡಲು ಮುಂದಾದಾಗ ಕಮಿಷನ್ ಕಟ್ಟಿದರೆ ಮಾತ್ರ ಹಣ ಬಿಡಿಸಿಕೊಳ್ಳಲು ಅನುಮತಿ ಸಿಗುತ್ತದೆ ಎಂಬ ಸಂದೇಶ ಬಂದಿದೆ ಅದನ್ನೂ ನಂಬಿದ ವೈದ್ಯೆ 10.18 ಲಕ್ಷ ರೂ. ವರ್ಗಾವಣೆ ಮಾಡಿದ್ದಾರೆ. ಆದಾಗ್ಯೂ ಲಾಭದ ಹಣ ಪಡೆಯಲು ಸಾಧ್ಯವಾಗದಿರುವ ಬಗ್ಗೆ ಪ್ರಶ್ನಿಸಿದಾಗ 7.63 ಲಕ್ಷ ಟ್ಯಾಕ್ಸ್ ಕಟ್ಟಬೇಕೆಂದು ವಂಚಕರು ತಿಳಿಸಿದಾಗ ತಾವು ಮೋಸ ಹೋಗಿರುವುದು ಮನವರಿಕೆಯಾಗಿ ಪೊಲೀಸರಿಗೆ ದೂರು ನೀಡಿದ್ದಾರೆ.

ಅಲ್ಯುಮಿನಿಯಂ ಸೆಂಟ್ರಿಂಗ್ ಶೀಟ್ ಕಳವು

ಮೈಸೂರು, ಏ.6(ಎಸ್‌ಬಿಡಿ)– ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಮನೆ ನಿರ್ಮಿಸುತ್ತಿರುವ ಜಾಗದಲ್ಲಿ ಜೋಡಿಸಲಾಗಿದ್ದ ಅಲ್ಯುಮಿಲಿಯಂ ಸೆಂಟ್ರಿಂಗ್ ಶೀಟ್‌ಗಳು ಕಳ್ಳತನವಾಗಿವೆ ಎಂದು ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನೆ ನಿರ್ಮಾಣದ ಗುತ್ತಿಗೆ ಪಡೆದಿರುವ ಗೌರಿ ಇನ್ ಫ್ರಾ ಇಂಜಿನಿಯರ್ಸ್ ಕಂಪನಿಯ ವ್ಯವಸ್ಥಾಪಕ ಆಕಾಶ್ ಈ ಸಂಬಂಧ ದೂರು ನೀಡಿದ್ದು, ಕಳುವಾಗಿರುವ ವಸ್ತುಗಳ ಪ್ರಮಾಣ ಹಾಗೂ ಬೆಲೆಯನ್ನು ಪರಿಶೀಲನೆ ಬಳಿಕ ತಿಳಿಸುವುದಾಗಿ ಹೇಳಿದ್ದಾರೆ.

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಮೈಸೂರು ತಾಲೂಕು ಶ್ರೀನಗರ–ದಡದಹಳ್ಳಿ ರಸ್ತೆಯಲ್ಲಿ 1344 ಮನೆಗಳನ್ನು ಕಟ್ಟಿಕೊಡುವ ಕಾಮಗಾರಿ ಗುತ್ತಿಗೆಯನ್ನು ನಮ್ಮ ಕಂಪನಿ ಪಡೆದಿದ್ದು, 2022ರ ಸೆಪ್ಟೆಂಬರ್‌ನಿಂದ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದೆ. ಈ ಹಿನ್ನೆಲೆಯಲ್ಲಿ ನಿರ್ಮಾಣ ಹಂತದ ಮನೆಗಳು ಹಾಗೂ ಕಂಪನಿಯ ತಾತ್ಕಾಲಿಕ ಕಚೇರಿ ಹಿಂಭಾಗ ಅಲ್ಯುಮಿನಿಯಂ ಸೆಂಟ್ರಿಂಗ್ ಶೀಟ್‌ಗಳನ್ನು ಜೋಡಿಸಲಾಗಿತ್ತು. ಕಟ್ಟಡದ ಸಾಮಗ್ರಿಗಳನ್ನು ನೋಡಿ ಕೊಳ್ಳಲು ಇಬ್ಬರು ಭದ್ರತಾ ಸಿಬ್ಬಂದಿಯನ್ನು ನೇಮಿಸಿ, ಸೋಲಾರ್ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿತ್ತು. ಆದರೆ ಮಾ.30ರಂದು ಕೆಲಸಗಾರರು ಕರೆ ಮಾಡಿ, ಕಚೇರಿ ಹಿಂಭಾಗ ಜೋಡಿಸಿಟ್ಟಿದ್ದ ಅಲ್ಯುಮಿಲಿಯಂ ಸೆಂಟ್ರಿಂಗ್ ಶೀಟ್‌ಗಳು ಕಾಣಿಸುತ್ತಿಲ್ಲ ಎಂದು ತಿಳಿಸಿದರು. ಬಳಿಕ ಸ್ಥಳಕ್ಕೆ ಬಂದು ಪರಿಶೀಲಿಸಿದಾಗ ಸೋಲಾರ್ ಸಿಸಿ ಕ್ಯಾಮರಾ ಕಿತ್ತುಹಾಕಿ ಕಳ್ಳತನ ಮಾಡಿರುವುದು ತಿಳಿಯಿತು ಎಂದು ಪೊಲೀಸರಿಗೆ ನೀಡಿರುವ ದೂರಿನಲ್ಲಿ ಆಕಾಶ್ ತಿಳಿಸಿದ್ದಾರೆ.

ಸರ್ಕಾರಿ ನೌಕರರ ಕ್ರೀಡಾಕೂಟ ಸಮಾರೋಪ



ಮೈಸೂರು, ಏ.6(ಎಂಕೆ)– ಸರ್ಕಾರಿ ನೌಕರರ ದೈನಂದಿನ ಒತ್ತಡ ನಿವಾರಣೆಗೆ ಕ್ರೀಡೆ ಉಪಯುಕ್ತವಾಗಿದ್ದು, ಪ್ರತಿಯೊಬ್ಬರು ಒಂದಲ್ಲ ಒಂದು ಬಗೆಯ ಕ್ರೀಡೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ಶಾಸಕ ಕೆ.ಹರೀಶ್‌ಗೌಡ ಸಲಹೆ ನೀಡಿದರು.

ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಜಿಲ್ಲಾಡಳಿತ, ಜಿಪಂ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಜಿಲ್ಲಾಮಟ್ಟದ ರಾಜ್ಯ ಸರ್ಕಾರಿ ನೌಕರರ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.


ಕ್ರೀಡೆಯಲ್ಲಿ ಪಾಲ್ಗೊಳ್ಳುವುದರಿಂದ ನಮ್ಮಲ್ಲಿ ಉತ್ಸಾಹ ಚಿಗುರೊಡೆಯುತ್ತದೆ. ಕ್ರೀಡೆಯು ನೌಕರರಲ್ಲಿ ದೈಹಿಕ, ಮಾನಸಿಕ ಸಾಮರ್ಥ್ಯವನ್ನು ಹೆಚ್ಚಿಸಲಿದೆ. ದೈನಂದಿನ ಕೆಲಸಗಳಲ್ಲಿ ಸರ್ಕಾರಿ ನೌಕರರಿಗೆ ಒತ್ತಡಗಳು ಸಹಜ. ಈ ಒತ್ತಡಗಳಿಗೆ ಏನು ಕಾರಣ ಎಂಬುದನ್ನು ನಾವೇ ಹುಡುಕಬೇಕಾಗಿದೆ. ಸರ್ಕಾರಿ ಯೋಜನೆಗಳನ್ನು ಸಮಾಜದ ಕಟ್ಟ ಕಡೆಯ ವ್ಯಕ್ತಿಗೂ ತಲುಪಿಸುವ ಜವಾಬ್ದಾರಿ ಸರ್ಕಾರಿ ನೌಕರರ ಮೇಲಿದೆ. ಈ ನಿಟ್ಟಿನಲ್ಲಿ ಅವರ ಮೇಲೆ ಒತ್ತಡವೂ ಹೆಚ್ಚಾಗಿರಲಿದೆ ಎಂದರು.

ಅಥ್ಲೆಟಿಕ್ಸ್ ವಿಭಾಗದ 100 ಮೀ ಓಟದಲ್ಲಿ ಹುಣಸೂರಿನ ಪ್ರದೀಪ್ ಪ್ರಥಮ, ಮೈಸೂರಿನ ಪಂಪಪತಿ ದ್ವಿತೀಯ, ಗಣೇಶ ತೃತೀಯ, 200 ಮೀ ಓಟದಲ್ಲಿ ರೇಷ್ಮೆ ಇಲಾಖೆ ಹೆಚ್.ಎಲ್.ಚಂದ್ರಶೇಖರ್ ಪ್ರಥಮ, ಹುಣಸೂರಿನ ಎಂ.ವಿ.ಜಗದೀಶ್ ದ್ವಿತೀಯ, ಬಿಸಿಎಂ ಇಲಾಖೆಯ ಅಡಿವಪ್ಪ ಉದಗಡ್ಡಿ ತೃತೀಯ, 400 ಮೀ ಓಟದಲ್ಲಿ ಅರಣ್ಯ ಇಲಾಖೆ ಶ್ರೀಕಾಂತ ಪ್ರಥಮ, ಶಿಕ್ಷಣ ಇಲಾಖೆಯ ಪಂಪಪತಿ ದ್ವಿತೀಯ, ವಿ.ಪ್ರಜ್ವಲ್ ತೃತೀಯ ಬಹುಮಾನ ಪಡೆದರು.

800 ಮೀ ಓಟದಲ್ಲಿ ಪಿರಿಯಾ ಪಟ್ಟಣದ ಕೆ.ಆರ್.ರಘುವೀರ ಪ್ರಥಮ, ಕೆ.ಶಿವರಾಜ್ ದ್ವಿತೀಯ, ಮೈಸೂರಿನ ದಿನೇಶ್ ಕುಮಾರ್ ತೃತೀಯ, 1500 ಮೀ ಓಟದಲ್ಲಿ ನಂಜನಗೂಡಿನ ನಾಗಪ್ಪ ವಾಟ್ಟಿಳ್ ಪ್ರಥಮ, ಪಿರಿಯಾಪಟ್ಟಣದ ಕೆಆರ್.ರಘುವೀರ ದ್ವಿತೀಯ, ಕೆಶಿವರಾಜ್ ತೃತೀಯ ಬಹುಮಾನ ಗೆದ್ದರು. ಜಾನಪದ ನೃತ್ಯದಲ್ಲಿ ಶಿಕ್ಷಣ ಇಲಾಖೆ ಪ್ರಥಮ ಸ್ಥಾನ ಪಡೆಯಿತು. ಹಾಗೆಯೇ ವಿವಿಧ ಗುಂಪು ಪಂದ್ಯಗಳಲ್ಲಿ ಸರ್ಕಾರಿ ನೌಕರರು ಗೆದ್ದು ಸಂಭ್ರಮಿಸಿದರು.

ಅಂತಿಮವಾಗಿ ವಿಜೇತರಿಗೆ ಬಹುಮಾನ ವಿತರಿಸಿ, ಅಭಿನಂದಿಸಲಾಯಿತು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಡಾ.ಸಿ.ಬಿ.ಅರುಣ್ ಕುಮಾರ್, ಕಾರ್ಯದರ್ಶಿ ಆರ್.ನಾಗರಾಜ್, ಖಜಾಂಚಿ ಕೆಸಿ.ರವಿ, ರಾಜ್ಯ ಪರಿಷತ್ ಸದಸ್ಯ ಡಿ.ಮಾಲೇಗೌಡ, ಕಾರ್ಯಾಧ್ಯಕ್ಷ ಪಿ.ರಾಘವೇಂದ್ರ, ಗೌರವಾಧ್ಯಕ್ಷ ಎ.ಸಿ.ಮಂಜೇಗೌಡ, ಹಿರಿಯ ಉಪಾಧ್ಯಕ್ಷ ಟಿ.ಎನ್.ಲೋಕೇಶ್, ಕ್ರೀಡಾ ಕಾರ್ಯದರ್ಶಿಗಳಾದ ಎ.ಶಿವರಾಜು, ಕಿರಣ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಡಾ.ಬಾಬುಜೀ ಜನ್ಮಜಯಂತಿ...



ಮೈಸೂರು ಜಿಲ್ಲಾ ವಕೀಲರ ಸಂಘದ ಕಚೇರಿಯಲ್ಲಿ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನರಾಮ್ ಅವರ ಜನ್ಮ ದಿನವನ್ನು ಆಚರಿಸಲಾಯಿತು. ಸಂಘದ ಅಧ್ಯಕ್ಷ ಎಸ್.ಲೋಕೇಶ್, ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಕಾರ್ಯದರ್ಶಿ ಎ.ಜಿ.ಸುಧೀರ್, ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರೂ ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್, ಸಂಘದ ಮಾಜಿ ಅಧ್ಯಕ್ಷ ಜಿ.ವಿ.ರಾಮಮೂರ್ತಿ, ಮಾಜಿ ಕಾರ್ಯದರ್ಶಿ ಎಸ್.ಉಮೇಶ್, ವಕೀಲರಾದ ಸುರೇಂದ್ರ ಶಿವಣ್ಣ, ಮಾಳಪ್ಪ ಗಿರೀಶ್ ಮತ್ತಿತರರು ಉಪಸ್ಥಿತರಿದ್ದರು.

ರಾಮನವಮಿ ಸಂಭ್ರಮ



ಮೈಸೂರಿನ ಅಗ್ರಹಾರದ ತ್ಯಾಗರಾಜ ರಸ್ತೆಯಲ್ಲಿನ ಶ್ರೀ ಚಿಕ್ಕಾಂಜನೇಯ ಸ್ವಾಮಿ ದೇವಸ್ಥಾನದ ಸಮಿತಿ ವತಿಯಿಂದ ಭಾನುವಾರ ಶ್ರೀ ರಾಮನವಮಿ ಪ್ರಯುಕ್ತ ವಿಶೇಷ ಪೂಜೆ ನೆರವೇರಿಸಿ, ಸಾರ್ವಜನಿಕರಿಗೆ ಪಾನಕ–ಮಜ್ಜಿಗೆ ಹಾಗೂ ಕೋಸಂಬರಿ ವಿತರಿಸಲಾಯಿತು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600+30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ವಿಶೇಷ ಶಿರಡಿ ಮತ್ತು 3 ಜ್ಯೋತಿರ್ಲಿಂಗ ಪ್ರವಾಸ–30 ಸ್ಥಳಗಳ ವೀಕ್ಷಣೆ
10 ದಿನ - 2×2 AC ಬಸ್, ದಿನಾಂಕ 24-4-25–ಹಂಪಿ–ವಿರೂಪಾಕ್ಷ ಮಂದಿರ– ಕೂಡಲಸಂಗಮ–ಬಾದಾಮಿ ಬನಶಂಕರಿ–ಮಹಾಕೂಟ–ಗೋಲಗುಂಬಜ್–ಶಿವಗಿರಿ– ಗಾಣಗಾಪುರ–ಅಷ್ಟಲ್ಪುರ್– ಅಕ್ಕಲಕೋಟ–ಪಂಡರಾಪುರ–ಶನಿಸಿಂಗನಾಪುರ–ಶಿರಡಿ–ಕಂಡೋಬ ಮಂದಿರ–ಪಂಚಮುಖಿ ಗಣಪತಿ–ತಪೋಭೂಮಿ–ಸಾಯಿ ಹೇರಿ ಟೇಜ್ ವಿಲೇಜ್–ಸಾಕೋರಿ–ಎಲ್ಲೋರ–ಭದ್ರಾಮಾರುತಿ–ಮಿನಿ ತಾಜಮಹಲ್–ಗ್ರಿಷ್ಣೇಶ್ವರ್–ನಾಸಿಕ್– ಪಂಚವಟಿ–ರಾಮಕುಂದ್– ಕಾಲರಾಮ್–ಮುಕ್ತಿಧಾಮ್–ಸಪ್ತ ಶೃಂಗಿ ಮಾತಾ–ತ್ರಯಂಬಕೇಶ್ವರ್–ಭೀಮಾಶಂಕರ್–ಪುಣೆ ಬಾಲಾಜಿ–ಕೊಲ್ಹಾಪುರ ಮತ್ತು ಸವದತ್ತಿ ಎಲ್ಲಮ್ಮ. ಊಟ/ವಸತಿ ಸೇರಿ– 19500/–
ಸಂಪರ್ಕಿಸಿ– ಗ್ಲೋಬಲ್ ಟೂರ್ಸ್ 9686743337,7022277007

ಜಮೀನು ಮಾರಾಟಕ್ಕಿದೆ
ಮೈಸೂರಿನಿಂದ ಬರೀ 28 ಕಿ.ಮಿ. ಮಾತ್ರ ಒಂದು ಎಕರೆ ಫಾರಂ ಹೌಸ್‌ಗೆ ಸೂಕ್ತವಾದ ಜಮೀನು. ಬನ್ನೂರ್‌ನಿಂದ 5 ಕಿ.ಮಿ., (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
9739826533

HOME APPLIANCES SERVICE
ಫ್ರಿಡ್ಜ್, ವಾಶಿಂಗ್ ಮೆಶೀನ್, ಮೈಕ್ರೋವೋವನ್, ಎಲ್‌ಸಿಡಿ, ಸೋಲಾರ್, ಯುಪಿಎಸ್, ವಾಟರ್ ಪ್ಯೂರಿಫೈಯರ್, ಸೇಲ್ಸ್ ಅಂಡ್ ಸರ್ವೀಸ್, ನಿಮ್ಮ ಮನೆಯ ಹತ್ತಿರ ದೊರೆಯುತ್ತದೆ.
Contact: Srinivas 9379699229

ಬಾಡಿಗೆಗೆ ಇದೆ
2BHK Ramanuja Road, 14th Cross, Ground Floor
Contact No: 8050259938 8073733963

ಬಾಲಾಜಿ ಟೂರಿಸ್ಟ್
22.5.25–10 ದಿನ: ಹೈದ್ರಾಬಾದ್, ರಾಮೋಜಿ ಫಿಲಂ ಭದ್ರಚಲಂ, ಸಿಂಹಚಲಂ, ಅನ್ನಾವರಂ, ಅಹೋಬಿಲಂ.
14.6.25–7 ದಿನ: ಕಾಶೀ, ಅಯೋಧ್ಯ, ಆಗ್ರಾ, ಗಯಾ, ಬುದ್ಧಗಯಾ, ದೆಹಲಿ, ಮಥುರಾ ಬೃಂದಾವನ, ಪ್ರಯಾಗ್
5.9.25–14 ದಿನ: ಚಾರ್‌ಧಾಮ್ ವಿಶೇಷ ಯಾತ್ರೆ ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದ್ರಿನಾಥ್ (ಸರ್ಕಾರದಿಂದ ರೂ.20,000/– ಸಬ್ಸಿಡಿ ದೊರೆಯುತ್ತದೆ)
4.10.25–12 ದಿನ: ಗುಜರಾತ್ ರಾಜಸ್ಥಾನ ಮಧ್ಯಪ್ರದೇಶ ಜೈಪುರ್, ದ್ವಾರಕ, 4ಜ್ಯೋತಿರ್ಲಿಂಗಗಳು, Statue of Unity ವಿಮಾನ/ರೈಲು/2+2 AC ಬಸ್/ಊಟ–ವಸತಿ ಸೇರಿದೆ.
9945770486

ಹೊಸ ಮನೆ ಮಾರಾಟಕ್ಕಿದೆ
3 BHK, 30x40 EAST FACE MUDA Approved Near St. Joseph School, Yelwala, Mysore
Mob: 8217851695

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 6360485921

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆವುಳ್ಳವರು ಸಂಪರ್ಕಿಸಿ
9110455297|9591557126

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇ ಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
Mob: 6360884930

ಜೈ ಆಂಜನೇಯ ಬೋರ್‌ವೆಲ್ಸ್ (7A ನೋಂದಾಯಿಸಲಾಗಿದೆ) ®
ನಾವು ಮೈಸೂರು, ಚಾಮರಾಜನಗರ ಮತ್ತು ಮಂಡ್ಯ ಜಿಲ್ಲೆಗಳಲ್ಲಿ 6½" ಮತ್ತು 4¾" ಬೋರ್‌ವೆಲ್ ಕೊರೆಯುತ್ತೇವೆ
9900234477/9902361213
ಶ್ರೀರಾಮಪುರ ರಿಂಗ್ ರೋಡ್ ಸರ್ಕಲ್ ಮೈಸೂರು-570008

HOUSE FOR SALE (NEW)
MUDA - 20x30- East Face GF and 1st Floor - 2BHK 2nd Floor-Room/ Kitchen/ Bath - 2Nos. Vasanthnagar. Price : 78 Lakhs (Direct Owner)
8197428432 9880626303

SITE FOR SALE
30 X 40 East Facing Site For Sale In KBL Wood Rose Next to Shantaveri Gopalagowda Nagara
For more Details Call 98800 65122 / 76193 99919

7-5-2025, 2-6-2025 ರಿಂದ 17 ದಿನಗಳು. ಪುರಿ ಜಗನ್ನಾಥ್, ಕೊನಾರ್ಕ್, ಭುವನೇಶ್ವರ್, ಕಾಶಿ, ಗಯಾ, ಪ್ರಯಾಗ್‌ರಾಜ್, ಅಯೋಧ್ಯೆ, ನೇಪಾಳ, ಮುಕ್ತನಾಥ. 7-5-2025 ರಿಂದ 14 ದಿನಗಳು ದೆಹಲಿ, ಹರಿದ್ವಾರ್, ಯಮುನೋತ್ರಿ, ಗಂಗೋತ್ರಿ, ಬದರಿನಾಥ್, ಕೇದಾರ್‌ನಾಥ್. 28-6-2025 ರಿಂದ 13 ದಿನಗಳು. ದೆಹಲಿ ಕುರುಕ್ಷೇತ್ರ, ವೈಷ್ಣೋದೇವಿ, ಗುಲ್‌ಮಾರ್ಗ್, ಕಾಶ್ಮೀರ್, ಅಮರನಾಥ್, ಅಮೃತ್‌ಸರ್, ವಾಘ ಬಾರ್ಡರ್. ಸಂಪರ್ಕಿಸಿ: ಏಷ್ಯನ್ ಟೂರ್ಸ್ ಅಂಡ್ ಟ್ರಾವೆಲ್ಸ್, ಬೆಂಗಳೂರು–70
9342287551, 9482239855

HOME LOANS
CORPORATION, MUDA, KHB GRAMATHANA PROPERTY
Site Purchase, Site Construction
House Purchase
Site Mortgage, house Mortgage
Contact: 9108416410

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ: 7406375196, 9880548596

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315

WANTED
SERVICE ENGINEER FOR HOME APPLIANCES AUTHORISED SERVICE CENTER.
ITI HOLDER ELECTRICAL
OFFICE BACK END WORK FEMALE
CALL 9900237315

ಉಚಿತ ಸಾಮೂಹಿಕ ವಿವಾಹ
ಮೊದಲು ಬಂದ ಸೀಮಿತ ಜೋಡಿಗಳಿಗೆ ಅವಕಾಶ ನಂಜನಗೂಡು ತಾಲ್ಲೂಕಿನವರಿಗೆ ಮಾತ್ರ
8792306996

ಸುವರ್ಣಾವಕಾಶ
ಪ್ರಸಿದ್ಧ ಶೋರೂಮ್ ಮತ್ತು ಕಂಪನಿ & ವರ್ಕ್ ಫ್ರಮ್ ಹೋಂ ಕೆಲಸಕ್ಕೆ ಯುವಕರು ಮತ್ತು ಯುವತಿಯರು, 22000/- salary. 100% ಗ್ಯಾರೆಂಟಿ ಕೆಲಸ.
9482369816, 9482360136

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

ಸಿಪಾಯಿ ಪ್ರಾಪರ್ಟೀಸ್
ಇಲವಾಲದ ಬಸ್ ನಿಲ್ದಾಣ ಹಿಂಭಾಗದಲ್ಲಿರುವಂತಹ ಬಸವಾಸಾಗರ ಬಡಾವಣೆಯಲ್ಲಿ 60 ಅಡಿ ರಸ್ತೆಯಲ್ಲಿ 40x60 ಅಳತೆಯ ಸೈಟುಗಳು ಮಾರಾಟಕ್ಕಿವೆ. N.H. 275 ಹೈವೇ ರಸ್ತೆಯ ಹತ್ತಿರ 40 ಅಡಿ ರಸ್ತೆಯಲ್ಲಿ 30x40 ಅಳತೆಯ ನಾರ್ತ್ ಫೇಸ್ ಸೈಟು ಮಾರಾಟಕ್ಕಿವೆ.
ನಂಜುಂಡಸ್ವಾಮಿ ಹೆಚ್.ಎಸ್., ಮಾಜಿ ಸೈನಿಕರು
9483862050, 7829779070

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಹೊಸ ಮನೆ ಮಾರಾಟಕ್ಕಿದೆ
ಇಲವಾಲದ ಬೈಪಾಸ್ ರಸ್ತೆಯಲ್ಲಿರುವ ಆಚಾರ್ಯ ವಿದ್ಯಾಕುಲ ಹಿಂಭಾಗ ನಿತ್ಯಾನಂದ ಸಾಗರ ಬಡಾವಣೆಯಲ್ಲಿ 40 ಅಡಿ ರಸ್ತೆಯಲ್ಲಿರುವಂತಹ 30x40 ಅಳತೆಯ ಈಸ್ಟ್ ಫೇಸ್ ಮನೆ ಬೋರ್‌ವೆಲ್ 3 ಬೆಡ್ ರೂಂ ಅಟ್ಯಾಚಡ್ ಬಾತ್ ರೂಂ, ಫುಲ್ ಫರ್ನಿಷಡ್ 2 ಅಂತಸ್ತಿನ ಹೊಸ ಮನೆ ಮಾರಾಟಕ್ಕಿದೆ.
ನಂಜುಂಡಸ್ವಾಮಿ ಹೆಚ್.ಎಸ್. (ಮಾಜಿ ಸೈನಿಕರು)
9483862050, 7829779070

100% TEAK WOOD
FACTORY FINISH DOORS & FRAMES @ FACTORY DEPOT RATES
10 YEARS WARRANTY* ISI
9845426862 9901291267

MUDA Approved Layout
30x40 South East Corner
40x40 South East Corner
Next to LBS Nagara Behind Chamundi hill
Call: 9538583377

PRAKRUTHI PROPERTIES
FOR SALE
40x60 Commercial Site @ Ramakrishna Ngr& Srirampura
30x45 Commercial Property @ Jayanagar
20x30,25x35 House @Giridharshni lyt Srirampura
40x60 Shardha Lyt (JP Nagar)
30x40, 40x60 Duplex House Near Hari Vidyalaya Bogadi
Sites also available Near RT Nagar, Bogadi in & around Mysore
95386 90359, 90359 90359

Rent, Lease, Sale
3 BHK duplex independent with car garage rent 45K, 2 BHK independent rent House W/F, Saraswathipuram. Sale R.K. Nagar Duplex 2 house 40x60 N/F condition good. 2.50 Cr.
Mob: 9900794922

SBIT TRAVELS
Group Tours
Grand Wonders of Europe - 14N15D
May 01,06,13,15,22,31| June 03,07,14,28| July 06,24,30
Best of Europe-12N13D
May- 01,05,08,12,19,24,26| June- 02,05,09,12,18,25,30| July- 08, 14,19, 26
97425 82345 (Saraswathipuram, Mysuru)

SITE FOR SALE
30x40, 30x50 Srirampura Ring Road, Srinagar Backside Mysuru
8050345574

FOR RENT SHOP / OFFICE
210 Square Feet Ground Floor Thyagaraj Main Road, Nearby 101 Ganapati Temple
8453459670

ಬೇಕಾಗಿದ್ದಾರೆ
ಸೂಪರ್‌ವೈಸರ್ ಹೆಲ್ಪರ್ ಮತ್ತು ಕ್ಯಾಶಿಯರ್ ನಜರ್‌ಬಾದ್‌ನ ಭಾರತ ಪೆಟ್ರೋಲಿಯಂ ನಾಗಸರೋಜ್ ಫ್ಯೂಯಲ್ ಬಂಕ್‌ನಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ಉತ್ತಮ ಸಂಬಳ ಹಾಗೂ ಊಟದ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ:
9019230313

ಬೇಕಾಗಿದ್ದಾರೆ
ಹೋಟೆಲ್‌ವೊಂದಕ್ಕೆ ಕಿಚನ್ ವರ್ಕರ್ಸ್ & ಸಪ್ಲೆಯರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ
9986669892 6362610799

ಪ್ರತಿಷ್ಠಿತ ಚಾಟ್ಸ್ ಸೆಂಟರ್‌ಗೆ ಕೆಲಸಕ್ಕೆ ಬೇಕಾಗಿದ್ದಾರೆ ಕುವೆಂಪುನಗರ ಮೈಸೂರು. ಆಕರ್ಷಕ ಸಂಬಳದೊಂದಿಗೆ
8095336064

ಕೇರಳ ಕೊಳ್ಳೇಗಾಲದ ಜ್ಯೋತಿಷ್ಯರು ಪಂಡಿತ್ ಶ್ರೀ ಎಸ್. ರಾಜು
ಮೊ: 99022 39655
ಇವರು ಕೇರಳದ ಮಡಯಿಕಾವು ಶ್ರೀರಾಜರಾಜೇಶ್ವರಿ, ಭದ್ರಕಾಳಿ ಶ್ರೀ ಭಗವತಿ, ಶಕ್ತಿಯಿಂದ, ಅಕಪೂಜಾ, ಗುರುಸಿ, ಕರಿಂಕಳಸ, ತವಪಲಿದೀಪಾ ರಕ್ತ ಪುಷ್ಪಾಂಜಲಿ ಮತ್ತು ಕೊಳ್ಳೇಗಾಲದ ಚೌಡಿ, ಭೂತರಾಯ, ಆಗೋಚರ, ಕಾಟೇರಿ, ಪ್ರಯೋಗದಿಂದ ಸ್ತ್ರೀ–ಪುರುಷ ಪ್ರೇಮ, ದಾಂಪತ್ಯ, ಸಮಸ್ಯೆ, ವ್ಯಾಪಾರ, ಸಂತಾನ, ಮದುವೆ, ಸಾಲಬಾಧೆ, ಶತ್ರುಸಂಹಾರ, ವಿದೇಶ ಪ್ರಯಾಣ, ರಾಜಕೀಯ ಇನ್ನೂ ಯಾವುದೇ ಗುಪ್ತಸಮಸ್ಯೆಗಳಿಗೆ ಮೇಲಿನ ಪೂಜಾ ಶಕ್ತಿಯಿಂದ 2 ದಿನದಲ್ಲಿ ಪರಿಹಾರ ಶತಸಿದ್ಧ.
ಕಾಯಂ ಮನೆಯ ವಿಳಾಸ: ರೂಂನಂ.9, 2ನೇ ಮಹಡಿ, KSRTC ಸಿಟಿ ಬಸ್ ಸ್ಟಾಂಡ್ ಬಿಲ್ಡಿಂಗ್, ಕೆ.ಆರ್.ಸರ್ಕಲ್, ಮೈಸೂರು

R ರಿಯಲ್ ಎಸ್ಟೇಟ್
ಸೈಟುಗಳು ಮಾರಾಟಕ್ಕಿದೆ 30x40 & 40x60
9538412881

ಕಳೆದಿದೆ
ಹಸೀನಾಬಾನು, ಲಾಲ್‌ಬಂದ್ ಬೀದಿ, ಹುಣಸೂರು ಟೌನ್ ಇಲ್ಲಿ ವಾಸವಿದ್ದು, ಇದೇ ಹುಣಸೂರು ಟೌನ್ ನಗರಸಭಾ ಖಾತೆ ನಂ. 843/34/ಬಿ ರಲ್ಲಿರುವ ನಾಡ ಹೆಂಚಿನ ಮನೆ ಸೇರಿದಂತೆ ಇರುವ ಖಾಲಿ ನಿವೇಶನದ ದಿ.05–03–2023ರ ನೊಂದಾಯಿತ ಕ್ರಯ ಪತ್ರದ ಮೂಲಕ ನೀಡಿದ್ದು, ಮೂಲ ದಾಖಲಾತಿಯಾದ ನೂರ್ ಜಹಾನ್ ರವರು ಅವರ ಮಗಳು ತಬುಸಮ್ ಬಾನು ರವರಿಗೆ ಬರೆದುಕೊಟ್ಟಿದ್ದ ಮೂಲ ದಾನಪತ್ರವು ಕಳೆದಿದ್ದು.
ಸಿಕ್ಕವರು ಸಂಪರ್ಕಿಸಿ 8197472491

SITE FOR SALE
40x60 E/F 60 feet Road Vishwa Pranga Layout Bogadi Road
8050821108

ಕೊಳ್ಳೇಗಾಲದ ಜ್ಯೋತಿಷ್ಯರು ಪಂ॥ ಎಸ್.ಕುಮಾರಸ್ವಾಮಿ (ಮೋಡಿ ಮಾಂತ್ರಿಕರು)
ಮೊ: 98805 83804
ಇವರು ಕೊಳ್ಳೇಗಾಲದ ಚೌಡಿ, ಭೂತರಾಯ, ಅಘೋಚರ ಕಾಟೇರಿ, ಶಕ್ತಿಯಿಂದ, ಸ್ತ್ರೀ–ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ತನ್ನವರೇ ತನಗೆ ಶತ್ರು, ಶತ್ರುನಾಶ, ಹಣಕಾಸಿನ ಸಮಸ್ಯೆ, ವ್ಯಾಪಾರ, ಶತ್ರುದೋಷ, ಕೌಂಟುಬಿಕ ಕಲಹ, ಕೋರ್ಟು, ಕಛೇರಿ, ಮಾನಸಿಕ ಚಿಂತೆ, ಅತ್ತೆ–ಸೊಸೆ, ಕಿರಿಕಿರಿ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ಮೋಡಿ ಮಾಂತ್ರಿಕ ಶಕ್ತಿಯಿಂದ ಚೌಡಿ, ಭೂತರಾಯನ ಪ್ರಯೋಗದಿಂದ 2 ದಿನದಲ್ಲಿ ಪರಿಹಾರ ಮಾಡಿಕೊಡುತ್ತಾರೆ.
ವಿಳಾಸ : ಮನೆ ನಂ.12, ದಿವಾನ್ ರೋಡ್, ಶ್ರೀ ಕೆ.ಎಸ್.ಶಿವಲಿಂಗಯ್ಯ ಸುಶ್ರುತ, (ಕಣ್ಣಿನ ಆಸ್ಪತ್ರೆ ಹತ್ತಿರ), ಮೈಸೂರು

WANTED
Duty Doctor, Ambulance Driver Security, House Keeping, CSSD Technician
BHANAVI HOSPITAL
9972982665

ಬೇಕಾಗಿದ್ದಾರೆ
College ಕ್ಯಾಂಟೀನ್‌ಗೆ ನುರಿತ ಅಡುಗೆ ಭಟ್ಟರು ಬೇಕಾಗಿದ್ದಾರೆ. ವಸತಿ ಸೌಲಭ್ಯ ಒದಗಿಸಲಾಗುವುದು. ಕೂಡಲೇ ಸಂಪರ್ಕಿಸಿ
8310481554 6362933519

ಅನುಬಂಧ ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರಸಂಪರ್ಕಿಸಿ ಫೋಟೋ, ಬಯೋಡೆಟಾ ಮತ್ತು ಜಾತಕವನ್ನು ವಾಟ್ಸಾಪ್ ಮಾಡಿ
6361740552 9449408551

ತೇಜಸ್ವಿನಿ ಟೂರಿಸ್ಟ್
20/4/25ರಿಂದ 10 ದಿನ ಶಿರಡಿ, ಮಂತ್ರಾಲಯ, 3 ಜೋತಿರ್ಲಿಂಗ, ಬಾಂಬೆ, ಗಾಣಗಾಪುರ ಇತ್ಯಾದಿ ಒಟ್ಟು 18 ಸ್ಥಳಗಳು. 28/5/25 ರಿಂದ 18 ದಿನ ರೈಲಿನಲ್ಲಿ 14 ದಿನ ವಿಮಾನದಲ್ಲಿ ಗುಜರಾತ ಮಧ್ಯಪ್ರದೇಶ, ರಾಜಸ್ಥಾನ ಒಟ್ಟು 16 ಸ್ಥಳಗಳು (4ಜೋತಿರ್ಲಿಂಗ) 10/5/25 ರಿಂದ 14 ದಿನಗಳು ಚಾರ್‌ಧಾಮ ಯಾತ್ರೆ (ವಿಮಾನದಲ್ಲಿ) ಮತ್ತು AC ರೈಲಿನಲ್ಲಿ 18 ದಿನಗಳು. ಸಂಪರ್ಕಿಸಿ:
9379792644

ಹೊಸ ಮನೆ ಮಾರಾಟಕ್ಕಿದೆ
ಟಿ.ನರಸೀಪುರ ರಸ್ತೆ (ವರಕೊಡು) A ಖಾತಾ ಅಳತೆ 30x32.5 ಬ್ಯಾಂಕ್ ಸಾಲ ಸೌಲಭ್ಯವಿದೆ. ಮಾಲೀಕರಿಂದ ನೇರ ಮಾರಾಟ
7411573145

ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ತಕ್ಷಣ ಬೇಕಾಗಿದ್ದಾರೆ
1) Ex. Service Man (CISF/BSF/ARMY/CRPF)
2) ಸೆಕ್ಯೂರಿಟಿ ಸೂಪರ್ ವೈಸರ್ (ತುಂಬಾ ಅನುಭವ ಹೊಂದಿರಬೇಕು.)
9242406261 9686422400

SITE FOR SALE
30x50 West Face VIDYASHANKARA Layout (Broker Excuse)
9945215789

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಏರಿಯಾ ಕಡಕೊಳ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC & ಮೇಲ್ಪಟ್ಟು ವಯೋಮಿತಿ : 50 ವರ್ಷದೊಳಗೆ ಸಂಬಳ: 18000, 8 hours, 26days ESI, PF ಊಟ, ತಿಂಡಿ ವಸತಿ ಸೌಲಭ್ಯವಿರುತ್ತದೆ.
9620777819 9620667819

ಸುವರ್ಣ ಯಾತ್ರ
9 ದಿನಗಳ ನೇಪಾಳ, ಅಯೋಧ್ಯ ಹಾಗೂ ಮುಕ್ತಿನಾಥ ಪ್ರವಾಸ 27–4–2025. 11 ದಿನಗಳ ಶಿಮ್ಲಾ, ಕುಲು ಹಾಗೂ ಮನಾಲಿ ಪ್ರವಾಸ 29–4–2025. 10 ದಿನಗಳು ಅಮರನಾಥ ಪ್ರವಾಸ 26–6–2025
9019462508 9008381022

ತೀರ್ಥಕ್ಷೇತ್ರ ಪ್ರವಾಸ 12 ದಿನಗಳು
ಕಾಶಿ, ಅಯೋಧ್ಯ, ಪ್ರಯಾಗರಾಜ್ ಶಿರಡಿ, ಮಂತ್ರಾಲಯ, ಶನಿಶಿಂಗಾಪುರ 3 ಜ್ಯೋತಿರ್ಲಿಂಗಗಳು ಒಟ್ಟು 19 ಸ್ಥಳ (ಕ್ಷೇತ್ರ)ಗಳು ಊಟ, ರೂಂ, ಸೌಲಭ್ಯವಿರುತ್ತದೆ, ಮೈಸೂರು
9739939411 9620202173

ಶ್ರೀಮೂರ್ತಿ ಟೂರಿಸ್ಟ್
20–4–25 (1ದಿನ) ಊಟಿ ಪ್ರವಾಸ
24–4–25 ರಿಂದ 4 ದಿನಗಳು ಹೊರನಾಡು ಶೃಂಗೇರಿ, ಕೊಲ್ಲೂರು, ಮುರುಡೇಶ್ವರ, ಗೋಕರ್ಣ, ಆನೆಗುಡ್ಡ, ಉಡುಪಿ, ಧರ್ಮಸ್ಥಳ, ಇತ್ಯಾದಿ
15–5–25 5ದಿನದ ರಾಮೇಶ್ವರ, ಮಧುರೈ, ಕನ್ಯಾಕುಮಾರಿ, ಇತ್ಯಾದಿ ಪ್ರವಾಸ
(Tickets to Your Door step)
9480733069

V-GUARD
10 ವರ್ಷಗಳ ವ್ಯಾರಂಟಿ
Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

ಮೈಸೂರು ಮಿತ್ರ 45

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವು ಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಮೈಸೂರು ಮಿತ್ರ

ಏ.9, ಶ್ರೀಕಂಠೇಶ್ವರಸ್ವಾಮಿ ಪಂಚ ಮಹಾರಥೋತ್ಸವ

●ಸಕಲ ಸಿದ್ಧತೆ ಪೂರ್ಣ ●ಭಕ್ತರ ಮೂಲ ಸೌಕರ್ಯಕ್ಕೆ ಆದ್ಯತೆ



ನಂಜನಗೂಡು, ಏ.6– ದಕ್ಷಿಣಕಾಶಿ ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ವೈಭವದ ಪಂಚ ಮಹಾರಥೋತ್ಸವ ಏ.9ರಂದು ನಡೆಯಲಿದ್ದು, ಇದಕ್ಕಾಗಿ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ.

ರಾಜ್ಯದ ವಿವಿಧ ಮೂಲೆಗಳಿಂದ ಬರುವ ಭಕ್ತರ ಅನುಕೂಲಕ್ಕಾಗಿ ಮೂಲಸೌಕರ್ಯ ಸೇರಿದಂತೆ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ತಾತ್ಕಾಲಿಕ ಆರೋಗ್ಯ ತಪಾಸಣಾ ಕೇಂದ್ರ ತೆರೆಯಲಾಗಿದೆ. ದೇವಾಲಯದ ಆಸುಪಾಸಿನಲ್ಲಿ ಮತ್ತು ಕಪಿಲಾ ನದಿ ದಡದಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಗಿದೆ. ಸಾರಿಗೆ ಸಂಸ್ಥೆಯಿಂದ ಹೆಚ್ಚುವರಿ ವಿಶೇಷ ಬಸ್ ಸೌಲಭ್ಯ ಕಲ್ಪಿಸಲಾಗಿದೆ. ಅಲ್ಲದೆ ಹೆಚ್ಚುವರಿ ರೈಲು ಮತ್ತು ರೈಲುಗಳಲ್ಲಿ ಹೆಚ್ಚುವರಿ ಭೋಗಿ ಅಳವಡಿಸುವಂತೆ ರೈಲ್ವೆ ಇಲಾಖೆಗೆ ಪತ್ರ ಬರೆಯಲಾಗಿದೆ.

ಪೊಲೀಸರ ಕಣ್ಗಾವಲು: ಭಕ್ತರ ಸುರಕ್ಷತೆಯ ದೃಷ್ಟಿಯಿಂದ ನಗರದ ಆಯಕಟ್ಟಿನ ಸ್ಥಳಗಳಲ್ಲಿ ವಾಚ್ ಟವರ್‌ಗಳ ನಿರ್ಮಾಣ, ಸಿಸಿ ಕ್ಯಾಮೆರಾಗಳ ಅಳವಡಿಕೆ ಮಾಡಲಾಗಿದೆ. ಜೊತೆಗೆ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಲಾಗಿದೆ. ನಗರದ ಪ್ರಮುಖ ಸ್ಥಳಗಳಲ್ಲಿ ಹೊರಗಿನಿಂದ ಬರುವ ಭಕ್ತರಿಗೆ ಮಾಹಿತಿ ನೀಡುವ ಸಲುವಾಗಿ ಮಾಹಿತಿ ಕೇಂದ್ರ ತೆರೆಯಲಾಗಿದೆ.

ವಿದ್ಯುತ್ ದೀಪದ ಅಲಂಕಾರ: ಜಾತ್ರಾ ಮಹೋತ್ಸವದ ಅಂಗವಾಗಿ ದೇವಾಲಯದ ಆವರಣದ ಸುತ್ತ ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಸಿಂಗರಿಸಲಾಗಿದೆ. ಅಲ್ಲದೆ ನಗರದ ಪ್ರಮುಖ ಬೀದಿಗಳಲ್ಲಿ ಹಾಗೂ ಕಟ್ಟಡಗಳಲ್ಲಿ ವಿದ್ಯುತ್ ದೀಪಗಳಿಂದ ಅಲಂಕೃತಗೊಳಿಸಲಾಗಿದೆ.

ಪ್ರಸಾದ ವಿತರಣೆ ಬಗ್ಗೆ ಕಟ್ಟೆಚ್ಚರ: ಸಾಂಕ್ರಾಮಿಕ ರೋಗ ಹರಡುವ ಭೀತಿ ಹಿನ್ನಲೆಯಲ್ಲಿ ಜಿಲ್ಲಾಡಳಿತ ಎಚ್ಚರಿಕೆ ವಹಿಸಿದ್ದು ಜಾತ್ರಾ ಮಹೋತ್ಸವದಂದು ವಿವಿಧ ಸಂಘ ಸಂಸ್ಥೆಗಳು ನೀಡುವ ಪ್ರಸಾದ ವಿತರಣೆ ಆರೋಗ್ಯ ಇಲಾಖೆಯಿಂದ ಅನುಮತಿ ಪಡೆಯುವುದು ಕಡ್ಡಾಯವಾಗಿದೆ.

5 ರಥಗಳು ಒಮ್ಮೆಲೇ ಸಂಚಾರ: ಇಡೀ ದಕ್ಷಿಣ ಭಾರತದಲ್ಲೇ ಒಂದೇ ಬಾರಿಗೆ 5 ರಥಗಳನ್ನು ಏಕ ಕಾಲದಲ್ಲಿ ಎಳೆಯುವ ಏಕೈಕ ಕ್ಷೇತ್ರವೆಂದು ನಂಜನಗೂಡು ನಂಜುಂಡೇಶ್ವರನ ದೊಡ್ಡ ಜಾತ್ರೆ ಪ್ರಸಿದ್ಧಿಯಾಗಿದೆ. ಮೊದಲು ಗಣಪತಿ, ಪಾರ್ವತಿ ಸಮೇತ ಶ್ರೀಕಂಠೇಶ್ವರ, ಪಾರ್ವತಿ, ಸುಬ್ರಮಣ್ಯಸ್ವಾಮಿ, ಚಂಡಿ ಕೇಶ್ವರಸ್ವಾಮಿ ರಥಗಳು ರಥ ಬೀದಿಯಲ್ಲಿ ಚಲಿಸಲಿವೆ.

ಶ್ರೀಗೌತಮ ಮಹಾರಥ 92 ಅಡಿ ಎತ್ತರ, 250 ಟನ್ ತೂಕವಿದ್ದು ಜಾತ್ರೆಯ ಪ್ರಮುಖ ಆಕರ್ಷಣೆಯಾಗಿದೆ. ಈಗಾಗಲೇ ರಥೋತ್ಸವ ಅಂಗವಾಗಿ ಸಕಲ ಸಿದ್ಧತೆ ಕೈಗೊಳ್ಳಲಾಗಿದ್ದು, ರಥಗಳ ಚಕ್ರ ಸರಿಪಡಿಸಿ ಹೊಸ ಹಗ್ಗ ಕಟ್ಟುವ ಕಾರ್ಯ ಪ್ರಗತಿಯಲ್ಲಿದೆ. ಅಲ್ಲದೇ ಬಣ್ಣ ಬಣ್ಣದ ಬಾವುಟಗಳನ್ನು ಕಟ್ಟಿ, ರಥವನ್ನು ವಿಶೇಷವಾಗಿ ಕಂಗೊಳಿಸುವಂತೆ ಮಾಡುವ ಸಲುವಾಗಿ ಕಾರ್ಮಿಕರು ಕಳೆದ ಹಲವು ದಿನಗಳಿಂದ ಸಿದ್ಧತೆ ನಡೆಸಿದ್ದಾರೆ. ಅಲ್ಲದೆ ಪಾರ್ವತಿ ರಥ, ಗಣಪತಿ, ಸುಬ್ರಮಣ್ಯೇಶ್ವರ, ಚಂಡಿಕೇಶ್ವರ ರಥಗಳನ್ನು ಸಿದ್ಧಪಡಿಸಲಾಗುತ್ತಿದೆ. ದೇವಾಲಯದ ಸುತ್ತಲೂ ತಳಿರು ತೋರಣಗಳನ್ನು ಕಟ್ಟುವ ಮೂಲಕ ಜಾತ್ರೆಗೆ ಸಿದ್ಧತೆ ನಡೆಸಲಾಗಿದೆ.

ವಿವಿಧ ಧಾರ್ಮಿಕ ಕಾರ್ಯಕ್ರಮ

ಜಾತ್ರಾ ಮಹೋತ್ಸವ ಅಂಗವಾಗಿ ಈಗಾಗಲೇ ದೇವಾಲಯದಲ್ಲಿ ಏ.2 ರಿಂದಲೇ ವಿವಿಧ ರೀತಿಯ ಧಾರ್ಮಿಕ ಕೈಂಕರ್ಯ ಆರಂಭವಾಗಿದೆ. ಏ.9 ರಂದು ಮುಂಜಾ ನೆಯಿಂದಲೇ ಪೂಜಾ ಕಾರ್ಯಗಳು ನಡೆಯಲಿದ್ದು, ಉದಯಾತ್ಪೂರ್ವ 5 ರಿಂದ 5.40 ರೊಳಗೆ ಸಲ್ಲುವ ಶುಭ ಮೀನ ಲಗ್ನದಲ್ಲಿ ಶ್ರೀಮನ್ಮಹಾಗೌತಮ ರಥಾರೋಹಣ ಜರುಗಲಿದೆ. ಅಂದು ಸಂಜೆ ಹಂಸಾರೋಹಣ ನಂತರ ನಟೇಶೋತ್ಸವ, ಏ.10ರಂದು ಮೃಗಯಾತ್ರಾಪೂರ್ವಕ ಅಶ್ವಾರೋಹಣ ನಂತರ ಮಹಾಭೂತಾರೋಹಣೋತ್ಸವ, ದೇವಿ ಪ್ರಾಯಕಲಹ ಸಂಧಾನೋತ್ಸವ, ಏ.11 ರಂದು ಚೂರ್ಣೋತ್ಸವ ಅವಭೃತ ತೀರ್ಥಸ್ನಾನ, ರಾತ್ರಿ 7 ಗಂಟೆಗೆ ತೆಪ್ಪೋತ್ಸವ, ನಂತರ ನರಾಂಧೂಳಿಕಾರೋಹಣೋತ್ಸವ, ಧ್ವಜಾವರೋಹಣ, ಏ.12ರಂದು ಪೌರ್ಣಿಮೆ ಅಂಗವಾಗಿ ಪುಷ್ಪಯಾಗ ಪೂರ್ವಕ ಪಂಚೋಪರಾಪೂರ್ವಕ ಕೈಲಾಸಯಾನಾರೋಹಣೋತ್ಸವ, ಏ.13 ರಂದು ಮಹಾಸಂಪ್ರೋಕ್ಷಣೆ ಪೂರ್ವಕ ನಂದಿವಾಹನೋತ್ಸವ, ಶಯನೋತ್ಸವದೊಂದಿಗೆ ಜಾತ್ರಾ ಮಹೋತ್ಸವಕ್ಕೆ ತೆರೆ ಬೀಳಲಿದೆ.

ಚುಂಚನಕಟ್ಟೆಯಲ್ಲಿ ವಿಜೃಂಭಣೆಯ ಶ್ರೀ ರಾಮನವಮಿ



ಚುಂಚನಕಟ್ಟೆಯಲ್ಲಿ ಶ್ರೀರಾಮದೇವರ ಮೆರವಣಿಗೆ ನಡೆಯಿತು.

ಚುಂಚನಕಟ್ಟೆ, ಏ.6– ಸಾಲಿಗ್ರಾಮ ತಾಲೂಕಿನ ಇತಿಹಾಸ ಪ್ರಸಿದ್ಧ ಚುಂಚನಕಟ್ಟೆಯಲ್ಲಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಶ್ರೀರಾಮ ನವಮಿಯನ್ನು ವಿಜೃಂಭಣೆಯಿಂದ ನಡೆಯಿತು.

ಶ್ರೀರಾಮ ನವಮಿ ಪ್ರಯುಕ್ತ ಇಲ್ಲಿನ ಶ್ರೀರಾಮ ದೇವಾಲಯದಲ್ಲಿ ಭಾನುವಾರ ಮುಂಜಾನೆಯಿಂದಲೇ ದೇವರಿಗೆ ಎಳನೀರು, ಅರಿಶಿನ, ಕುಂಕುಮ, ಹಾಲು, ಮೊಸರು ಮತ್ತು ಕಾವೇರಿ ನೀರಿನಿಂದ ಮಂತ್ರ ಘೋಷಗಳೊಂದಿಗೆ ಅಭಿಷೇಕ ಮಾಡಲಾಯಿತು. ನಂತರ ಶ್ರೀರಾಮ ದೇವರ ಉತ್ಸವ ಮೂರ್ತಿಯನ್ನು ಮೆರವಣಿಗೆ ಮಾಡಿದ ಬಳಿಕ ಮಹಾಮಂಗಳಾರತಿ ನೆರವೇರಿಸಿ ತೀರ್ಥ ಪ್ರಸಾದ ವಿನಿಯೋಗ ಮಾಡಲಾಯಿತು. ಅಲ್ಲದೇ ದೇವಾಲಯಕ್ಕೆ ಆಗಮಿಸಿದ್ದ ಭಕ್ತರು ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿ ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು.

ಪೂಜಾ ಕಾರ್ಯವನ್ನು ಅರ್ಚಕರಾದ ನಾರಾಯಣ ಅಯ್ಯಂಗಾರ್, ವಾಸುದೇವ್ ನಡೆಸಿಕೊಟ್ಟರು. ಭಕ್ತರಿಗೆ ದೇವಾಲಯದ ಆಡಳಿತಾಧಿಕಾರಿ ರಘು ಅವರ ನೇತೃತ್ವದಲ್ಲಿ ಪಾನಕ, ಪ್ರಸಾದ ವಿತರಣೆ ಮಾಡಲಾಯಿತು. ಈ ವೇಳೆ ಶಾಸಕ ಡಿ.ರವಿಶಂಕರ್, ದೊಡ್ಡಸ್ವಾಮಿಗೌಡ, ತಹಸೀಲ್ದಾರ್ ನರಗುಂದ, ಉಪತಹಸೀಲ್ದಾರ್ ಸಣ್ಣರಾಮಪ್ಪ, ಶರತ್ ಕುಮಾರ್ ದೇವಾಲಯಕ್ಕೆ ಭೇಟಿ ನೀಡಿ ಶ್ರೀರಾಮನ ದರ್ಶನ ಪಡೆದು ಪೂಜೆ ಸಲ್ಲಿಸಿದರು. ಪಾರುಪತ್ತೇದಾರ್ ಯತೀರಾಜ್, ಪವನ್, ಪೊಲೀಸ್ ಅಧಿಕಾರಿ ದೊರೆಸ್ವಾಮಿ, ಅವಿನಾಶ್, ದಯಾನಂದ್, ದೇವಾಲಯದ ಸಿಬ್ಬಂದಿಗಳಾದ ಹರೀಶ, ಅನಂತ್, ಚಂದ್ರ ನಾಯಕ್, ಶಿವಣ್ಣ, ತಿಮ್ಮಣ್ಣ ಮತ್ತಿತರರಿದ್ದರು.

ಸಂವಿಧಾನ ಜಾರಿಯಾಗಿ ದಶಕಗಳೇ ಕಳೆದರೂ

ಸಮಾನತೆ ಸಾಧಿಸಲು ಸಾಧ್ಯವಾಗಿಲ್ಲ: ಶಾಸಕ ಅನಿಲ್



ಕಾರ್ಯಕ್ರಮವನ್ನು ನಿಜಗುಣಾನಂದ ಪ್ರಭು ಸ್ವಾಮೀಜಿ ಉದ್ಘಾಟಿಸಿದರು.

ಸರಗೂರು, ಏ.6– ಸಂವಿಧಾನ ಜಾರಿಯಾಗಿ ದಶಕಗಳೇ ಕಳೆದು ವಿಜ್ಞಾನ, ತಂತ್ರ ಜ್ಞಾನ ನಾಗಾಲೋಟದಲ್ಲಿ ಬೆಳವಣಿಗೆಯಾಗುತ್ತಿದ್ದರೂ ಇನ್ನೂ ಸಮಾನತೆ ಸಾಧಿಸಲು ಸಾಧ್ಯವಾಗಿಲ್ಲಎಂದು ಶಾಸಕ ಅನಿಲ್ ವಿಷಾಧಿಸಿದರು.

ತಾಲೂಕಿನ ದೇವಲಾಪುರದಲ್ಲಿ ನಡೆದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಭಾರತಕ್ಕಾಗಿ ವಿಶ್ವವೇ ಮೆಚ್ಚುವಂತಹ ಸಂವಿಧಾನವನ್ನು ಅಂಬೇಡ್ಕರ್ ಬರೆದು ಕೊಟ್ಟರು. ಆದರೆ, ಸಂವಿಧಾನದ ಆಶಯಗಳಿಗೆ ತಕ್ಕಂತೆ ಬದುಕುತ್ತಿದ್ದೇವೆಯೇ ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಏನೇನು ಸಮಸ್ಯೆಗಳಿದ್ದವು, ಸ್ವಾತಂತ್ರ್ಯ ಬಂದ ಮೇಲೆ ದೇಶ ಯಾವ ರೀತಿ ಇರಬೇಕು ಎಂಬ ವಿಚಾರದ ಕಲ್ಪನೆ ಇಟ್ಟುಕೊಂಡಂತಹ ಮಹಾನ್ ವ್ಯಕ್ತಿ ಅಂಬೇಡ್ಕರ್. ಕೇವಲ ದಲಿತರ ಬಗ್ಗೆ ಯೋಚನೆ ಮಾಡದೇ, ಸಮಾಜದ ಏಳಿಗೆಗೆ ಜೊತೆಯಾಗಿ ಎಲ್ಲರನ್ನೂ ಒಟ್ಟಿಗೆ ಕೊಂಡೊಯ್ಯುವ ಯೋಚನೆ ಮಾಡಿದವರು ಎಂದು ತಿಳಿಸಿದರು.

ಸಂಸದ ಸುನಿಲ್ ಬೋಸ್ ಮಾತನಾಡಿ, ಸಂವಿಧಾನ ಎಲ್ಲರಿಗೂ ರಕ್ಷಣೆ ನೀಡಿದೆ. ಬುದ್ಧ, ಬಸವ, ಅಂಬೇಡ್ಕರ್ ಚಿಂತನೆಗಳು ಸಮಾಜದ ಮೇಲೆ ಬಹು ದೊಡ್ಡ ಪರಿಣಾಮ ಬೀರಿವೆ. 70ರ ದಶಕದಲ್ಲಿ ಸಾಮಾಜಿಕ ನ್ಯಾಯ, ನೊಂದವರ ಎಲ್ಲಾ ಜಾತಿಯ ಬಡವರ ಪರವಾಗಿ ದಲಿತ ಚಳವಳಿ ನಡೆಯಿತು. ಪ್ರತಿಯೊಂದು ಕಾರ್ಯಕ್ರಮಗಳಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಎಲ್ಲಾ ಸಮಾಜದ ಸಾಧಕರನ್ನು ಸನ್ಮಾನಿಸುವುದು ಶ್ಲಾಘನೀಯ ಎಂದರು.

ಶಾಸಕ ದರ್ಶನ್ ಮಾತನಾಡಿ, ಅಂಬೇಡ್ಕರ್ ಅವರ ಆದರ್ಶ, ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡರೆ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಬೈಲಾರ ಮುಂಡರಗಿ ಮತ್ತು ನಿಷ್ಕಲ ಮಂಟಪ ತೋಂಟದಾರ್ಯ ಮಠದ ನಿಜಗುಣಾನಂದ ಪ್ರಭು ಸ್ವಾಮೀಜಿ, ದಸಂಸ ಜಿಲ್ಲಾ ಸಂಚಾಲಯ ಬೆಟ್ಟಯ್ಯ ಮಾತನಾಡಿದರು. ಇದೇ ವೇಳೆ ಅಂಬೇಡ್ಕರ್ ಪ್ರತಿಮೆ ದಾನಿ ಎಸಿಪಿ ರಾಜಣ್ಣ, ಪ್ರತಿಮೆ ಸ್ಥಾಪನೆಗೆ ನಿವೇಶನ ನೀಡಿದ ರಮೇಶ್, ಪೊಲೀಸ್ ಆನಂದ್ ಸೇರಿದಂತೆ ಇತರರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಮೋಹನಕುಮಾರಿ, ಇಓ ಪ್ರೇಮ್ ಕುಮಾರ್, ಜಿಪಂ ಮಾಜಿ ಸದಸ್ಯರಾದ ವೆಂಕಟಸ್ವಾಮಿ, ಪಿ.ರವಿ, ಭಾಗ್ಯಲಕ್ಷ್ಮಿ, ಹೆಚ್.ಸಿ.ಮಂಜುನಾಥ್, ಡಿ.ಪಿ.ನಟರಾಜು, ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಕೋಟೆ ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ನರಸಿಂಹ ಮೂರ್ತಿ, ಆದಿಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ಮೈಮುಲ್ ನಿರ್ದೇಶಕ ಈರೇಗೌಡ, ಬುದ್ದ ಧಮ್ಮ ಸಮಿತಿ ಅಧ್ಯಕ್ಷ ಶಿವರಾಜು, ಸೋಮೇಶ್, ಮಲ್ಲೇಶ್, ಪರಶಿವಮೂರ್ತಿ, ಚಿಕ್ಕಣ್ಣ, ಡಾ.ಮರಿದೇವಯ್ಯ, ಹೆಗ್ಗನೂರು ಗ್ರಾಪಂ ಅಧ್ಯಕ್ಷ ಮುತ್ತುರಾಜ್, ಸದಸ್ಯರಾದ ಶಿವಶಂಕರ್, ನಾಗೇಂದ್ರ ನಿಂಗರಾಜು, ಶಂಭೇಗೌಡ, ಬಸವರಾಜು, ಮಾರಯ್ಯ, ಯಜಮಾನರಾದ ಶಿವಣ್ಣ, ಮುಖಂಡರಾದ ದೊಡ್ಡಪ್ಪಾಜಿ, ಪ್ರಭಾಕರ್, ಮಹೇಶ್, ಶಿವು ಇನ್ನಿತರರಿದ್ದರು.

ನೊಂದವರ ಸಂಕಷ್ಟಗಳಿಗೆ ಸ್ಪಂದಿಸಿ ಸೇವೆ ಸಲ್ಲಿಸಿದರೆ

ಆರೋಗ್ಯಪೂರ್ಣ ಸಮಾಜ ನಿರ್ಮಾಣ ಸಾಧ್ಯ

ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್



ಕಾರ್ಯಕ್ರಮದಲ್ಲಿ ನಿವೃತ್ತ ಪಿಡಿಓ ಕೆಂಚೇಗೌಡರನ್ನು ಸನ್ಮಾನಿಸಲಾಯಿತು.

ಹುಣಸೂರು, ಏ.6– ಯಾವುದೇ ಅಧಿಕಾರಿ ಅಥವಾ ನೌಕರ ತನ್ನ ವೃತ್ತಿಪರತೆಗೆ ಪೂರಕವಾಗಿ ಸಮಾಜಮುಖಿ ಆಲೋಚನೆ ಹಾಗೂ ನೊಂದವರ ಸಂಕಷ್ಟಗಳಿಗೆ ಸ್ಪಂದಿಸಿ ಸೇವೆ ಸಲ್ಲಿಸಿದರೆ ಆರೋಗ್ಯಪೂರ್ಣ ಸಮಾಜ ನಿರ್ಮಾಣ ಸಾಧ್ಯ ಎಂದು ವಿಧಾನ ಪರಿಷತ್ ಸದಸ್ಯ ಎ.ಹೆಚ್.ವಿಶ್ವನಾಥ್ ತಿಳಿಸಿದರು.

ನಗರದ ಕನಕ ಭವನದಲ್ಲಿ ಕನಕ ನೌಕರರ ಸಂಘ ಆಯೋಜಿಸಿದ್ದ ಸಮಾರಂಭದಲ್ಲಿ ಸೇವಾ ನಿವೃತ್ತಿ ಹೊಂದಿದ ಪಿಡಿಓ ಕೆಂಚೇಗೌಡರನ್ನು ಸನ್ಮಾನಿಸಿ ಬೀಳ್ಕೊಟ್ಟು ಮಾತನಾಡಿದ ಅವರು, ವ್ಯಕ್ತಿ ಜೀವನದಲ್ಲಿ ಸಾರ್ಥಕತೆ ಪಡೆಯುವುದು ಅವನು ಗಳಿಸಿದ ಭೌತಿಕ ಸಂಪತ್ತು ಅಥವಾ ನಗನಾಣ್ಯಗಳಿಂದಲ್ಲ. ಆದರೆ ಸಮಾಜಮುಖಿ ಮನೋಧೋರಣೆ, ಸೌಜನ್ಯದ ಪ್ರತೀಕವಾದ ನಡವಳಿಕೆ, ಅನ್ಯರ ಭಾವನೆಗಳಿಗೆ ಸ್ಪಂದಿಸುವ ಔದಾರ್ಯ ಮುಂತಾದ ಮೌಲ್ಯಗಳನ್ನು ಅಳವಡಿಸಿಕೊಂಡಿರುವ ಪಿಡಿಓ ಕೆಂಚೇಗೌಡರು ಸರಳ, ಸಜ್ಜನ ಹಾಗೂ ಶಿಸ್ತಿನ ವ್ಯಕ್ತಿಯಾಗಿದ್ದು, ಇವರು ತಮ್ಮ ಸೇವಾವಧಿಯಲ್ಲಿ ನೀಡಿದ ಸೇವೆ ಅನನ್ಯವಾಗಿದ್ದು, ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಶುಭ ಹಾರೈಸಿದರು.

ಶಾಸಕ ಜಿ.ಡಿ.ಹರೀಶ್‌ಗೌಡ ಮಾತನಾಡಿ, ಕೆಂಚೇಗೌಡರಲ್ಲಿ ಸರಳತೆ, ಸೂಕ್ಷ್ಮತೆ ಎಲ್ಲಾ ಗುಣಗಳೂ ಅವರಲ್ಲಿದ್ದು, ತಮ್ಮನ್ನು ತಾವು ಹುರಿದುಂಬಿಸಿಕೊಂಡು ಬೇರೆಯವರನ್ನು ಪ್ರೇರೇಪಿಸುವ ಸರಳ ವ್ಯಕ್ತಿತ್ವದವರು ಎಂದರು.

ತಹಸೀಲ್ದಾರ್ ಜೆ.ಮಂಜುನಾಥ್ ಮಾತನಾಡಿ, ಕೆಂಚೇಗೌಡರಲ್ಲಿ ಅಧಿಕಾರದ ಅಹಂ ಇರಲಿಲ್ಲ. ಸರಳ, ಸಜ್ಜನ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿದರು. ಅಲ್ಲದೇ ಕನಕ ನೌಕರರ ಸಂಘದ ಅಧ್ಯಕ್ಷರಾಗಿ ಸುದೀರ್ಘ ಸೇವೆ ಸಲ್ಲಿಸಿ ಸಂಘಕ್ಕೆ ಹಾಗೂ ಸಮಾಜಕ್ಕೆ ಉತ್ತಮ ಕಾರ್ಯಗಳನ್ನು ಮಾಡಿರುವ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ನಿವೃತ್ತ ಪಿಡಿಓ ಕೆಂಚೇಗೌಡ, 38 ವರ್ಷಗಳ ಹಿಂದೆ ಧರ್ಮಾಪುರ ಗ್ರಾಪಂನಲ್ಲಿ ಸೇವೆಗೆ ಸೇರಿ ಇಲಾಖೆಯಲ್ಲಿ ಪ್ರಾಮಾಣಿಕವಾಗಿ ಸೇವೆ ಮಾಡಿದ ಆತ್ಮ ಸಂತೃಪ್ತಿ ಇದೆ. ಕೆಲವೊಮ್ಮೆ ಕೆಲ ಕಷ್ಟಕರ ಸವಾಲುಗಳನ್ನು ಸ್ವೀಕರಿಸಿ ಉತ್ತಮ ಕಾರ್ಯನಿರ್ವಹಿಸಿರುತ್ತೇನೆ. ಅಲ್ಲದೆ ಕೋವಿಡ್‌ನಂಥ ಅವಧಿಯಲ್ಲಿಯೂ ಎದೆಗುಂದದೇ ಕಾರ್ಯ ನಿರ್ವಹಿಸಿದ ಆತ್ಮ ಸಂತೋಷ ನನಗಿದೆ ಎಂದರು.

ಸಂದೇಶ ಪತ್ರ; ಸಮಾರಂಭಕ್ಕೆ ಗೈರಾಗಿದ್ದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಪತ್ರದ ಮೂಲಕ ಸೇವಾ ನಿವೃತ್ತಿ ಹೊಂದಿದ ಪಿಡಿಓ ಕೆಂಚೇಗೌಡರಿಗೆ ಶುಭ ಸಂದೇಶ ಕಳುಹಿಸಿದ್ದರು. ಶಿಕ್ಷಕ ಜೆ.ಮಹದೇವ್ ಸಭೆಯಲ್ಲಿ ಸಂದೇಶ ಓದಿದರು.

ಈ ವೇಳೆ ಕನಕ ನೌಕರರ ಸಂಘದಿಂದ ಚುನಾಯಿತ ಜನಪ್ರತಿನಿಧಿಗಳು, ಸರ್ಕಾರದ ನಾಮನಿರ್ದೇಶನ ಸದಸ್ಯರಿಗೆ ಸನ್ಮಾನ ಹಾಗೂ ವಿವಿಧ ಇಲಾಖೆಯಲ್ಲಿ ಸೇವಾ ನಿವೃತ್ತಿ ಹೊಂದಿದ ನೌಕರರಿಗೆ ಬೀಳ್ಕೊಡುಗೆ ಹಾಗೂ ಸನ್ಮಾನ ಮಾಡಲಾಯಿತು.

ರಾಜ್ಯ ಕುರುಬರ ಅಭಿವೃದ್ಧಿ ಸಮಿತಿ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ, ತಾಲೂಕು ಕುರುಬರ ಅಭಿವೃದ್ಧಿ ಸಮಿತಿ ಅಧ್ಯಕ್ಷ ಡಿ.ಕೆ ಕುನ್ನೇಗೌಡ, ನಿವೃತ್ತ ಶಿಕ್ಷಕ ಚನ್ನೇಗೌಡ, ತಾಲೂಕು ಪ್ರಾಥಮಿಕ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಶಿಕ್ಷಕ ನರಸಿಂಹ ಇತರರು ಮಾತನಾಡಿದರು.

ಕಾರ್ಯಕ್ರಮದಲ್ಲಿ ಮುಖಂಡರಾದ ಅಣ್ಣಯ್ಯನಾಯ್ಕ, ಬಸವರಾಜ್, ಕುಮಾರ್, ಬಿ.ಎನ್.ಜಯರಾಮ್, ಡಾ.ಲೋಹಿತ್, ಗಣೇಶ್ ಕುಮಾರಸ್ವಾಮಿ, ಡಾ.ಭರತ್ ಕುಮಾರ್, ಜಿಲ್ಲಾ ಜಾಗೃತಿ ಹಾಗೂ ಉಸ್ತುವಾರಿ ಸಮಿತಿ ಸದಸ್ಯ ಮಹದೇವ್, ರಾಮೇಗೌಡ, ಗಣಪತಿ, ನಿಂಗರಾಜ್ ಮಲ್ಲಾಡಿ ಸೇರಿದಂತೆ ಕನಕ ನೌಕರ ಸಂಘದ ಪದಾಧಿಕಾರಿ ಹಾಗೂ ಮುಖಂಡರು ಭಾಗವಹಿಸಿದ್ದರು.

ಚಿಣ್ಣರ ಮೇಳದಲ್ಲಿ ಗ್ರಾಮೀಣ ಸೊಗಡಿನ ಆಟ ಪರಿಚಯಿಸಿ



ಚಿಣ್ಣರ ಕಟ್ಟೆ–ಬೇಸಿಗೆ ಶಿಬಿರವನ್ನು ದೈಹಿಕ ಶಿಕ್ಷಣ ಶಿಕ್ಷಕ ಜಯಪ್ಪ ಉದ್ಘಾಟಿಸಿದರು.

ತಿ.ನರಸೀಪುರ, ಏ.6– ಆಧುನಿಕತೆ ಭರಾಟೆಯಲ್ಲಿ ಕಳೆದು ಹೋಗುತ್ತಿರುವ ನಮ್ಮ ಗ್ರಾಮೀಣ ಸೊಗಡಿನ ಸಂಸ್ಕೃತಿ ಮತ್ತು ಆಟಗಳನ್ನು ಚಿಣ್ಣರ ಮೇಳದಲ್ಲಿ ಪರಿಚಯಿಸುವಂತೆ ಎಡದೊರೆ ಸರ್ಕಾರಿ ಪ್ರೌಢಶಾಲೆ ದೈಹಿಕ ಶಿಕ್ಷಣ ಶಿಕ್ಷಕ ಜಯಪ್ಪ ಕರೆ ನೀಡಿದರು.

ಪಟ್ಟಣದ ಸೆವೆಂತ್ ಡೇ ಅಡ್ವೆಂಟಿಸ್ಟ್ ಶಾಲೆಯಲ್ಲಿ ಬೆಳಕು ಸೇವಾ ಫೌಂಡೇಶನ್ ಹಾಗೂ ಮೆಗಾಸ್ಟಾರ್ ಡಾನ್ಸ್ ಗ್ರೂಪ್ ಸಹಯೋಗದಲ್ಲಿ ಆಯೋಜಿಸಿರುವ ಚಿಣ್ಣರ ಕಟ್ಟೆ–2025 ಬೇಸಿಗೆ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಪೋಷಕರು ಮಕ್ಕಳನ್ನು ನಿಯಂತ್ರಿಸಲಾಗದೆ ಮೊಬೈಲ್ ನೀಡುತ್ತಿರುವುದರಿಂದ ಇಂದು ಮಕ್ಕಳು ಮೊಬೈಲ್‌ಗಳಿಗೆ ಬಲಿಯಾಗುತ್ತಿದ್ದಾರೆ. ಈ ಗೀಳು ಮುಂದೊಂದು ದಿನ ಮಕ್ಕಳನ್ನು ಮಾನಸಿಕ ಕಾಯಿಲೆಗೆ ತಳ್ಳುವ ಪರಿಸ್ಥಿತಿಗೆ ತರಬಹುದು. ಇಂತಹ ವೇಳೆ ಮಕ್ಕಳನ್ನು ಮೊಬೈಲ್ ಗೀಳಿನಿಂದ ಹೊರತರಲು ಪ್ರಸಕ್ತ ಸನ್ನಿವೇಶದಲ್ಲಿ ಶಿಬಿರಗಳು ಪ್ರಯೋಜನಕಾರಿಯಾಗಿದೆ. ಇಲ್ಲಿ ನಮ್ಮ ಹಳೆಯ ಗ್ರಾಮೀಣ ಸೊಗಡಿನ ಸಂಸ್ಕೃತಿ ದೇಸಿ ಆಟಗಳು ಹಾಗೂ ಪ್ರಕೃತಿ ಒಡನಾಟದ ವಿವಿಧ ಅಂಶಗಳನ್ನು ಮಕ್ಕಳಿಗೆ ತಿಳಿಸಿ ಅವುಗಳ ಮೂಲಕ ನಮ್ಮ ಪಾರಂಪರಿಕ ಹಿನ್ನೆಲೆಯನ್ನು ಪರಿಚಯ ಮಾಡಿಕೊಡುವುದು ಬಹಳ ಅಗತ್ಯವಿದೆ ಎಂದು ಒತ್ತಿ ಹೇಳಿದರು.

ಬೆಳಕು ಸಂಸ್ಥೆ ಕಾನೂನು ಸಲಹೆಗಾರ ಜಿ.ರವಿಶಂಕರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಶಾಲೆ ಮುಖ್ಯ ಶಿಕ್ಷಕ ಮಚೇಂದ್ರ, ಪತ್ರಕರ್ತ ಎಂ.ಮಹದೇವ್, ಬೆಳಕು ಸೇವಾ ಫೌಂಡೇಷನ್ ಅಧ್ಯಕ್ಷ ಜಿ.ಅರವಿಂದ್, ಕಾರ್ಯದರ್ಶಿ ಆರ್.ಚೇತನ್, ಮೆಗಾ ಸ್ಟಾರ್ ಡ್ಯಾನ್ಸ್ ಶಾಲೆ ಸಂಸ್ಥಾಪಕ ಎನ್.ರಘು ನಂದನ್, ಶಿಕ್ಷಕ ಸಿದ್ದರಾಜು, ಸುರೇಶ್, ಫಾಸ್ಟ್ ಪ್ರಕಾಶ್ ಹಾಗೂ ಪೋಷಕರು, ಶಿಬಿರಾರ್ಥಿಗಳು ಹಾಜರಿದ್ದರು.

ರಾಜ್ಯ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿ

ಸ್ಕಲ್ವಿ ಅಸ್ತ್ರಾ ಬಾಲ್ ಬ್ಯಾಡ್ಮಿಂಟನ್ ಕ್ಲಬ್‌ಗೆ ಪ್ರಶಸ್ತಿ

ನಂಜನಗೂಡು, ಏ.6– ನಗರದ ಟೌನ್ ಟೆನ್ನಿಸ್ ಕ್ಲಬ್ ಆಯೋಜಿಸಿದ್ದ ರಾಜ್ಯ ಮಟ್ಟದ ಆಹ್ವಾನ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಭಾನುವಾರ ಬೆಂಗಳೂರಿನ ಸ್ಕಲ್ವಿ ಅಸ್ತ್ರಾ ಬಾಲ್ ಬ್ಯಾಡ್ಮಿಂಟನ್ ಕ್ಲಬ್ ಬೆಂಗಳೂರಿನ ಆರ್.ಆರ್.ನಗರ ಬಾಲ್ ಬ್ಯಾಡ್ಮಿಂಟನ್ ಕ್ಲಬ್, ಅನ್ನು 34–36 ಅಂಕಗಳಿಂದ ಪರಾಭವಗೊಳಿಸಿ ಟ್ರೋಫಿಯೊಂದಿಗೆ 30 ಸಾವಿರ ರೂ. ಬಹುಮಾನ ಪಡೆಯಿತು.

ಪಂದ್ಯ ಉದ್ಘಾಟಿಸಿ ಮಾತನಾಡಿದ ಶಾಸಕ ದರ್ಶನ್, ನಂಜನಗೂಡು ಫುಟ್ಬಾಲ್, ಕುಸ್ತಿ, ಖೋ ಖೋ, ಕ್ರಿಕೆಟ್ ಆಟಗಾರರಿಂದ ಪ್ರಸಿದ್ಧಿ ಪಡೆದಿದೆ. ನಗರದ ಜನ ಕ್ರೀಡಾಪ್ರೇಮಿಗಳು, ಪ್ರೋತ್ಸಾಹಕರು ಆಗಿದ್ದಾರೆ. ನಾನು ಒಬ್ಬ ಕ್ರೀಡಾಪಟುವಾಗಿ ಕ್ಷೇತ್ರದಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತೇನೆ ಎಂದರು.

ಟೌನ್ ಟೆನ್ನಿಸ್ ಕ್ಲಬ್ ಅಧ್ಯಕ್ಷ ಬಿ.ಕೆ.ನಾಗರಾಜ್ ಮಾತನಾಡಿ, ಸಂಸ್ಥೆಯಿಂದ ಹಲವು ರಾಜ್ಯ ಮಟ್ಟದ ಪಂದ್ಯಗಳನ್ನು ಆಯೋಜಿಸಿ, ಕ್ರೀಡಾಪಟುಗಳಿಗೆ ಪ್ರೋತ್ಸಾಹ ನೀಡಲಾಗುತ್ತಿತ್ತು. 2 ದಿನಗಳ ಕಾಲ ನಡೆದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿಯನ್ನು ಜನರು ವೀಕ್ಷಿಸಿ ಪ್ರೋತ್ಸಾಹ ನೀಡಿದ್ದಾರೆ. ಇನ್ನು ಮುಂದೆ ಪ್ರತಿವರ್ಷ ರಾಜ್ಯ ಮಟ್ಟದ ಬಾಲ್ ಬ್ಯಾಡ್ಮಿಂಟನ್ ಪಂದ್ಯಾವಳಿ ಆಯೋಜಿಸಲಾಗುವುದು ಎಂದರು.

ಪಂದ್ಯಾವಳಿಯಲ್ಲಿ ಬೆಂಗಳೂರಿನ ಆರ್.ಆರ್.ನಗರ ಬಾಲ್ ಬ್ಯಾಡ್ಮಿಂಟನ್ ಕ್ಲಬ್ 2ನೇ ಬಹುಮಾನ 20 ಸಾವಿರ ರೂ., 3ನೇ ಬಹುಮಾನ ಬೆಂಗಳೂರಿನ ಕೆನರಾ ಬ್ಯಾಂಕ್ ತಂಡ 10 ಸಾವಿರ ನಗದು ಪುರಸ್ಕಾರ ಪಡೆಯಿತು.

ಟೌನ್ ಟೆನ್ನಿಸ್ ಕ್ಲಬ್‌ನ ಕಾರ್ಯದರ್ಶಿ ಎನ್.ವಿ.ಮಂಜುನಾಥ್, ಶ್ಯಾಮ್ ಪಟೇಲ್, ವಿಜಯ್ ಕುಮಾರ್, ಯು.ಎನ್.ಪದ್ಮನಾಭರಾವ್, ರಾಮ್‌ಪ್ರಸಾದ್, ಎನ್.ಎಸ್.ಸುಬ್ರಹ್ಮಣ್ಯ, ಚಂದ್ರು, ಸೋಮ ಸುಂದರ್, ಜಗದೀಶ್, ಮುರುಳಿ, ನಾಗರಾಜ್, ಮಧುಸೂದನ್, ಉಮೇಶ್, ಕೆ.ಮಹದೇವು, ನಂಜುಂಡಸ್ವಾಮಿ ಉಪಸ್ಥಿತರಿದ್ದರು.





ಶ್ರೀರಾಮನ ಮೆರವಣಿಗೆ

ಮೈಸೂರು ತಾಲೂಕಿನ ಜಯಪುರದಲ್ಲಿ ರಾಮನವಮಿ ಪ್ರಯುಕ್ತ ಶ್ರೀರಾಮ ದೇವರ ಉತ್ಸವ ಮೂರ್ತಿ ಮೆರವಣಿಗೆ ಮಾಡಲಾಯಿತು.

ಏ.9, ಶ್ರೀಅಗಸ್ತೇಶ್ವರಸ್ವಾಮಿ ಮಹಾರಥೋತ್ಸವ

ತಿ.ನರಸೀಪುರ, ಏ.6– ಪಟ್ಟಣದ ಹಳೇ ತಿರುಮಕೂಡಲಿನಲ್ಲಿ ಏ.9ರಂದು ಶ್ರೀ ಪೂರ್ಣ ಮಂಗಳ ಕಾಮಾಕ್ಷಾಂಬ ಸಮೇತ ಶ್ರೀಅಗಸ್ತೇಶ್ವರಸ್ವಾಮಿ ಮಹಾರಥೋತ್ಸವ ಜರುಗಲಿದೆ.

ತ್ರಿವೇಣಿ ಸಂಗಮದಲ್ಲಿರುವ ಶ್ರೀಅಗಸ್ತೇಶ್ವರಸ್ವಾಮಿ ದೇವಾಲಯದಲ್ಲಿ ಬುಧವಾರ ಅಂಕುರಾರ್ಪಣ ಪ್ರಯಾಗ ಶಾಲಾ ಪ್ರವೇಶದೊಂದಿಗೆ ಧಾರ್ಮಿಕ ಉತ್ಸವಗಳು ಆರಂಭಗೊಂಡಿವೆ. ಏ.4ರಂದು ಚಂದ್ರಮಂಡಲ ಆರೋಹಣ, ಏ.5 ರಂದು ಅನಂತಪೀಠಾರೋಹಣ, ಏ.6ರಂದು ಪುಷ್ಪಮಂಟಪಾರೋಹಣ, ಏ.7 ರಂದು ವೃಷಭಾರೋಹಣ, ಏ.8 ರಂದು ವಸಂತೋತ್ಸವ, ಏ.9 ರಂದು ಮಹಾರಥೋತ್ಸವ, ಏ.10 ರಂದು ಶಯನೋತ್ಸವ, ಏ.11 ರಂದು ಅವೃತ್ಯೋತ್ಸವ, ಧ್ವಜಾರೋಹಣ ನೆರವೇರಲಿದೆ. ಏ.12ರಂದು ಮಹಾ ಕುಂಭಾಭಿಷೇಕ, ಕೈಲಾಸ ವಾಹನ ಉತ್ಸವಗಳು ಸಾಂಪ್ರದಾಯಕವಾಗಿ ನೆರವೇರಲಿವೆ ಎಂದು ತಹಸೀಲ್ದಾರ್ ಟಿ.ಜೆ. ಸುರೇಶಾಚಾರ್ ಹಾಗೂ ಪಾರುಪತ್ತೇದಾರ್ ಟಿ.ಎಸ್.ಚೇತನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಿಎಲ್‌ಡಿ ಬ್ಯಾಂಕ್‌ಗೆ 9 ನಿರ್ದೇಶಕರ ಆಯ್ಕೆ



ನೂತನ ನಿರ್ದೇಶಕರನ್ನು ಸನ್ಮಾನಿಸಲಾಯಿತು.

ಮೈಸೂರು, ಏ.6– ಮೈಸೂರು ತಾಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ(ಪಿ.ಎಲ್.ಡಿ) ಬ್ಯಾಂಕ್ ಆಡಳಿತ ಮಂಡಳಿಗೆ ನೂತನ ನಿರ್ದೇಶಕರಾಗಿ ಶಾಸಕ ಜಿ.ಟಿ ದೇವೇಗೌಡ ಬಣದ 9 ಮಂದಿ ಆಯ್ಕೆಯಾಗಿದ್ದಾರೆ.

ಇತ್ತೀಚೆಗೆ ಬ್ಯಾಂಕ್‌ನ 14 ಸ್ಥಾನಗಳಿಗೆ ಚುನಾವಣೆ ನಡೆದು ಸಾಲಗಾರರ ಕ್ಷೇತ್ರದಿಂದ ಗೋಪಾಲಪುರ ಸಿದ್ದಯ್ಯ, ಇಲವಾಲ ಎನ್.ಬಿ.ಮಂಜು, ಹಾರೋಹಳ್ಳಿ (ಮೆ) ಸಿ.ರಾಜೇಶ, ವರುಣ ಎಂ.ಕುಮಾರ, ಮೈಸೂರು ನಗರ ಪಿ.ಎಂ.ಚಾಮೇಗೌಡ, ಬೀರಿಹುಂಡಿ ಜಯಮ್ಮ, ಕಾಮನಕೆರೆಹುಂಡಿ ಯಶೋಧಮ್ಮ ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ ಆರ್.ಸಿಂಧು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ. ನೂತನ ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರನ್ನು ಶಾಸಕ ಜಿ.ಟಿ.ದೇವೇಗೌಡ ಅಭಿನಂದಿಸಿದರು. ಮುಖಂಡರಾದ ಜಿ.ಕೆ.ಬಸವೇಗೌಡ, ಗೋವಿಂದೇಗೌಡ, ಭಾಸ್ಕರ್, ಸಂತೋಷ, ವೆಂಕಟೇಶ್, ಶಿವಣ್ಣ, ನಾಗರಾಜು ಉಪಸ್ಥಿತರಿದ್ದರು.

ಬಸವ ತತ್ವ ಸಾರಿದ ಸಂತ ಶ್ರೀಗುರುಮಲ್ಲೇಶ್ವರರು

ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬಣ್ಣನೆ



ಸುತ್ತೂರು ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡುತ್ತಿರುವುದು.

ತಿ.ನರಸೀಪುರ, ಏ.6– ಮೈಸೂರು, ಚಾಮರಾಜನಗರ ಭಾಗದಲ್ಲಿ ಮಠಗಳನ್ನು ಸ್ಥಾಪಿಸಿ ಕಾಯಕ ಮತ್ತು ದಾಸೋಹದ ಮಹತ್ವವನ್ನು ಶ್ರೀ ಗುರುಮಲ್ಲೇಶ್ವರರು ಸಾರಿದರು ಎಂದು ಸುತ್ತೂರು ವೀರಸಿಂಹಾಸನ ಮಠದ ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಬಣ್ಣಿಸಿದರು.

ತಾಲೂಕಿನ ದೊಡ್ಡನಹುಂಡಿ ಗ್ರಾಮದಲ್ಲಿ ಭಾನುವಾರ ಆಯೋಜಿಸಿದ್ದ ಶ್ರೀಗುರುಮಲ್ಲೇಶ್ವರರ ಶಿಲಾ ಪ್ರತಿಮೆ ಅನಾವರಣ ಹಾಗೂ ಶರಣ ಸಂಗಮ ಸಮಾರಂಭ ಉದ್ಘಾಟಿಸಿ, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಗ್ರಾಮೀಣ ಭಾಗದಲ್ಲಿ ಕಾಲ್ನಡಿಗೆಯಲ್ಲಿ ಸಂಚರಿಸಿ ಬಸವಣ್ಣನವರ ತತ್ವ, ಸಿದ್ಧಾಂತವನ್ನು ಜನರಿಗೆ ಮುಟ್ಟಿಸುವ ಮಹತ್ವದ ಕೆಲಸ ನಿರ್ವಹಿಸಿದರು. ಕಂತೆ ಭಿಕ್ಷೆ ಪರಿಕಲ್ಪನೆ ಜಾರಿಗೆ ತಂದವರು ಶ್ರೀಗುರುಮಲ್ಲೇಶ್ವರರು ಎಂದ ಅವರು ಕಂತೆ ಭಿಕ್ಷೆ ಕಾಯಕ ಮಹತ್ತರವಾದದ್ದು, ಎಲ್ಲಾ ಭಕ್ತರ ಮನೆ ಆಹಾರವನ್ನು ಒಂದೇ ಪಾತ್ರೆಯಲ್ಲಿ ಹಾಕುವುದರಿಂದ ಯಾರ ಮನೆ ಆಹಾರ ಯಾವುದು ಎಂದು ಯಾರಿಗೂ ಗೊತ್ತಾಗುವುದಿಲ್ಲ. ಪ್ರಸಾದ ಸೇವಿಸಿದ ಭಕ್ತನಿಗೂ ನಾನು ಯಾರ ಮನೆಯ ಊಟ ತಿಂದೆ ಎಂಬುದು ತಿಳಿಯುವುದಿಲ್ಲ. ಇಲ್ಲಿ ಯಾರ ಋಣವೂ ಯಾರ ಮೇಲೆಯೂ ಇರುವುದಿಲ್ಲ ಎಂದರು.

ಧರ್ಮ–ದೇವರ ನಡುವಿನ ನಡುವೆ ಅಡ್ಡಗೋಡೆಯಾಗಬಾರದು. ಕಷ್ಟದಲ್ಲಿರುವವರಿಗೆ ನೆರವಾಗುವುದೇ ನಿಜವಾದ ಧರ್ಮ. ಕಷ್ಟದಲ್ಲಿ ಸಿಲುಕಿರುವವರನ್ನು ಪಾರು ಮಾಡುವುದೇ ನಿಜವಾದ ಧರ್ಮ ಎಂದರು.

ಸಾಲೂರು ಬೃಹನ್ಮಠದ ಶ್ರೀಡಾ.ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಮಾತನಾಡಿ, 18ನೇ ಶತಮಾನದ ಮಹಾನ್ ಪುರುಷೋತ್ತಮ ಶ್ರೀ ಗುರುಮಲ್ಲೇಶ್ವರರು ದಾಸೋಹ, ಕಾಯಕ ಪರಂಪರೆ ಕೊಟ್ಟ ಸಂತ ಎಂದು ಅವರ ಸಾಧನೆ ಸಿದ್ಧಿಯನ್ನು ಕೊಂಡಾಡಿದರು.

ವೀರಶೈವ ಲಿಂಗಾಯತ ಯುವ ವೇದಿಕೆ ರಾಜ್ಯಾಧ್ಯಕ್ಷ ಪ್ರಶಾಂತ್ ಕೆಲ್ಲೂರ್ ಮಾತನಾಡಿ, ಸಿದ್ಧಗಂಗಾ ಮಠ, ಸುತ್ತೂರು ವೀರಶೈವ ಲಿಂಗಾಯತ ಸಮಾಜದ ಎರಡು ಕಣ್ಣುಗಳು. ಇವೆರಡು ಮಠಗಳು ಇಲ್ಲದಿದ್ದರೆ ಎಷ್ಟೋ ಹಳ್ಳಿಗಳ ಜನರಿಗೆ ವಿದ್ಯಾಭ್ಯಾಸ ಸಿಗುತ್ತಿರಲಿಲ್ಲ ಎಂದರು.

ಮರಿಯಾಲ ಮಠದ ಶ್ರೀಮುರುಘ ರಾಜೇಂದ್ರ ಸ್ವಾಮೀಜಿ, ವಾಟಾಳು ಮಠದ ಶ್ರೀಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ, ಕನಕಪುರ ದೇಗುಲ ಮಠದ ಕಿರಿಯ ಶ್ರೀಚನ್ನಬಸವ ಮಹಾಸ್ವಾಮೀಜಿ, ವೀರಶೈವ ಯುವ ಮುಖಂಡ ನಿಶಾಂತ್ ಮತ್ತಿತರರು ಮಾತನಾಡಿದರು. ವಿವಿಧ ಮಠಗಳ ಹರ ಗುರು ಚರ ಮೂರ್ತಿಗಳು ಉಪಸ್ಥಿತರಿದ್ದರು.

ಪುಟಾಣಿಗಳಾದ ಸಾನ್ವತ್ ಅವರ ಭರತನಾಟ್ಯ ಹಾಗೂ ಶಿವಾಂಶು ಅವರ ವಚನ ಗಾಯನ ಗಮನ ಸೆಳೆಯಿತು. ಈ ವೇಳೆ ಹಿರಿಯ ಪತ್ರಕರ್ತ ದೊಡ್ಡನಹುಂಡಿ ರಾಜಣ್ಣ, ಖೋ ಖೋ ವಿಶ್ವಕಪ್ ವಿಜೇತ ಆಟಗಾರ್ತಿ ಕು.ಬಿ.ಚೈತ್ರಾ, ಹರಿಕಥಾ ವಿದ್ವಾಂಸ ಬದನವಾಳು ಶಿವಕುಮಾರ ಶಾಸ್ತ್ರಿ ಹಾಗೂ ಶ್ರೀ ಗುರುಮಲ್ಲೇಶ್ವರ ಪ್ರತಿಮೆ ಕೆತ್ತಿದ ಶಿಲ್ಪಿ ಪ್ರವೀಣ್ ಹಾಗೂ ಅವರ ತಂದೆಯನ್ನು ಸನ್ಮಾನಿಸಲಾಯಿತು.

ಪ್ರತಿಮೆ ಅನಾವರಣ: ಶ್ರೀಗುರುಮಲ್ಲೇಶ್ವರ ಪ್ರತಿಮೆಯನ್ನು ಸಿದ್ಧಗಂಗಾ ಮಠದ ಶ್ರೀಸಿದ್ಧಲಿಂಗ ಸ್ವಾಮೀಜಿ ಅನಾವರಣಗೊಳಿಸಿದರು. ಈ ವೇಳೆ ಗುರುಮಲ್ಲೇಶ್ವರರಿಗೆ ಅಭಿಷೇಕ, ವಿಶೇಷ ಪೂಜೆ ಸಲ್ಲಿಸಲಾಯಿತು.

ಕೃಷಿಕ ಸಮಾಜದ ಅಧ್ಯಕ್ಷ ಬೇನಕನಹಳ್ಳಿ ಶಿವಮಲ್ಲಪ್ಪ ತಾಲೂಕು ಯುವ ಘಟಕದ ಅಧ್ಯಕ್ಷ ಅಶೋಕ್ ನಟರಾಜ್, ತಾಲೂಕು ವೀರಶೈವ ಮಹಾಸಭಾ ಮಾಜಿ ಅಧ್ಯಕ್ಷ ತೊಟ್ಟವಾಡಿ ಮಹದೇವಸ್ವಾಮಿ, ಉಪನ್ಯಾಸಕ ಕುಮಾರಸ್ವಾಮಿ, ತಾಲೂಕು ವೀರಶೈವ ಮಹಾಸಭಾ ಖಜಾಂಚಿ ನಂಜುಂಡಸ್ವಾಮಿ, ನಿಲಸೋಗೆ ಮಹಾದೇವ ಪ್ರಸಾದ್, ಹೋಟೆಲ್ ರಾಜಣ್ಣ, ಆಡಿಟರ್ ಮಂಜುನಾಥ್, ಪುರಸಭಾ ಸದಸ್ಯ ಕಿರಣ್, ಗ್ರಾಮದ ಮುಖಂಡರು ಯಜಮಾನರು, ಶ್ರೀಗುರುಮಲ್ಲೇಶ್ವರ ಯುವ ಬಳಗ ಹಾಜರಿದ್ದರು.

ಲಕ್ಷ್ಮೀನರಸಿಂಹ ನಿಧನ



ಹೆಚ್.ಡಿ.ಕೋಟೆ, ಏ.6– ಹಿರಿಯ ಪತ್ರಕರ್ತ ಪುರುಷೋತ್ತಮ್ ಅವರ ಪುತ್ರ, ತಾಲೂಕಿನ ಕರಿಗಳ ಗ್ರಾಮದ ಶ್ರೀಗಂಟೆ ಆಂಜನೇಯಸ್ವಾಮಿ ದೇವಸ್ಥಾನದ ಅರ್ಚಕ ಲಕ್ಷ್ಮೀನರಸಿಂಹ (63) ಭಾನುವಾರ ಸಂಜೆ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಸಹೋದರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ರುದ್ರಭೂಮಿಯಲ್ಲಿ ಸೋಮವಾರ ನಡೆಯಲಿದೆ ಎಂದು ಕುಟುಂಬ ಮೂಲಗಳು ತಿಳಿಸಿದೆ.

ಐಪಿಎಲ್ ಹಂಗಾಮ

ಸೋಲುಗಳಿಂದ ಕಂಗೆಟ್ಟ ಎಸ್‌ಆರ್‌ಹೆಚ್: ಜಿಟಿಗೆ ಹ್ಯಾಟ್ರಿಕ್ ಜಯ



ಹೈದರಾಬಾದ್, ಏ.6– ನಾಯಕ ಶುಭಮನ್‌ಗಿಲ್ ಅವರ ಅರ್ಧಶತಕ ಹಾಗೂ ಮೊಹಮ್ಮದ್ ಸಿರಾಜ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಗುಜರಾತ್ ಟೈಟಾನ್ಸ್ 7 ವಿಕೆಟ್‌ಗಳ ಜಯ ಸಾಧಿಸಿದೆ.

ಇದರೊಂದಿಗೆ ಆಡಿರುವ 4 ಪಂದ್ಯಗಳಲ್ಲಿ ಸತತ 3 ಪಂದ್ಯಗಳನ್ನು ಗೆದ್ದು ಅಂಕಪಟ್ಟಿಯಲ್ಲಿ 6 ಅಂಕಗಳೊಂದಿಗೆ ಗುಜರಾತ್ 2ನೇ ಸ್ಥಾನಕ್ಕೇರಿದರೇ, 2025ರ ಐಪಿಎಲ್‌ನಲ್ಲಿ 300ರನ್ ಗುರಿಯೊಂದಿಗೆ ಕಣಕ್ಕಿಳಿದಿದ್ದ ಹೈದರಾಬಾದ್ ಸತತ 4 ಸೋಲುಗಳಿಂದ ಕಂಗೆಟ್ಟು ಅಂಕಪಟ್ಟಿಯಲ್ಲಿ ಕೊನೆ ಸ್ಥಾನಕ್ಕೆ ಜಾರಿದೆ.

ಇಲ್ಲಿನ ರಾಜೀವ್‌ಗಾಂಧಿ ಅಂತರರಾಷ್ಟ್ರೀಯ ಮೈದಾನದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 152 ರನ್ ಗಳಿಸಿತು. 153 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಗುಜರಾತ್ 16.4 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ ಇನ್ನೂ 20 ಎಸೆತಗಳು ಬಾಕಿ ಇರುವಂತೆ ಜಯಭೇರಿ ಬಾರಿಸಿತು.

ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಸಾಯಿ ಸುದರ್ಶನ್ 5, ಜೋಸ್ ಬಟ್ಲರ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಈ ವೇಳೆ 3ನೇ ವಿಕೆಟಗೆ ಜೊತೆಯಾದ ನಾಯಕ ಶುಭಮನ್ ಗಿಲ್ ಹಾಗೂ ವಾಷಿಂಗ್‌ಟನ್ ಸುಂದರ್ 90 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ನಾಯಕನಿಗೆ ತಕ್ಕ ಆಟವಾಡಿದ ಗಿಲ್ 9 ಬೌಂಡರಿ ಒಳಗೊಂಡ ಅಜೇಯ 61 ರನ್ ಗಳಿಸಿದರೇ, ಸುಂದರ್ 29 ಎಸೆತಗಳಲ್ಲಿ 5 ಬೌಂಡರಿ, 2 ಸಿಕ್ಸರ್ ಒಳಗೊಂಡ 49ರನ್ ಗಳಿಸಿ ನಿರ್ಗಮಿಸಿದರು. ಉಳಿದಂತೆ ರುದರ್ ಫೋರ್ಡ್ ಅಜೇಯ 35 ರನ್ ಬಾರಿಸಿ ತಂಡಕ್ಕೆ ಜಯ ತಂದು ಕೊಟ್ಟರು. ಮೊಹಮ್ಮದ್ ಶಮಿ 2, ಪ್ಯಾಟ್ ಕಮ್ಮಿನ್ಸ್ 1 ವಿಕೆಟ್ ಗಳಿಸಿದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಹೈದರಾಬಾದ್ ಪರ ಅಭಿಷೇಕ್ ಶರ್ಮಾ 18, ಇಶಾನ್ ಕಿಶನ್ 17, ನಿತೀಶ್ ರೆಡ್ಡಿ 31, ಹೆನ್ರಿಚ್ ಕ್ಲಾಸೆನ್ 27, ಅನಿಕೇತ್ ವರ್ಮಾ 18, ಪ್ಯಾಟ್ ಕಮ್ಮಿನ್ಸ್ 22 ರನ್ ಗಳಿಸಿದರು. ಉಳಿದವರು ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗಲಿಲ್ಲ. ಹೈದರಾಬಾದ್ ಬ್ಯಾಟ್ಸ್‌ಮನ್‌ಗಳನ್ನು ಬೌಲಿಂಗ್‌ನಲ್ಲಿ ಕಾಡಿದ ಮೊಹಮ್ಮದ್ ಸಿರಾಜ್ 4 ವಿಕೆಟ್ ಪಡೆದು ಉತ್ತಮ ಬೌಲರ್ ಎನಿಸಿದರು. ಉಳಿದಂತೆ ಪ್ರಸಿದ್ಧ ಕೃಷ್ಣ, ಸಾಯಿ ಕಿಶೋರ್ ತಲಾ 2 ವಿಕೆಟ್ ಪಡೆದರು. ಮೊಹಮ್ಮದ್ ಸಿರಾಜ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಸಿರಾಜ್ 100 ವಿಕೆಟ್ ಸಾಧನೆ: ಪಂದ್ಯದಲ್ಲಿ 4 ವಿಕೆಟ್ ಪಡೆಯುವುದ ರೊಂದಿಗೆ ಮೊಹಮ್ಮದ್ ಸಿರಾಜ್ ಐಪಿಎಲ್‌ನಲ್ಲಿ 100 ವಿಕೆಟ್‌ಗಳ ಸಾಧನೆ ಮಾಡಿದ್ದಾರೆ. ಈ ಬಾರಿಯ ಐಪಿಎಲ್‌ನಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಪ್ರತಿನಿಧಿಸುತ್ತಿರುವ ಸಿರಾಜ್, ಇಂದು ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ನಡೆಯುತ್ತಿರುವ ಪಂದ್ಯದಲ್ಲಿ ಈ ಸಾಧನೆ ಮಾಡಿದ್ದಾರೆ. ಐಪಿಎಲ್‌ನಲ್ಲಿ ಅತಿ ಹೆಚ್ಚು ವಿಕೆಟ್ ಗಳಿಸಿದ ದಾಖಲೆ ಯಜುವೇಂದ್ರ ಚಾಹಲ್ ಅವರ ಹೆಸರಲ್ಲಿದೆ ಚಾಹಲ್ ಒಟ್ಟು 206 ವಿಕೆಟ್‌ಗಳನ್ನು ಕಬಳಿಸಿದ್ದಾರೆ.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಡೆಲ್ಲಿ	3	3	0	0	6
ಗುಜರಾತ್	4	3	1	0	6
ಬೆಂಗಳೂರು	3	2	1	0	4
ಪಂಜಾಬ್	3	2	1	0	4
ಕೋಲ್ಕತ್ತಾ	4	2	2	0	4
ಲಕ್ನೋ	4	2	2	0	4
ರಾಜಸ್ಥಾನ್	4	2	2	0	4
ಮುಂಬೈ	4	1	3	0	2
ಚೆನ್ನೈ	4	1	3	0	2
ಹೈದರಾಬಾದ್	5	1	4	0	2

ಇಂದಿನ ಪಂದ್ಯ

ಮುಂಬೈ ಇಂಡಿಯನ್ಸ್
V/S
ರಾಯಲ್ ಚಾಲೆಂಜರ್ಸ್ ಬೆಂಗಳೂರು

ಸಮಯ: ಸಂಜೆ 7.30

ಸ್ಥಳ : ವಾಂಖೆಡೆ ಕ್ರೀಡಾಂಗಣ, ಮುಂಬೈ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವೀರ ಧೀರ ಶೂರನ್–2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮನದ ಕಡಲು (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಿಸ್ ಟೀಚರ್ (ಹಿಂ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ರಾಬಿನ್ ಹುಡ್ (ತೆ)	4 ಪ್ರದರ್ಶನಗಳು
ಸಂಗಂ	
ಸಿಕಂದರ್ (ಹಿಂ)	4 ಪ್ರದರ್ಶನಗಳು
ಲಿಡೋ	
ನಿಮ್ದೇ ಕಥೆ (ಕ–2), ಬೆಂಕಿಯ ಬಲೆ (ಕ–2)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 2	ಬರ್ಗೆಟ್ ಬಸ್ಯಾ (ಕ): ಬೆ10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.
ಸ್ಕ್ರೀನ್ 4	ಡ್ರ್ಯಾಗನ್ (ತ): ಬೆ10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

INOX LIVE THE MOVIE ಐನಾಕ್ಸ್ ಮೂವೀಸ್
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

MVC ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.
ಸ್ಕ್ರೀನ್ 2	ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.

PVR CINEMAS ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ವಿವಿಧೆಡೆ ರಾಮನವಮಿ ಸಂಭ್ರಮ



ಅಪೂರ್ವ ಸ್ನೇಹ ಬಳಗದ ವತಿಯಿಂದ ಮೈಸೂರಿನ ಚಾಮುಂಡಿಪುರಂನಲ್ಲಿರುವ ಶ್ರೀರಾಮಚಂದ್ರ ಪ್ರಭುವಿನ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಭಕ್ತಾದಿಗಳಿಗೆ ಪಾನಕ, ಮಜ್ಜಿಗೆ, ಕೋಸಂಬರಿ ವಿತರಿಸಲಾಯಿತು. ಈ ವೇಳೆ ಉದ್ಯಮಿ ಜಯರಾಮ್, ಅಪೂರ್ವ ಸುರೇಶ್, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ನಗರಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಪಾಂಡು, ಜತ್ತಿ ಪ್ರಸಾದ್, ಗಜೇಂದ್ರ, ಅಭಿಲಾಷ್ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ಕನ್ನಡ ವೇದಿಕೆ ವತಿಯಿಂದ ನಗರದ ಮಹದೇವಪುರದ ಮುನೇಶ್ವರ ದೇವಸ್ಥಾನದಲ್ಲಿ ಶ್ರೀ ರಾಮನವಮಿ ಆಚರಣೆ ಮಾಡಲಾಯಿತು. ಭಕ್ತಾದಿಗಳಿಗೆ ಪಾನಕ ಮತ್ತು ಮಜ್ಜಿಗೆ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ವೇದಿಕೆ ಅಧ್ಯಕ್ಷ ಎಸ್. ಬಾಲಕೃಷ್ಣ ಶಿವಪ್ಪ, ನಾಗರಾಜು, ಚೆಲುವರಾಜು, ಚಂದ್ರು, ಸತೀಶ, ಮಿಲಿಟರಿ ರಾಜು ಮುಂತಾದವರಿದ್ದರು.



ಚಾಮುಂಡಿಪುರಂ ವೃತ್ತದಲ್ಲಿ ಶ್ರೀ ರಾಮನವಮಿ ಆಚರಿಸಲಾಯಿತು. ನಗರಪಾಲಿಕೆ ಮಾಜಿ ಸದಸ್ಯ ರಾಮಪ್ರಸಾದ್, ಮೈಸೂರು ಮಹಾನಗರ ಪಾಲಿಕೆ ಝೋನ್ 3ರ ಕಂದಾಯಾಧಿಕಾರಿ ಬಸವಣ್ಣ, ಕೆಆರ್ ಬ್ಯಾಂಕ್ ಅಧ್ಯಕ್ಷ ಬಸಪ್ಪ, ಸಂಘದ ಗೌರವಾಧ್ಯಕ್ಷ ಅಂಬಳೆ ಶಿವಣ್ಣ, ಅಧ್ಯಕ್ಷ ಸಿ.ಸಂದೀಪ್, ಉಪಾಧ್ಯಕ್ಷ ಎಂ.ಬಸವರಾಜು, ಖಜಾಂಚಿ ವಿ.ಬಸವರಾಜು, ನಿರ್ದೇಶಕರಾದ ಬಸವರಾಜು, ಮಂಜುಳ, ಪ್ರಭು ಎ.ಸಿ, ಧರ್ಮೇಂದ್ರ ಎನ್, ಯೋಗೇಶ್, ಸೋಮೇಶ್ ಮುಖಂಡರಾದ ಚಂದ್ರಶೇಖರ್, ಮೋಹನ್, ಸುರೇಶ್, ರಾಜೇಂದ್ರ, ಮಹೇಶ್ ಅರಸ್, ಅಡುಗೆ ಕಾಂಟ್ರಾಕ್ಟರ್ ಕುಮಾರ್, ಸಂತೋಷ್, ರಾಮು, ಅರವಿಂದ್, ವಾಸು, ಶಿವಲಿಂಗಸ್ವಾಮಿ, ಸತೀಶ್, ವಿಕ್ರಾಂತ್ ರಾಜು, ಲಕ್ಷ್ಮಣ್, ಶಿವಮಲ್ಲಪ್ಪ ಮಹೇಶ್, ದೀಪಕ್, ಶಿವರಾಜ್, ಸುರೇಂದರ್, ಧನುಷ್ ಮುಂತಾದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಮೈಸೂರು ಧಾರ್ಮಿಕ ದತ್ತಿ ಇಲಾಖೆ ಸಹಯೋಗದೊಂದಿಗೆ ಶ್ರೀ ರಾಮನವಮಿ ಅಂಗವಾಗಿ ಸ್ವಾಮಿಗೆ ವಿಶೇಷ ಅಲಂಕಾರ ರಾಮತಾರಕ ಹೋಮ, ನವಗ್ರಹ ಹೋಮವನ್ನು ದೇವಸ್ಥಾನದ ಪ್ರಧಾನ ಅರ್ಚಕರಾದ ವಿದ್ವಾನ್ ಎಸ್.ಕೃಷ್ಣಮೂರ್ತಿ ನೆರವೇರಿಸಿದರು. ಆನಂತರ ಭಕ್ತಾದಿಗಳಿಗೆ ಪಾನಕ, ಮಜ್ಜಿಗೆ, ಕೋಸಂಬರಿ ಹಾಗೂ ಪ್ರಸಾದವನ್ನು ವಿತರಿಸಲಾಯಿತು.



ಮೈಸೂರಿನ ಕೆ.ಆರ್.ಮೊಹಲ್ಲಾ, ಬಸವೇಶ್ವರ ರಸ್ತೆ, 13ನೇ ಕ್ರಾಸ್‌ನಲ್ಲಿ ಶ್ರದ್ಧಾಭಕ್ತಿಯಿಂದ ಶ್ರೀರಾಮನವಮಿ ಆಚರಿಸಲಾಯಿತು. ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್, ಮಹದೇವ, ನಾಗರಾಜು, ರಾಜಣ್ಣ, ಕುಮಾರ್, ಪಾಪಣ್ಣ, ರಂಗಣ್ಣ, ಪ್ರಸಾದ್ ಇನ್ನಿತರರು ಭಾಗವಹಿಸಿದ್ದರು. ಈ ವೇಳೆ ಭಕ್ತಾದಿಗಳಿಗೆ ನೀರು ಮಜ್ಜಿಗೆ, ಪಾನಕ ಹಾಗೂ ಕೋಸಂಬರಿ ವಿತರಿಸಲಾಯಿತು.

ಯುವಜನರಿಗೆ ರಾಮನ ಆದರ್ಶ ಸ್ಫೂರ್ತಿ: ಕೆ.ಹರೀಶ್ ಗೌಡ



ಮೈಸೂರು, ಏ.6– ಶ್ರೀ ರಾಮನವಮಿ ಪ್ರಯುಕ್ತ ದೇವರಾಜ ಅರಸು ರಸ್ತೆಯಲ್ಲಿರುವ ಆಂಜನೇಯ ಸ್ವಾಮಿ ದೇವಸ್ಥಾನದ ವಿಶೇಷ ಪೂಜೆಯಲ್ಲಿ ಪಾಲ್ಗೊಂಡ ಶಾಸಕ ಕೆ.ಹರೀಶ್ ಗೌಡ ದೇವರ ದರ್ಶನ ಪಡೆದು ನಂತರ ಭಕ್ತಾದಿಗಳಿಗೆ ಪಾನಕ, ಮಜ್ಜಿಗೆ ವಿತರಿಸಿ ಮಾತನಾಡಿ, ದೈವಿ ಪುರುಷನಾದ ರಾಮನ ಬದುಕಿನ ಆದರ್ಶಗಳು ಎಲ್ಲ ಧರ್ಮದ ಯುವಜನರಿಗೆ ಸ್ಫೂರ್ತಿ ಎಂದರು.

ರಾಮ ವನವಾಸಕ್ಕೆ ತೆರಳಿದಾಗ ಪತ್ನಿ ಸೀತೆಯೂ ಜೊತೆಯಾಗಿ ಹೋಗುವ ಸನ್ನಿವೇಶ ಎಲ್ಲ ದಂಪತಿಗೆ ಮಾರ್ಗದರ್ಶಿ ಆಗಿದೆ ಜೀವನದಲ್ಲಿ ಎಷ್ಟೇ ಕಷ್ಟ ಬಂದಾಗಲೂ ಪತಿ– ಪತ್ನಿ ಕೈಜೋಡಿಸಿ ಸಂಸಾರದ ನೌಕೆ ಸಾಗಿಸಬೇಕು ಎಂಬ ಅಮೂಲ್ಯ ಸಂದೇಶ ಅದು ಸಾರುತ್ತದೆ ಎಂದು ತಿಳಿಸಿದರು.

ಜಯಂತಿಗಳು ಮೆರವಣಿಗೆ ಮಾಡುವುದರಿಂದ ಸಾರ್ಥಕ ಆಗುವುದಿಲ್ಲ. ಬದಲಿಗೆ ಮಹನೀಯರ ಆದರ್ಶಗಳನ್ನು ಬದುಕಿನಲ್ಲಿ ಆಚರಣೆಗೆ ತಂದಾಗ ಮಾತ್ರ ಅರ್ಥ ಬರುತ್ತದೆ. ಎಲ್ಲರೂ ರಾಮಾಯಣ ನಿತ್ಯ ಪಠಿಸಬೇಕು. ಅದರಲ್ಲಿನ ಮಾನವೀಯ ಮೌಲ್ಯಗಳನ್ನು ಎಲ್ಲರೂ ಪಾಲಿಸಬೇಕು ಎಂದು ಹೇಳಿದರು.

ಈ ಸಂದರ್ಭದಲ್ಲಿ ದೇವಸ್ಥಾನದ ಆಡಳಿತ ವರ್ಗದವರು, ಪುರೋಹಿತರಾದ ವೆಂಕಟೇಶ್, ಆನಂದ್, ಧ್ಯಾನ್, ಮುಖಂಡರಾದ ರಾಮರಾಜ, ಪುರುಷೋತ್ತಮ್, ಸತ್ಯ, ಗುರುರಾಜ್, ರವಿಚಂದ್ರ, ಹರೀಶ್ ಗೌಡ, ನಿತಿನ್, ನವೀನ್, ಸುರಿ ಶೆಟ್ಟಿ ಹಾಗೂ ಇನ್ನಿತರರು ಹಾಜರಿದ್ದರು



ಮೈಸೂರಿನ ಜಯನಗರದ 16ನೇ ಕ್ರಾಸ್‌ನಲ್ಲಿರುವ ಶ್ರೀ ರಾಮ ಮಂದಿರದಲ್ಲಿ ಭಾನುವಾರ ರಾಮನವಮಿ ವಿಶೇಷ ಪೂಜಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರನ್ನು ರಾಮಮಂದಿರ ಸಮಿತಿ ವತಿಯಿಂದ ಅಭಿನಂದಿಸಲಾಯಿತು.



ಮೈಸೂರಿನ ಶ್ರೀ ವಿನಾಯಕ ಗೆಳೆಯರ ಬಳಗದ ವತಿಯಿಂದ ನಡೆಸಲಾದ ಶ್ರೀ ರಾಮನವಮಿ ಪೂಜೆಯಲ್ಲಿ ಟಿ.ಕೆ.ಲೇಔಟ್ ವಾರ್ಡ್‌ನ ಮಾಜಿ ಕಾರ್ಪೊರೇಟರ್ ಜೆ.ಗೋಪಿ ಭಾಗಿಯಾಗಿ, ಭಕ್ತರಿಗೆ ಪಾನಕ–ಮಜ್ಜಿಗೆ ನೀಡಿದರು.

ಉತ್ತರಾದಿ ಮಠದಲ್ಲಿ ಶ್ರೀ ರಾಮನವಮಿ



ಮೈಸೂರು, ಏ.6– ಮೈಸೂರಿನ ಉತ್ತರಾದಿ ಮಠದ ವತಿಯಿಂದ ಶ್ರೀ ರಾಮನವಮಿ ಪಾವನ ಸಂದರ್ಭದಲ್ಲಿ ಭಕ್ತರಿಗಾಗಿ ವಿಶೇಷ ಸೇವಾ ಕಾರ್ಯ ಆಯೋಜಿಸಲಾಗಿತ್ತು ಮಠದ ಆವರಣದಲ್ಲಿ ಸಾವಿರಾರು ಭಕ್ತರಿಗೆ ತಂಪು ಪಾನಕ ಹಾಗೂ ಮಜ್ಜಿಗೆ ವಿತರಿಸಿ ಉಚಿತ ಸೇವೆಯನ್ನು ನೀಡಲಾಯಿತು.

ಈ ಕಾರ್ಯಕ್ರಮದಲ್ಲಿ ಪ್ರಮುಖ ಅತಿಥಿಯಾಗಿ ಭಾಗವಹಿಸಿದ್ದ ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್ ಅವರು, ರಾಮನವಮಿಯ ಮಹತ್ವದ ಕುರಿತು ಭಕ್ತರೊಂದಿಗೆ ತಮ್ಮ ಮನೋಭಾವನೆ ಹಂಚಿಕೊಂಡರು. ಅವರು ಮಾತನಾಡುತ್ತಾ, ರಾಮ ಮತ್ತು ಸೀತೆಯ ಜೀವನವೊಂದು ಧರ್ಮ, ಶ್ರದ್ಧೆ ಹಾಗೂ ತ್ಯಾಗದ ಪ್ರತೀಕವಾಗಿದೆ. ರಾಮನವಮಿ ನಮಗೆ ಸತ್ಯದ ಮಾರ್ಗದಲ್ಲಿ ನಡೆಯಲು ಸ್ಫೂರ್ತಿ ನೀಡುತ್ತದೆ ಎಂದು ಹೇಳಿದರು.

ಮಠದ ಪೂಜ್ಯ ಶ್ರೀಗಳ ಆಶೀರ್ವಾದದೊಂದಿಗೆ ನಡೆದ ಈ ಸೇವಾ ಕಾರ್ಯಕ್ರಮ ಭಕ್ತರಲ್ಲಿ ಭಕ್ತಿ ಹಾಗೂ ಸಮಾಜ ಸೇವೆಯ ಸಂಸ್ಕಾರವನ್ನು ಬೆಳೆಸಿದಂತಾಯಿತು. ಸ್ಥಳೀಯ ನಾಗರಿಕರು, ಭಕ್ತರು ಹಾಗೂ ಮಠದ ಸೇವಾದಾರರು ಈ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದರು.

ಉತ್ತರಾದಿ ಮಠದ ಈ ಮಾದರಿಯ ಸೇವಾ ಕಾರ್ಯಗಳು ಸಮಾಜದಲ್ಲಿ ಧಾರ್ಮಿಕ ಚೇತನೆಯನ್ನು ಹೆಚ್ಚಿಸಲು ಪ್ರೇರಣೆಯಾಗಿದೆ. ಇದೇ ಸಂದರ್ಭದಲ್ಲಿ ಬ್ರಾಹ್ಮಣ ಮುಖಂಡರಾದ ಎಸ್.ಬಿ. ವಾಸುದೇವ ಮೂರ್ತಿ, ವಿಕಾಸ್ ಶಾಸ್ತ್ರಿ, ರಘು ಪ್ರಮೋದಾಚಾರ್, ಬುಜಂಗ ರಾವ್ ನಾಗಭೂಷಣ್ ಆಚಾರ್ ಇದ್ದರು.

ಅರ್ಥಪೂರ್ಣ ಹುಟ್ಟುಹಬ್ಬ ಆಚರಣೆ...



ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ನಾಗವಾಲ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರೂ ಆದ ಗ್ರಾಪಂ ಸದಸ್ಯ ನರೇಂದ್ರ ಅವರ ಹುಟ್ಟುಹಬ್ಬವನ್ನು ಮೈಸೂರಿನ ಸೇವಯಾನ ವೃದ್ಧಾಶ್ರಮಕ್ಕೆ ಆಹಾರ ಸಾಮಗ್ರಿಗಳ ಕಿಟ್ ನೀಡುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ವೇಳೆ ಸೇವಯಾನ ವೃದ್ಧಾಶ್ರಮ ಟ್ರಸ್ಟ್‌ನ ಪ್ರಭಾ, ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಹಿನಕಲ್ ಮಂಜು, ಮಾಜಿ ಉಪಾಧ್ಯಕ್ಷರಾದ ಧನಗಳ್ಳಿ ಪ್ರವೀಣ್, ಪೈಲ್ವಾನ್ ನವೀನ್‌ಕುಮಾರ್, ಚಾಮುಂಡೇಶ್ವರಿ ಕ್ಷೇತ್ರ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಎಸ್‌ಆರ್‌ಎಸ್ ವಿನೋದ್, ಚಾಮುಂಡೇಶ್ವರಿ ಬ್ಲಾಕ್ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಎಸ್‌ಆರ್‌ಎಸ್ ಮಂಜು, ಕಾಂಗ್ರೆಸ್ ಮುಖಂಡ ಬಂಡಿಪಾಳ್ಯ ವಿಜಯ್‌ಕುಮಾರ್, ಪಾಪಯ್ಯ ಮತ್ತಿತರರಿದ್ದರು.



ಮೈಸೂರಿನ ಪಡುವಾರಹಳ್ಳಿಯ ಶ್ರೀ ಜೋಡಿ ಮಾರಮ್ಮ ಸೇವಾ ಸಮಿತಿ ವತಿಯಿಂದ ಶ್ರೀ ರಾಮಮಂದಿರದಲ್ಲಿ ರಾಮನವಮಿ ಪ್ರಯುಕ್ತ ಶ್ರೀ ರಾಮ ದೇವರಿಗೆ ವಿಶೇಷ ಅಲಂಕಾರ ಮಾಡಿ ಸಾರ್ವಜನಿಕರಿಗೆ ಮಜ್ಜಿಗೆ ಮತ್ತು ಪಾನಕ ವಿತರಿಸಲಾಯಿತು. ಈ ವೇಳೆ ರಾಮಣ್ಣ, ನಟರಾಜ, ಜೆ.ಯೋಗೇಶ್, ಎನ್.ಬೆಟ್ಟೇಗೌಡ, ದೇವರಾಜು, ಕಿಟ್ಟಿ ಸೋಮು, ದೇವೇಂದ್ರ, ದಿನೇಶ್ ಗೌಡ, ಗಿರೀಶ್, ಶೇಷಾದ್ರಿ ಇನ್ನಿತರರು ಉಪಸ್ಥಿತರಿದ್ದರು.



ಶ್ರೀ ರಾಮನವಮಿ ಪ್ರಯುಕ್ತ ಮೈಸೂರಿನ ಹನುಮಂತನಗರದಲ್ಲಿರುವ ಶ್ರೀ ವೀರಾಂಜನೇಯ ಸ್ವಾಮಿ ದೇವಸ್ಥಾನದ ವತಿಯಿಂದ ಪಾನಕ, ಮಜ್ಜಿಗೆ, ಕೋಸಂಬರಿ ವಿತರಿಸಲಾಯಿತು. ಈ ವೇಳೆ ಸುರೇಶ್, ಮಂಜುನಾಥ್, ರಾಜೇಗೌಡ, ಕಾಳೇಗೌಡ, ಸೂರ್ಯನಾರಾಯಣ ರೆಡ್ಡಿ ಇನ್ನಿತರರು ಉಪಸ್ಥಿತರಿದ್ದರು.



ಮೈಸೂರು ಮಂಚೇಗೌಡನಕೊಪ್ಪಲಿನ ಅಭಿಷೇಕ್ ವೃತ್ತದ ಬಳಿ ಬಿಜೆಪಿ ನಗರ ಕಾರ್ಯದರ್ಶಿ ಪುನೀತ್ ಹಾಗೂ ಸ್ನೇಹಿತರು ಶ್ರೀ ರಾಮನವಮಿ ಆಚರಿಸಿ, ಸಾರ್ವಜನಿಕರಿಗೆ ಮಜ್ಜಿಗೆ, ಪಾನಕ ವಿತರಿಸಿದರು.


ಭ್ರಷ್ಟ ಕಾಂಗ್ರೆಸ್ ಸರ್ಕಾರದ
ಬೆಲೆ ಏರಿಕೆ
ಮುಸ್ಲಿಂ ಓಲೈಕೆ
ದಲಿತರ ಹಣ ಲೂಟಿ
ವಿರುದ್ಧ
BJP
ರಾಜ್ಯಾದ್ಯಂತ
ಜನಾಕ್ರೋಶ
ಯಾತ್ರೆ
ಹಂತ 1
ದಿನಾಂಕ : 07-04-2025
ಮೈಸೂರು & ಚಾಮರಾಜನಗರ
ದಿನಾಂಕ : 08-04-2025
ಮಂಡ್ಯ ಹಾಸನ
ದಿನಾಂಕ : 09-04-2025
ಕೊಡಗು ಮಂಗಳೂರು
ದಿನಾಂಕ : 10-04-2025
ಉಡುಪಿ ಚಿಕ್ಕಮಗಳೂರು
ದಿನಾಂಕ : 11-04-2025
ಉತ್ತರಕನ್ನಡ
ದಿನಾಂಕ : 12-04-2025
ಶಿವಮೊಗ್ಗ
ಹಂತ 2
ದಿನಾಂಕ : 16-04-2025
ಬೆಳಗಾವಿ ಹುಬ್ಬಳ್ಳಿ
ದಿನಾಂಕ : 17-04-2025
ಬಾಗಲಕೋಟೆ ವಿಜಯಪುರ
ದಿನಾಂಕ : 18-04-2025
ಕಲ್ಬುರ್ಗಿ ಬೀದರ್
ಹಂತ 3
ದಿನಾಂಕ : 21-04-2025
ದಾವಣಗೆರೆ ಹಾವೇರಿ
ದಿನಾಂಕ : 22-04-2025
ಗದಗ ಕೊಪ್ಪಳ
ದಿನಾಂಕ : 23-04-2025
ಯಾದಗಿರಿ ರಾಯಚೂರು
ದಿನಾಂಕ : 24-04-2025
ಬಳ್ಳಾರಿ ವಿಜಯನಗರ
ದಿನಾಂಕ : 25-04-2025
ಚಿತ್ರದುರ್ಗ ತುಮಕೂರು
ಹಂತ 4
ದಿನಾಂಕ : 27-04-2025
ಕೋಲಾರ ಚಿಕ್ಕಬಳ್ಳಾಪುರ
ದಿನಾಂಕ : 03-05-2025
ಬೆಂಗಳೂರು ಮಹಾನಗರ ಬೆಂಗಳೂರು ಗ್ರಾಮಾಂತರ ರಾಮನಗರ
ಬನ್ನಿ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಾಗವಹಿಸಿ - ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ತೊಲಗಿಸೋಣ
ಪ್ರಕಟಣೆ: ಸಮಸ್ತ ಬಿಜೆಪಿ ಕಾರ್ಯಕರ್ತರು